

ತೊದಲ್ನುಡಿ ಗ್ರಂಥಮಾಲೆ—ನುಡಿ ೧೧.

ಸನ್ಯಾಸಿಯ ಸೋಗಿನಲ್ಲಿ

(ಸಾಮಾಜಿಕ ಕಾದಂಬರಿ)

ಕೆ. ಕೆ. ಶೆಟ್ಟಿ

ಕಿರಿಯರ ಪ್ರಪಂಚ, ಉಡುಪಿ.

...ೋಡುವು.
...ಾಗುವ ಕಥಾ
...ಾತಿಗೆ ವಿಶೇಷ

ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ.

ಮುದ್ರಕರು:

ನವಯುಗ ಪ್ರೆಸ್,

ಉಡುಪಿ.

ವಿಕ್ರಯಾಧಿಕಾರಿಗಳು:

ನವಭಾರತ ಪುಸ್ತಕ ಭಂಡಾರ,

ಉಡುಪಿ.

ಮುನ್ನುಡಿ

ಕಥಾಕಾದಂಬರಿಗಳು ಹಿಂದೆ ನಮ್ಮಲ್ಲಿ ಸಾಧಾರಣವಾಗಿ ವಾಜೀಕರಣ ಪ್ರಯೋಗಗಳಾಗಿದ್ದವು. ಇಂದೂ ಅಂಥವೆಷ್ಟೋ ಇವೆ. ಆದರೆ ಕಥೆಯನ್ನು ಬರೆಯುವುದರ ಉದ್ದೇಶವು ಬರೇ ಕಾಮೋನ್ಮಾದವನ್ನು ರೇಗಿಸುವುದು ಎಂದು ಯಾವ ವಿಚಾರಶೀಲರೂ ಒಪ್ಪಲಿಕ್ಕಿಲ್ಲ. ಅಂಥಾ ಕಥಾಪುಸ್ತಕಗಳೂ ಬಿಸಿ ಬಿಸಿ ದೋಸೆಯಂತೆ ಮಾರಾಟವಾಗುತ್ತವೆಂಬುದು ನಿಜ. ಆದರೆ ಸಂತೆಯ ರೀತಿಯೇ ಬೇರೆ, ಸಾಹಿತ್ಯದ ನೀತಿಯೇ ಬೇರೆ.

ಬರಹದಲ್ಲಿ ಆಕರ್ಷಣವಿರಬೇಕಲ್ಲವೆ? ಎಂದು ಯಾರಾದರೂ ಕೇಳಬಹುದು. ಅದಕ್ಕೊಂದು ಪ್ರಶ್ನೆ. ಆಕರ್ಷಣವೊಂದೇ ಧ್ಯೇಯವಾದ ಪಕ್ಷಕ್ಕೆ ಅದನ್ನು ಅಸ್ಥಿಮಾಂಸಪ್ರಪಂಚದಲ್ಲಿಯೇ ವಾಸ್ತವಿಕವಾಗಿ ಅನುಭವಿಸಬಹುದಷ್ಟೆ? ವಸ್ತು ವಿಷಯವನ್ನೂ ಪುಸ್ತಕಕ್ಕೊಯ್ಯುವುದಕ್ಕಿಂತ ವಸ್ತುವಿನಲ್ಲೇ ಭೋಗಿಸಿ ಸುಖಿಸುವುದುತ್ತಮವಲ್ಲವೆ?

ಸಂತೆಯ ಕಥೆಗಳು ನಿತ್ಯಜೀವನದಲ್ಲಿರುವ ಅಭಾವವನ್ನು ಪೂರೈಸುವ ಪ್ರಯತ್ನಗಳಾಗಿರುವದೂ ಉಂಟು. ಮನೆಯಲ್ಲಿಲ್ಲದ್ದನ್ನು ಮನಸ್ಸಿನಲ್ಲಿಟ್ಟುಕೊಂಡು ರಮಿಸುವ ಹಾದಿ ಅದು. ಆ ಹಾದಿಯಲ್ಲಿ ಅಂಥ ಅಭಾವದ ಪೂರೈಕೆ ಎಷ್ಟರ ಮಟ್ಟಿಗೆ ಆಗುತ್ತದೋ, ಅಷ್ಟರ ಮಟ್ಟಿಗೇ ಅದಕ್ಕೆ ಪ್ರೋತ್ಸಾಹವೂ ದೊರೆಯುವದುಂಟು; ಮತ್ತು ಅಂಥಾ ಪೂರೈಕೆಯನ್ನೂ ಕೋರುವವರೇ ಹೆಚ್ಚುಮಂದಿ ಇರುವುದರಿಂದ ಅಂಥಾ ಪುಸ್ತಕಗಳಿಗೂ ಸಂತೆ ಬೀದಿಯಲ್ಲಿ ಹೆಚ್ಚಿನ ಪ್ರೋತ್ಸಾಹವಿದೆ. ಆದರೆ ಸಂತೆಯ ಅಳತೆ ಕೋಲನ್ನು ಸಾಹಿತ್ಯದ ಸಾಮಗ್ರಿಗಳಿಗೆ ಹಚ್ಚಿನೋಡುವುದು ನ್ಯಾಯವಲ್ಲವಷ್ಟೆ? ಹೀಗಿರುವಾಗ, ಹೆಚ್ಚು ಮಾರಾಟವಾಗುವ ಕಥಾಪುಸ್ತಕವು ಹೆಚ್ಚು ಯೋಗ್ಯವಾಗಿಯೂ ಇದೆ ಎಂಬ ಮಾತಿಗೆ ವಿವೇಚನೆಯು ಸಹಿ ಹಾಕುವುದಿಲ್ಲ

ಸಂಸಾರದ ಸಂಗತಿಯು ಪುಸ್ತಕದ ಪುಟಗಳನ್ನು ಸೇರಬೇಕಾದರೆ ಅದು ಪುಸ್ತಕರಚನೆಯ ತತ್ವಗಳನ್ನೊಳಗೊಂಡಿರಬೇಕು. ಕಥಾಕಾದಂಬರಿ ನಾಟಕಗಳು ಸಮಾಜ ಸಂಸಾರಗಳ ನಿತ್ಯಜೀವನದ ರೂಪವೊಂದನ್ನೇ ಅಲ್ಲದೆ, ಅವುಗಳ ಅಂತರಾಳವನ್ನೂ ಹೊಳೆಸುವವಾಗಿರಬೇಕು ಯಾಕೆಂದರೆ ಜೀವನದ ಆಧಾರ ಉತ್ತೇಜಕಗಳು ಇರುವದು ಆ ಅಂತರಾಳದಲ್ಲಿಯೇ·ಪರಿಸ್ಥಿತಿಯಲ್ಲಿಯೇ. ಸಾಮಾನ್ಯ ಮನುಷ್ಯನು ಇವುಗಳ ಕೈಯ್ಯಲ್ಲೊಂದು ಬರೇಸೂತ್ರದ ಗೊಂಬೆಯೇ ಆತನು ಪೂರ್ಣ ಸ್ವತಂತ್ರನಲ್ಲ.

ಆದರೂ ಪರಿಸ್ಥಿತಿಯನ್ನು ಇದುರಿಸಬಲ್ಲ; ಹೊಸಪರಿಸ್ಥಿತಿಯನ್ನು ರಚಿಸಬಲ್ಲ; ಆ ಅಂತರಾಳವನ್ನು ಕೆಣಕಬಲ್ಲ; ಅದನ್ನು ಸುಧಾರಿಸಬಲ್ಲ ಎಂಬ ಧರ್ಮಶಾಸ್ತ್ರಗಳ ಮಾತೂ ನಿಜವೇ. ಅದಕ್ಕೆ ಹಲವು ಸಾಧು ಸತ್ಪುರುಷರ ನಿರ್ಮಲ ಜೀವನವೂ ಪ್ರತ್ಯಕ್ಷಪ್ರಮಾಣವಾಗಿದೆ ಆದರೆ ತನ್ನ ಪರಿಸ್ಥಿತಿಯೇ ತನ್ನ ವೈರಿಯಾಗಿದೆ ಎಂಬುದರ ಎಚ್ಚರಿಕೆ ಉಂಟಾದ ಮೇಲಲ್ಲವೆ ಅವನದಕ್ಕೆ ಇದಿರಾಗಿ ಅದನ್ನು ಬಹು ಜನರ ಹಿತಕ್ಕಾಗಿ ಅನುಕೂಲಪಡಿಸಿಕೊಳ್ಳಬೇಕು? ಅಥವಾ ಸ್ವಹಿತಕ್ಕಾಗಿಯಾದರೂ ಅದನ್ನು ಮೀರಿ ತೇಲಿಕೊಳ್ಳಬೇಕು? ಆದುದರಿಂದ **ಎಚ್ಚರಿಕೆ ಇದೇ ಸುಧಾರಣೆಯ ಮೂಲ.** ಹೀಗಿರುವಾಗ ಎಚ್ಚರಿಕೆಯನ್ನುಂಟುಮಾಡದ ಪುಸ್ತಕಗಳು ಬುದ್ಧಿಯ ವ್ಯಭಿಚಾರದ ಸಾಕ್ಷ್ಯಗಳೇ ಎನ್ನಬಹುದಲ್ಲವೆ?

ಈಗ ಪುಸ್ತಕಗಳಲ್ಲಿ ಮೋಹಗೊಳಿಸುವ ಶಕ್ತಿಯೊಂದೇ ಅಲ್ಲ, ಎಚ್ಚರಗೊಳಿಸುವ ಶಕ್ತಿಯೂ ಇರಬೇಕು ಎಂದಾಯಿತಲ್ಲವೆ? **ಯೋಗ್ಯ ಪುಸ್ತಕವು ಎಚ್ಚರ ಕೊಡುವಂತೆ ಮೋಹಿಸಬೇಕು; ಅಥವಾ ತನ್ನ ಮೋಹಜಾಲದಲ್ಲಿ ಹಿಡಿದು ಎಚ್ಚರಗೊಳಿಸಬೇಕು.**

ಆದರೆ ಎಚ್ಚರಿಕೆಯೊಂದೇ ಸಾಲದು ಅಷ್ಟೇ ಅಲ್ಲದೆ, ಒಬ್ಬಿಬ್ಬರ ಎಚ್ಚರಿಕೆಯಿಂದ ಮಾತ್ರ ಸಮಾಜವು ಮಾರ್ಪಡಲಿಕ್ಕಿಲ್ಲ ಎಂಬುದಕ್ಕೆ ಶಿವಾನಂದನ ಎಚ್ಚರಿಕೆಯೇ ಸಾಕ್ಷಿ ಆತನು ಎಚ್ಚರವಾಗಿಯೇ ಇದ್ದಾನೆ. ಆದರೂ ಯಂತ್ರವತ್ ತನ್ನಲ್ಲಿ ದುಷ್ಟ ಲೀಲೆಗಳನ್ನೂ ನಡೆಸುತ್ತಿದ್ದಾನೆ. ಅವನಿಗೆ ತನ್ನಿಂದಾಗುತ್ತಿರುವ ಅನಾಹುತಗಳೆಲ್ಲ ಗೊತ್ತು, ಆದರೂ

ರೂಢಿಯಿಂದ ಬಂದ ಪರಿಸ್ಥಿತಿಯು ಅವನ ಮೇಲೇರಿ ಕೂತುಬಿಟ್ಟದೆ ಅದನ್ನು ಅವನು ಕಿತ್ತೊಗೆದು ಸ್ವತಂತ್ರನಾಗಲಾರ. ಅವನ ಎಚ್ಚರಿಕೆಯಲ್ಲಿ ಲೋಪವಿಲ್ಲ. ಆದರೆ ಅದಕ್ಕೆ ತಕ್ಕಂತೆಯೇ ವರ್ತಿಸಲಿಕ್ಕೆ ಅವನಲ್ಲಿ ಸಾಕಷ್ಟು ಮನೋಬಲ ಇಚ್ಛಾಶಕ್ತಿಗಳಿಲ್ಲ. ಸಮಾಜರೂಢಿಗಳೇ ತನ್ನನ್ನು ಹಾಗೆ ಮಾಡಿಟ್ಟಿವೆ ಎಂಬುದು ಅವನಿಗೆ ಗೊತ್ತು. ಆದರೆ ಅವುಗಳ ಹಿಡಿತದಿಂದ ಬಿಡಿಸಿಕೊಳ್ಳಲಾರ ಇಷ್ಟು ಎಚ್ಚರಿಕೆಯಾದರೂ ಉಳ್ಳ ಸ್ವಾಮಿಗಳೇ ಆಗಲಿ, ಭಕ್ತರೇ ಆಗಲಿ, ನಮ್ಮಲೆಷ್ಟು ಮಂದಿ ಇದ್ದಾರೆ? ಲಲಿತೆಯು, ಪಾಪ, ಅಂಥಾ ಲಕ್ಷೋಪಲಕ್ಷ ಬಡ ಜೀವಿಗಳ ಪ್ರತಿನಿಧಿ. ಅಂಥವರ ಗೋಳನ್ನು ನಿರ್ಮೂಲಗೊಳಿಸಲಿಕ್ಕೆ ಶಿವಾನಂದನ ಎಚ್ಚರಿಕೆ ಒಂದೇ ಸಾಲದು. ಯಾಕೆಂದರೆ ಆತನ ಕ್ಲೈಬ್ಯವು ಆತನ ಎಚ್ಚರಿಕೆಯನ್ನೂ ಹೂತುಹಾಕಿದೆ. ನಮ್ಮಲ್ಲಿ ಅಂಥಾ ಎಚ್ಚರಿಕೆಯ ಬಾಯಾಡಿಗಳು ಎಷ್ಟು ಜನರಿಲ್ಲ! ಮಾತು ಮಾರುದ್ದ, ಕೆಲಸಕ್ಕೆ ಕಾಲುದ್ದ!! ಮಠದ ಹೊರಗಿನ ಶವಗಳೇ ಮಠದ ಒಳಗಿನ ಶಿವಾನಂದನಿಗೆ ಆಧಾರ. ಮತ್ತು ಕೈಲಾಗದ ಶಿಷ್ಯರಿಗೆ ಬೈಲಾಟದ ಗುರುಗಳೇ ಗತಿ! ಈ ಅವಸ್ಥೆಯನ್ನು ಮಾಡಿದವರಾರು, ತಿದ್ದುವವರಾರು? ಇದನ್ನು ಈ ಕಾದಂಬರೀ ದರ್ಪಣವು ಹೊಳೆಸುವ ಸಮಾಜ ಪ್ರತಿಬಿಂಬವು ವಾಚಕರ ಎದೆ ಹೊಕ್ಕು ಉತ್ತರಿಸಲಿ.

ಪ್ರೇಮವಿದ್ಯಾಪೀಠ, ತುಂಗಭದ್ರಾ.
14—10-1937

ತಾರಾನಾಥ

ಪ್ರಕಾಶಕರ ನುಡಿ

ಬೌದ್ಧಧರ್ಮವು ಉದ್ಭವವಾಗುವ ವರೆಗೆ ಸನ್ಯಾಸವು ಈಗಿನಷ್ಟು ಪ್ರಚುರವಾಗಿರಲಿಲ್ಲವೆಂದು ತೋರುತ್ತದೆ. ಪ್ರಾಯಶಃ ಹಿಂದೂ ಸ್ಥಾನದಲ್ಲಿ ಧರ್ಮ ಪ್ರಚಾರಮಾಡುವ ಪದ್ಧತಿಯೂ ಆಗಲೇ ಉಂಟಾಯಿತೆನ್ನಬಹುದು. ಬೌದ್ಧ ಧರ್ಮದ ಬೆನ್ನುಗಡೆಯಿಂದ ಅದರ ಪ್ರಕಾರಾಂತರವಾದ ಬೇರೆ ಧರ್ಮಗಳೂ ತದ್ವಿರುದ್ಧವಾದ ವೈದಿಕ ಧರ್ಮಗಳೂ ತಲೆಯೆತ್ತಿದರೂ ಧರ್ಮವನ್ನು ಹಾಗೂ ತತ್ವಗಳನ್ನು ಜನಸಾಮಾನ್ಯರಲ್ಲಿ ಪ್ರಚಾರಮಾಡುವ ಮಟ್ಟಿಗೆ ಬೌದ್ಧ ಧರ್ಮದ ಪದ್ಧತಿಯನ್ನೇ ಅನುಸರಿಸಿದವು.

ಧರ್ಮವನ್ನು ಪ್ರಚಾರಮಾಡಲು ಧರ್ಮಪ್ರವರ್ತಕರು ದೇಶ ವಿದೇಶಗಳಲ್ಲಿ ಸಂಚಾರಮಾಡಬೇಕಾಗಿ ಬಂತು. ನವೀನವಾದ ಒಂದು ಧರ್ಮವನ್ನು ಉನ್ನತಿಗೆ ತರುವ ಕಾರ್ಯವು ಕಂಟಕವಿಹೀನವಾಗಿದ್ದಿಲ್ಲ. ಹೀಗಾಗಿ ಆ ಕೆಲಸಕ್ಕೆ ಕೈಹಚ್ಚುವವರು ಎಂತಹ ಭಯಂಕರ ಪರಿಸ್ಥಿತಿಗಳನ್ನು ಎದುರಿಸಬೇಕಾಗುವುದೆಂದು ಹೇಳಲಾಸಲ್ಲ. ಅಂಥವರು ಹೆಂಡತಿ-ಮಕ್ಕಳು; ಮನೆ-- ಬದುಕು; ಸಂಸಾರ---ಪರಿವಾರ ಇವುಗಳೊಡನೆ ಸಂಬಂಧವಿಟ್ಟುಕೊಳ್ಳುವುದಕ್ಕೆ ಶಕ್ಯವಿಲ್ಲ. ಅದಕ್ಕಾಗಿ ಅವರು ಸರ್ವ ಸಂಸಾರವನ್ನೇ ತೊರೆದು ತಮ್ಮ ತತ್ವಗಳ ಪ್ರಚಾರವನ್ನು ಕೈಕೊಳ್ಳುತ್ತಿದ್ದರು. ಅಂಥವರು ಸನ್ಯಾಸದೀಕ್ಷೆಯನ್ನು ತೆಗೆದುಕೊಂಡು ತಮ್ಮ ತತ್ವಗಳಿಗಾಗಿಯೇ ಜೀವನವನ್ನು ಧಾರೆಯೆರೆದು ಕೊಡುತ್ತಿದ್ದರು ಬೌದ್ಧರ ಈ ರೀತಿಯನ್ನೇ ಜೈನರೂ, ಅನಂತರ ಶಂಕರಾಚಾರ್ಯರೇ ಮೊದಲಾದ ವೈದಿಕ ಧರ್ಮಾಚಾರ್ಯರೂ ಅವರ ಅನುಯಾಯಿಗಳೂ ಅನುಸರಿಸಿದರು. ಇವರು ತಮ್ಮ ತತ್ವಗಳ ಪ್ರಚಾರಕ್ಕಾಗಿ ತಮ್ಮಂತಹ ಸನ್ಯಾಸಿಗಳ ಅಂದರೆ ತ್ಯಾಗಿಗಳ ಪೀಳಿಗೆಯನ್ನು ಸೃಜಿಸಿಹೋದರು. ಜೀವನದ ಅನಿವಾರ್ಯ ಅವಶ್ಯಕತೆಗಳನ್ನು (ಎಂದರೆ ಅನ್ನ ವಸ್ತ್ರಗಳನ್ನು) ಇವರು ದಾನಿಗಳಿಂದ ಪಡೆದು ಉಳಿದ ಐಶ್ವರ್ಯಗಳ ಗೊಡವೆಗೆ ಹೋಗದೆ ಒತ್ತರದಿಂದ ಪ್ರಚಾರ ಕಾರ್ಯವನ್ನು ನಡೆಸುತ್ತಾ ಬಂದರು.

ದಿನ ಹೋದಂತೆ ಆಯಾ ಧರ್ಮಗಳು ರೂಢಮೂಲವಾಗಿ ಪ್ರಚಾರಕರಿಗೆ ಅಷ್ಟೊಂದು ತೊಡಕುಗಳಿಲ್ಲದಾಗಲು, ಈ ಸನ್ಯಾಸಿಗಳ

ಇಲ್ಲವೆ ಭಿಕ್ಷು (ಬೇಡಿ ತಿನ್ನುವವರ) ಗಳ ದೃಷ್ಟಿಯು ಸಾಂಸಾರಿಕ ಜೀವನದ ಸೌಖ್ಯಗಳ ಕಡೆಗೆ ನೈಸರ್ಗಿಕವಾಗಿ ಹರಿಯಿತು. ಇಷ್ಟು ಹೊತ್ತಿಗೆ ನವೀನ ಧರ್ಮದ ಬಿಸಿಲು ಕುಂದಿ ಪುನಃ ಜನರಲ್ಲಿ ಧರ್ಮಾಂಧತೆಯು ಒಡಮೂಡಿತು. ಧರ್ಮಾಂಧರಾದ ಸಾಮಾನ್ಯರಿಂದ 'ಸರ್ವತಂತ್ರ ಸ್ವತಂತ್ರ'ರಾದ ಈ 'ಪರಮ ಹಂಸ'ರು ಧರ್ಮ ಪ್ರಚಾರ ಸೌಕರ್ಯದ ನೆವನದಿಂದ ಹೇರಳ ದ್ರವ್ಯವನ್ನು ಪಡೆದುಕೊಂಡು ಮಠಾದಿಗಳನ್ನು ಸಮೃದ್ಧವಾಗಿ ಮಾಡಿದರು: ದ್ರವ್ಯವೊಂದು ದೊರತುದೇ ತಡ; ಸನ್ಯಾಸಿಗಳ ಅವಸ್ಥೆ ಸಂಸಾರಿಗಳಿಗಿಂತಲೂ ಕೀಳಾಯಿತು. ದ್ರವ್ಯ ಬಲದಿಂದ ಸಂಸಾರಿಗಳ ಸೌಖ್ಯಗಳೆಲ್ಲಾ ಸನ್ಯಾಸಿಗಳಿಗೆ ದೊರೆಯುಬಲ್ಲುದು. ಸಂಸಾರಿಗಳ ಹಾಗೆ ಜವಾಬುದಾರಿಯು ಮಾತ್ರ ಇವರಿಗಿಲ್ಲ! ಇದರಿಂದ ಇವರಿಗೆ 'ಅರಸರ ಅಂಕೆಯಿಲ್ಲ, ದೈವದ ಕಾಟವಿಲ್ಲ' ಎಂಬಂತಾಯಿತು. ಸಂಸಾರಿಯಾದವನು ಎಷ್ಟೇ ಧನಾಢ್ಯನಿದ್ದರೂ ತನ್ನ ಸಂಸಾರದ ಸುಖ ದುಃಖಗಳಿಂದ ಅಭಿಹತನಾಗುತ್ತಾ ಇರುತ್ತಾನೆ. ಸನ್ಯಾಸಿಗಾದರೆ ಸಂಸಾರವೇ ಇಲ್ಲ. ಸಂಸಾರದ ಸುಖಗಳು ಎಲ್ಲಾ ಇವೆ. ಅದರಿಂದ ಅವನು ಮದಾಂಧನೂ ನಿರ್ಘೃಣನೂ ನಿರ್ಲಜ್ಜನೂ ಆಗಿದ್ದಾನೆ ಹೀಗೆ ಸನ್ಯಾಸದ ಸಂಸ್ಥೆಯು ರಸಾತಲಕ್ಕಿಳಿದಿದೆ. ಈ ರಸಾತಲಗಾಮಿ ಸನ್ಯಾಸದ ಒಂದು ಚಿತ್ರವಿದು ಸನ್ಯಾಸಿಯ ಸೋಗಿನಲ್ಲಿ!

ಹಿಂದೂಸಮಾಜದಲ್ಲಿ ಮಾತ್ರವಲ್ಲ, ಇಡೀ ಜಗತ್ತಿನ ಸನ್ಯಾಸ ಸಂಸ್ಥೆಯೇ ಹೀಗೆ. ಅದಕ್ಕಾಗಿ ನಮ್ಮ ಸನ್ಯಾಸಿಗಳನ್ನು ದೂರುವುದು ಸರಿಯಲ್ಲ. ಒಂದೇ ಸನ್ಯಾಸ ಸಂಸ್ಥೆಯನ್ನೇ ನಿರ್ಮೂಲಿಸಬೇಕು; ಇಲ್ಲವೇ ಸನ್ಯಾಸಿಗಳನ್ನು ಮುಂಚಿನ ಹಾಗೆಯೇ ಭಿಕ್ಷುಗಳನ್ನಾಗಿ ಮಾಡಬೇಕು ಸಮಾಜವು ಈ ಎರಡರಲ್ಲಿ ಒಂದನ್ನು ಆಯ್ದುಕೊಳ್ಳಬೇಕಾಗಿದೆ.

ಈ ಕತೆಯು ಮೊದಲು 'ನವಯುಗ'ದಲ್ಲಿ 'ಭಿಕಾರಿಣಿ' ಎಂಬ ಹೆಸರಿನಿಂದ ಪ್ರಕಟವಾಗಿದೆ, ವಾಚಕರು ಅದರ ಪ್ರತಿಗಳನ್ನು ಮತ್ತೆ ಕೋರಿದ್ದರಿಂದ ಪುಸ್ತಕರೂಪದಲ್ಲಿ ಈ ಹೊಸ ನಾಮಕರಣದಿಂದ ಪ್ರಕಟಿಸಿದ್ದೇವೆ. ಕನ್ನಡಿಗರು ನಮ್ಮ ಈ ವರೆಗಿನ ಪ್ರಕಟಣೆಗಳಂತೆ ಇದಕ್ಕೂ ಪ್ರೋತ್ಸಾಹಿಸಲು ಹಿಂದೆಗೆಯಲಾರರೆಂದು ನಂಬುತ್ತೇವೆ.

ಉಡುಪಿ
23-10-37.

ಪ್ರಕಾಶಕರು

ಅನುಕ್ರಮಣಿಕೆ

ಅಧ್ಯಾಯ ೧

"ಅಮ್ಮಾ ನನ್ನನ್ನು ನರಕಕ್ಕೆಳೆಯಬೇಡ!"

ರಾತ್ರಿ ಸುಮಾರು ಒಂಭತ್ತು ಘಂಟೆ ಸಮಯ. ಶಿವಪುರದ ಕೋರ್ಟು ರಸ್ತೆಗೆ ತಾಗಿಕೊಂಡಿರುವ ಮಧ್ಯತರಗತಿಯ ಮನೆಯೊಂದರ ಕೋಣೆಯಲ್ಲಿ ಯೌವನದ ಹೊಸ್ತಿಲಿಗೆ ಕಾಲಿಡದೆ ಇನ್ನೂ ಬಾಲಿಕೆಯೇ ಆಗಿರುವ ಹುಡುಗಿಯೊಬ್ಬಳು ಕುರ್ಚಿಯಲ್ಲಿ ಕುಳಿತು ಮೇಜಿಯ ಮೇಲೆ ತಲೆ ಬಗ್ಗಿಸಿಟ್ಟು ಗಾಢ ಚಿಂತಾಕ್ರಾಂತಳಾಗಿ ಉಕ್ಕಿ ಉಕ್ಕಿ ಬರುವ ದುಃಖವನ್ನು ನಿಟ್ಟುಸಿರಿಂದಲೇ ನಿವಾರಿಸಲೆತ್ನಿಸುತ್ತಿದ್ದಳು. ಎಷ್ಟು ತಡೆದರೂ ನಿಲ್ಲಲೊಪ್ಪದೆ ಕಣ್ಣೀರು ಒಸರಿ ಬಂದು, 'ಟೇಬ್ಲ್ ಲೇಂಪಿ'ನ ಸ್ವಚ್ಛ ಬೆಳ್ದಿಂಗಳೋಪಾದಿಯ ಬೆಳಕಿನಲ್ಲಿ ಬಾಲಿಕೆಯ ಮೃದುಗಲ್ಲಗಳ ತಳದಲ್ಲಿ ಒಂದು ಕ್ಷಣ ಬೆಳ್ಳಿಯ ಬಿಂದುಗಳಾಗಿ ಶೋಭಿಸಿ ಆ ಮೇಲೆ ಮೇಜಿಗೆ ಜಾರಿಬಿದ್ದು ಕೊನೆಗೊಂಡುತ್ತಿತ್ತು. ಇಷ್ಟರಲ್ಲಿ, "ಲಲಿತಾ, ಮಲಗಬಾರದೇ? ಬೆಳಿಗ್ಗೆ ಬೇಗ ಎದ್ದು ಓದಿದರಾಗುವುದಿಲ್ಲವೇ?" ಎಂದು ಅಡಿಗೆ ಕೋಣೆಯ ಕಡೆಯಿಂದ ಬಂದ ಮಾತುಗಳು ಒಮ್ಮೆಯೇ ಬಾಲಿಕೆಯ ಚಿಂತಾಸರಣಿಯನ್ನು ತಡೆಗಟ್ಟಿಬಿಟ್ಟುವು. ಅವಳು ಅವಸರದಿಂದ ಕಣ್ಣುಗಳನ್ನು ಸೆರಗಿಂದೊರಸಿಕೊಂಡು, ಮೂಗಿಂದಿಳಿವ ನೀರನ್ನು ಕೈಬೆರಳುಗಳಿಂದೊತ್ತಿ ತೆಗೆದು ಒಂದೆಡೆಗೆಸೆದು, ಕೈಯ ಪುಸ್ತಕವನ್ನು ತೆರೆಯುವಷ್ಟರಲ್ಲಿ ಲೇಂಪಿನ ಬುರುಡೆಯು ಟಪ್ಪನೆ ಒಡೆದು ಮೇಲ್ಭಾಗವು ತುಂಡಾಗಿ ಬಿದ್ದು ದೀಪವು ಫಕ್ಕನೆ ದೊಡ್ಡದಾಯಿತು. ಲಲಿತೆಯು ಅದನ್ನೂದಿ ನೊಂದಿಸಿಬಿಟ್ಟಳು. ಕೂಡಲೆ ಅಡಿಗೆ ಮನೆಯಿಂದ ಪ್ರಾಯ ಮೀರಿದ ಸ್ತ್ರೀಯೊಬ್ಬಳು ಚಿಮುಣಿದೀಪ ಹಿಡಕೊಂಡು ಸರಸರನೆ ಲಲಿತೆಯ ಕೋಣೆಗೆ ಬಂದು, "ಏನೆ, ಏನಾಯಿತು ಲಲಿತ? ಮೊನ್ನೆತಾನೆ ತಂದ ಬುರುಡೆ ಇವತ್ತು ಒಡೆದುಹೋಯಿತೇ? ಎರಡು ದಿವಸಕ್ಕೊಂದು ಬುರುಡೆಗೆ ಎಲ್ಲಿಗೆ ಹೋಗುವುದು?" ಎಂದು ಧಡಕ್ಕನೆ ಚಿಮುಣಿಯನ್ನು ಮೇಜಿಯ ಮೇಲಿಟ್ಟು ಪರೀಕ್ಷಿಸುವಾಗ ಮೇಜಿಯ ಎದುರುಗಡೆಯ ಮೇಲ್ಭಾಗವು ಕಣ್ಣೀರಿಂದ ಒದ್ದೆಯಾಗಿರುವುದನ್ನು ಕಂಡು ತಳಮಳ

ಗೊಂಡು "ಏನೆ, ಇದು ಲಲಿತ? ಇಷ್ಟುರವರೆಗೂ ನೀನು ಕಣ್ಣೀರಿಡು ತ್ತಿದ್ದುದೇ?" ಎಂದು ಆತುರದಿಂದ ಕೇಳಿದಳು

ಮೊದಲೇ ಲಲಿತೆಯ ಹೃದಯವು ದುಃಖದಿಂದ ತುಂಬಿ ಹೋಗಿತ್ತು. ಹೊಸ ಬುರುಡೆಯು ಒಡೆದು ಹೋದುದರಿಂದ ಚಿಂತೆ ಯೊಂದಿಗೆ ಭೀತಿಯೂ ಕೂಡಿ ಪೀಡಿಸಹತ್ತಿದುವು. ವಿಶೇಷವಾಗಿ ಅದೊಂದು ಅಶುಭಸೂಚನೆ; ತನ್ನ ಮುಂದಿನ ಜೀವನದ ಮುನ್ನೆರಳೆಂದು ಅವಳು ತಲ್ಲಣಗೊಂಡಳು. ದುಃಖದ ವೇಗವು ಹಿರಿದಾಯಿತು. ಲಲಿತೆಯ ಹೃದಯಾಂತರಾಳದಲ್ಲಿ ದೊಡ್ಡ ವಿಪ್ಲವವೆದ್ದಿತು. ಅವಳು ತುಸು ಹೊತ್ತು ಸ್ತ್ರೀ ಸಹಜ ಸ್ಥೈರಣೆಯಿಂದ ಎಲ್ಲವನ್ನೂ ಒತ್ತಿಟ್ಟು, ವಿಸ್ಮಿತ ಮುಖಮುದ್ರೆಯಿಂದ ತನ್ನನ್ನು ದಿಟ್ಟಿಸಿ ನೋಡುವ ತಾಯಿಯ ಮುಖವನ್ನೇ ಕಣ್ಣು ಕಣ್ಣು ನೋಡುತ್ತಾ ನಿಂತುಬಿಟ್ಟಳು

"ಏನಿದು ಲಲಿತೆ? ಏನೆಂದು ಮನಬಿಚ್ಚಿ ಹೇಳಬಾರದೆ? ಹೀಗೇಕೆ ಕಣ್ಣೀರಿಟ್ಟು ಈ ಎಳೆ ಪ್ರಾಯದಲ್ಲೇ ನಿನ್ನೀ ಕೋಮಲ ದೇಹವನ್ನು ಕರಗಿಸಿಕೊಳ್ಳುವೆ? ಅಂತಹದೇನಾಗಿದೆ ನಿನಗೀಗ?" ಎಂಬ ತನ್ನ ತಾಯಿಯ ತುಸು ಬಿರುಸುಮಾತುಗಳು ಲಲಿತೆಯ ಕೋಮಲ ಹೃದಯಕ್ಕೆ ಚೆನ್ನಾಗಿ ನಾಟಿದುವು ದುಃಖಾವೇಗವು ಅವಳನ್ನು ಸಂಪೂರ್ಣವಾಗಿ ವಶಮಾಡಿಕೊಂಡುಬಿಟ್ಟಿತು "ಅಮ್ಮಾ ನನ್ನನ್ನಾ ನರಕಕ್ಕೆಳೆಯಬೇಡ!" ಎಂದು ಲಲಿತೆಯು ದೊಪ್ಪನೆ ತನ್ನ ತಾಯಿಯ ಕಾಲ ಮೇಲೆ ಬಿದ್ದು ಬಿಟ್ಟಳು.

ಮಗಳ ಈ ರೀತಿಯ ಗೋಳಿನಿಂದ ಸರ್ವಸಾಮಾನ್ಯ ಮಾತೆಯು ಒಡಲು ಕರಗಿ ನೀರಾಗುತ್ತಿತ್ತು. ಒಡನೆಯೇ ಅವಳು ಮಗಳನ್ನು ಹಿಡಿದೆತ್ತಿ ತಕ್ಕೈಸಿ ಸಂತೈಸಲೆತ್ನಿಸುತ್ತಿದ್ದಳು. ಆದರೆ ಲಲಿತೆಯ ತಾಯಿ ನಾಗಿಯು ಹಾಗೇನೂ ಮಾಡದೆ ಕ್ರುದ್ಧಳಾಗಿ ಕಾಲಡಿ ಬಿದ್ದಿರುವ ಮಗಳನ್ನು ಕಣ್ಣೆತ್ತಿ ಸಹ ನೋಡದೆ ದಡದಡನೆ ಅಡಿಗೆಕೋಣೆಗೆ ನಡೆದು ಬಿಟ್ಟಳು. ಅದೇಕೆ? ಇಷ್ಟೊಂದು ಕಠಿಣ ಮನಸ್ಸೇ ಅವಳದು? ಒಬ್ಬಳೇ ಮಗಳಾದ ಲಲಿತೆಯ ಮೇಲೆ ಅವಳಿಗೆ ಪ್ರೀತಿಯಿಲ್ಲವೇ? ಯಾರಾದರೂ ಅತ್ಯಂತ ಕನಿಕರಪಡಬೇಕಾದ ಪರಿಸ್ಥಿತಿಯಲ್ಲಿ ಹಡೆದ ತಾಯಿ, ನಾಗಿಯು ಇಷ್ಟೊಂದು ನಿಷ್ಠುರಳಾಗಿ ನಡೆಯಲು ಕಾರಣವೇನು?

ಆದೊಂದು ವಿದ್ಯಾವಮಾನವು ಅಡ್ಡಬರುವವರೆಗೆ ಲಲಿತೆಯು ನಾಗಿಯ ಪಂಚಪ್ರಾಣವಾಗಿದ್ದಳು. ಒಬ್ಬಳೇ ಮಗಳಾದ ಅವಳಿಗೆ ಒಂದಿಷ್ಟು ತಲೆ ನೋವಾದರೆ, ಸ್ವಲ್ಪವೇನಾದರೂ ನೆಗಡಿಯಾಯಿತೆಂದರೆ ನಾಗಿಯ ಪ್ರಾಣವೇ ಹಾರಿಹೋಗುವಂತಾಗುತ್ತಿತ್ತು. ಅವಳೆಲ್ಲಿಯಾದರೂ ಶಾಲೆಯಿಂದ ಬರುವುದು ತುಸು ವಿಳಂಬವಾದರೆ ನಾಗಿಗೆ ಕತ್ತುನೀಡಿ ಮಾರ್ಗದ ಬದಿ ನಿಂತು ಲಲಿತೆಯ ಬರವನ್ನು ಹಾರೈಸಿಕೊಂಡಿರುವುದೊಂದೇ ಕೆಲಸ. ಲಲಿತೆಯು ಎಷ್ಟು ತಿಂದರೂ ಎಷ್ಟು ಉಂಡರೂ ಸಾಲದವಳಿಗೆ. ಅವಳೇನು ಕೇಳಿದರೂ ನಾಗಿಯು ಏನಾದರೂ ಮಾಡಿ ತಂದುಕೊಡದೆ ಬಿಡಲಾರಳು. ತಾನು ಇಷ್ಟೊಂದು ಅಕ್ಕರೆಯಿಂದ ತನ್ನ ಪ್ರಾಣದ ಪ್ರಾಣವಾಗಿ ಸಾಕಿಕೊಂಡು ಬಂದ ತನ್ನ ಮಗಳು ಇನ್ನೂ ಎಳೆಯವಳಿರುವಾಗಲೆ ತನ್ನ ಮಾತು ಕೇಳಲಿಲ್ಲವೆಂದರೆ ಬೆಳೆದಾಗ ಕೇಳುವಳೇ? ತಾನೂ ಅವಳ ಹಿತಕ್ಕಾಗಿ ಪ್ರಾಣವನ್ನಾದರೂ ಅರ್ಪಿಸಲು ಸಿದ್ಧಳಿರುವಾಗ ಎಂದಾದರೂ ಅವಳಿಗೆ ಅಹಿತವಾಗುವ ಕೆಲಸ ಮಾಡುವೆನೇ? ಅವಳ ಹಿತವೇನೆಂದು ಇನ್ನೂ ಲೋಕಾನುಭವವಿಲ್ಲದ ಅವಳಿಗಿಂತಲೂ ತನಗೆ ಹೆಚ್ಚು ಗೊತ್ತಿಲ್ಲವೇ? ಅಂದ ಮೇಲೆ ಲಲಿತೆಯೂ ತಾನು ಹೇಳಿದಂತೆ ನಡೆಯದೆ ಅವಳ ಇಚ್ಛಾನುಸಾರ ನಡೆಯುವ ಛಲ ತೊಡುವುದೇ? ತನ್ನನ್ನಾ ನರಕಕ್ಕೆಳೆಯಬೇಡಮ್ಮಾ ಎಂದು ತನ್ನ ಕಾಲಿಗೆ ಬಿದ್ದು ಬೇಡಿಕೊಳ್ಳುವುದೇ? ತಾಯಿಯಾದವಳಿಗೆ ಇದಕ್ಕಿಂತ ದೊಡ್ಡ ಅಪಮಾನವಿದೆಯೇ? ಎಂದು ನಾಗಿಯು ಆಗ್ರಹಕ್ಕೆ ಮನಸ್ಸು ಕೊಟ್ಟು ತನ್ನ ಮಾತೃತ್ವವನ್ನು ಆ ಸಂದರ್ಭದಲ್ಲಿ ಮರೆತು ನಿರ್ದಯಳಾಗಿ ವರ್ತಿಸಿದಳು. ತನ್ನದೇ ಆದೊಂದು ದೃಷ್ಟಿಯಿಂದ ಯಾವುದಾದರೊಂದು ಆಗ್ರಹಕ್ಕೆ ಬಲಿಬಿದ್ದಿರುವ ಅಸಂಸ್ಕೃತ ಮನಸ್ಸಿಗೆ ತನ್ನ ಹೊರತು ಇನ್ನೊಂದು ದೃಷ್ಟಿಯಿದೆಯೆಂದು ತಿಳಕೊಳ್ಳುವ ವಿವೇಕವಾದರೂ ಎಲ್ಲಿಂದ ಬರಬೇಕು? ಅದರಲ್ಲೂ ತಾನೂ ಅತ್ಯಂತ ಪ್ರೀತಿ ಮಮತೆಗಳಿಂದ ಲಾಲಿಸಿ ಪಾಲಿಸಿ ಬೆಳೆಸಿದ ವಸ್ತುವು ತನ್ನ ಕೈಗೊಂಬೆಯಾಗಿ ಕುಣಿಯದೆ ಸ್ವಲ್ಪ ಸ್ವತಂತ್ರ ತೋರಿಸಿದರೆ ಉಂಟಾಗುವ ಆಕ್ರೋಶದ ಪರಿಣಾಮವಾಗಿ ಹಡೆದೊಡಲೇ ಮಕ್ಕಳ ಬದ್ಧ ದ್ವೇಷಿಯಾಗುವುದಿಲ್ಲವೇ? ಒಡಹುಟ್ಟಿದವರೇ ಕಡು ವೈರಿಗಳಾಗುವುದಿಲ್ಲವೇ?

ತುಸು ಹೊತ್ತು ನಾಗಿಯೂ ಕ್ರೊಧವಶಳಾಗಿ ತನ್ನನ್ನು ತಾನೇ ಮರೆತಿದ್ದಳು. ಆದರೆ ಅಡಿಗೆ ಕೋಣೆಗೆ ಕಾಲಿಟ್ಟೊಡನೆಯೇ ಅವಳ ಮಾತೃತ್ವವು, ಸಿಟ್ಟನ್ನು ಅಡಿಗೆ ಹಾಕಿ ಮೇಲೇರಿ ನಿಂತಿತು ಒಮ್ಮೆಯೇ ಅವಳ ಕುತ್ತಿಗೆಯ ನರಗಳು ಬಿಗಿದವು. ಕಣ್ಣೀರು ತುಂಬಿ ಬಂತು "ಛೆ! ನಾನೇನು ಮಾಡಿದೆ?" ಎಂಬ ಮಾತೃ ಹೃದಯದ ಸಹಜ ಪಶ್ಚಾತ್ತಾಪವು ಅವಳ ಮನಸ್ಸನ್ನು ಕಡಿಯ ಹತ್ತಿತು. ಅವಳು ತುಸು ಹೊತ್ತು ಯೋಚಿಸಿದಳು. ಸಂತಾಪವು ಮತ್ತಷ್ಟು ಹೆಚ್ಚಿತು. ಕೂಡಲೇ ಕಣ್ಣೀರೊರಸಿಕೊಂಡು ಲಗುಬಗೆಯಿಂದ ಲಲಿತೆಯ ಕೋಣೆಗೆ ನಡೆದಳು. ಆಗ ಲಲಿತೆಯ ಮುಖವು ಕೆಂಪೇರಿದ್ದಿತು. ಅವಳು ಕೊಣೆಯ ಕಿಟಕಿಯ ಹೊರಗೆ ದಿಗಂತದತ್ತ ನೋಡುತ್ತಾ ಗಂಭೀರವಾಗಿ ಅದೇನೋ ಯೋಚನಾಮಗ್ನಳಾಗಿದ್ದಳು. ನಾಗಿಯು ಅವಳ ಹತ್ತಿರ ಹೋಗಿ ತುಸು ಹೊತ್ತು ಮೌನವಾಗಿ ನಿಂತುಬಿಟ್ಟಳು. ಚಿಮಿಣಿಯ ದೀಪವು ಬೆಳಕಿಗಿಂತ ಹೊಗೆಯನ್ನೇ ಹೆಚ್ಚಾಗಿ ಕೋಣೆಯೊಳಗೆ ತುಂಬುತ್ತಿತ್ತು. ಗಾಳಿಯು ಸಾಕಷ್ಟು ಬಲವಾಗಿ ಬೀಸುತ್ತಿದ್ದುದರಿಂದ ಚಿಮಣಿಯ ಬೆಳಕು ತೀವ್ರ ಅಸ್ಥಿರಚಿತ್ತನಂತೆ ತಲ್ಲಣಿಸುತ್ತಿತ್ತು. ಕೋಣೆಯೊಳಗೆ ಬೆಳಕು ಕತ್ತಲೆಗಳು ಜಟ್ಟಿ ಕಾಳಗ ನಡಿಸಿ ಒಂದನ್ನೊಂದು ಅಡಿಗೆ ಹಾಕುತ್ತಾ ಯಾವುದೂ ಸ್ಥಿರವಿಜಯ ಪಡೆಯದೆ ತತ್ತರಿಸುವಂತೆ ತೋರುತ್ತಿತ್ತು. ಲಲಿತೆಗೆ ಇದಾವುದರ ಗೊಡವೇಯೇ ಇಲ್ಲದಿದ್ದರೂ ಅವಳ ಮನಸ್ಸು ಇಂತಹದೇ ಆದ ತೀವ್ರ ದ್ವಂದ್ವದ ರಂಗಸ್ಥಳವಾಗಿತ್ತು. ತಾನು ಮಾತೆಯ ಹಠದಂತೆ ನಡೆದು ಈ ಎಳೆ ಪ್ರಾಯದಲ್ಲೇ ಮಾನಗೆಟ್ಟು ಶರೀರ ವಿಕ್ರಯಿಸಿ ವ್ಯಾಪಾರ ನಡಿಸುವ ಸೂಳೆಯಾಗುವುದೇ? ಅಥವಾ ತನ್ನ ಅಧ್ಯಾಪಕಿಯ ಬೋಧನೆಯಂತೆ ಸ್ಕೂಲ್ ಫೈನಲಿನವರೆಗೆ ಕಲಿತು ಅಧ್ಯಾಪಕಿ ಅಥವಾ ಮಿಡ್ ವೈಫ್ ಆಗುವುದೇ? ಇವರಲ್ಲಾವುದು ಒಳ್ಳೇದೆಂದು ನಿಶ್ಚೈಸುವದರಲ್ಲೇನೂ ಕಷ್ಟವಿಲ್ಲ ಅದೊಂದು ಸಮಸ್ಯೆಯೇ ಅಲ್ಲ. ಆದರೆ ನಾಗಿಯ ಛಲದಿಂದಾಗಿ, ತಾನು ಹುಟ್ಟಿ ಬೆಳೆದ ಪರಿಸ್ಥಿತಿಯಿಂದಾಗಿ ಲಲಿತೆಗೆ ಅದೊಂದು ದೊಡ್ಡ ಸಮಸ್ಯೆಯಾಗಿ ಬಿಟ್ಟದ್ದಿತು. ಲಲಿತೆಯು ಇನ್ನೂ ಎಳೆ ಬಾಲೆ ನಳನಳಿಪ ಎಳೆಲತೆಯಂತಿದ್ದಿತು ಅವಳ ಕೋ

ಮಲ ದೇಹ. ಪ್ರಕೃತಿಯು ಅವಳಲ್ಲಿ ಲಾವಣ್ಯದ ನಕಾಶೆ ಯನ್ನಷ್ಟೇ ಎಳೆದಿದ್ದಿತ್ತು, ಅದನ್ನಿನ್ನು ವಿವಿಧ ರೂಪರೇಖೆಗಳಿಂದ ಶೋಭಾಯಮಾನವಾಗಿ ಮಾಡುವ ಕೆಲಸ ಮುಂದೆ ನಡೆಯ ಬೇಕಾಗಿದ್ದಿತು. ಆದರೆ ದುರ್ದೈವದಿಂದ, ಎಳೆಬಾಲೆಯಾದರೂ ಸಮಾಜದ ದೃಷ್ಟಿಯಲ್ಲಿ ಪರಿಪಕ್ವಳೆಂಬ ಶರೀರ ಮಾರ್ಪಾಟ ವನ್ನವಳು ಹೊಂದಿದ್ದಳು. ಆದುದರಿಂದ ಮೊದಲೇ ಕಣ್ಣು ಹಾಕಿಕೊಂಡಿದ್ದ ಕಾಮುಕ ಜನರ ಕಾಟವು ಅವಳಿಗೆ ಆರಂಭವಾಗಿತ್ತು. ಕೆಲವರು ನಾಗಿಗೆ ಹಲವು ವಿಧದ ಆಶೆತೋರಿಸಿ ಅವಳನ್ನೊಲಿಸಿಕೊಳ್ಳ ಲೆತ್ನಿಸುತ್ತಿದ್ದರು. ಆದರೆ ನಾಗಿಯು ಯಾವುದಕ್ಕೂ ಕಿವಿಕೊಡದೆ "ನನ್ನ ಮಗಳು ಇನ್ನೂ ಎಳೆಯುವಳು. ಕೆಲವು ವರ್ಷ ಹೋಗಬೇಕು. ಅವಳ ವಿದ್ಯಾಭ್ಯಾಸ ಮುಗಿಯಬೇಕು. ಅವಳನ್ನು ನಾನು ಯಾರಿಗಾ ದರೂ ಮದುವೆಮಾಡಿಕೊಡುತ್ತೇನೆ" ಎಂದೆಲ್ಲಾ ನೆವ ಹೇಳಿ ಹಿಂದೆ ಕಳುಹಿಸುತ್ತಿದ್ದಳು. ಆದರೆ ಅವಳೂ ಉಭಯಸಂಕಟದಲ್ಲಿ ಬೀಳುವ ಪರಿಸ್ಥಿತಿಯೊಂದುಂಟಾಯಿತು. ಆಗ ತನ್ನ ದೃಷ್ಟಿಯಲ್ಲಿ ಚೆನ್ನಾಗಿ ವಿಚಾರಿಸಿ ಲಲಿತೆಯ ಭಾಗ್ಯೋದಯವಾಗುವ ಸಂದರ್ಭವೆಂಬ ದುರಾ ಶೆಗೆ ಬಲಿಬಿದ್ದು ಮಾತು ಕೊಟ್ಟುಬಿಟ್ಟಳು. ನಾಗಿಯಂಥವಳಿಗದು ಬಡವನಿಗೆ ನಿಧಿ ದೊರೆತಂತಾಗಿದ್ದಿತು. ಲಲಿತೆಯ ಕುರಿತಾದ ಅವಳ ಅನುದಿನದ ಚಿಂತನೆಯು ಅನಾಯಾಸವಾಗಿ ನೆರವೇರುವಂತಾಗುವಾಗ ಅವಳೇನು ಮಾಡಿಯಾಳು ಮತ್ತೆ? ಆದರೆ ನಾಗಿಗೆ ಯಾವುದು ಸ್ವರ್ಗ ಸಮಾವೆನಿಸಿತೋ ಅದೇ ಲಲಿತೆಗೆ ನರಕವಾಗಿ ತೋರಿತು. ಈ ದೃಷ್ಟಿ ಭೇದಗಳೊಳಗಣ ತಿಕ್ಕಾಟವು ಈ ತಾಯಿ ಮಗಳ ಮನಸ್ತಾಪಕ್ಕೆ ಕಾರಣವಾಯಿತು.

ನಾಗಿಯು ಗದ್ಗದಕಂಠದಿಂದ "ಮಗೂ ಲಲಿತಾ" ಎಂದು ಬೆನ್ನು ಸವರಿದಳು. ಲಲಿತೆಯು ಫಕ್ಕನೆ ಎಚ್ಚತ್ತವಳಂತೆ ಕುರ್ಚಿಯಿಂದ ಜಗ್ಗನೆದ್ದು ದೂರ ಸರಿದು ನಿಂತು ಬಿಟ್ಟಳು. "ಕೋಪಿಸಿಕೊಳ್ಳಬೇಡ ಮಗೂ, ಬಾ ಕೂತುಕೋ" ಎಂದು ನಾಗಿಯು ಲಲಿತೆಯನ್ನು ಕೈಹಿಡಿದೆಳೆದು ಕುರ್ಚಿಯಲ್ಲಿ ಕೂತುಕೊಳ್ಳಿಸಿ ತಾನು ಹತ್ತಿರವೇ ಮೇಜಿನ

ಮೇಲೆ ಕುಳಿತುಕೊಂಡಳು. "ಅಮ್ಮಾ ಘಂಟೆ ಹತ್ತಾಯಿತು ಚಿಮುಣಿ ದೀಪದ ಹೊಗೆ ಕೋಣೆಯೆಲ್ಲೆಲ್ಲಾ ತುಂಬಿ ಹೋಯಿತು. ಮಲಗುವ." ಎಂದು ಲಲಿತೆಯು ನಾಗಿಯ ಮುಖ ನೋಡಿದಳು.

ನಾಗಿಗೆ ಲಲಿತೆ ಹೇಳಿದುದೇ ಕೇಳಲಿಲ್ಲ. ಅವಳ ಮನಸ್ಸನ್ನು ಬೇರೊಂದು ಯೋಚನೆಯು ಆಕ್ರಮಿಸಿತ್ತು. "ಚಂದ್ರಾವತಿಯನ್ನು ಬಲ್ಲೆಯಷ್ಟೆ ಮಗು? ಅವಳ ಆ ಸುಖ ವೈಭವಕ್ಕೇನಾದರೂ ಕುಂದಿದೆಯೆ? ನೀನೀಗ ಮನಸ್ಸು ಮಾಡಿದರೆ ಅವಳಿಗಿಂತಲೂ ಹೆಚ್ಚಿನ ವೈಭವದಿಂದ ಮೆರೆಯಬಹುದು. ಮಗೂ, ನಾನು ಮಾತು ಕೊಟ್ಟಾಗಿದೆ. ನೀನೀರೀತಿ ಛಲಹಿಡಿಯುವುದು ಸರಿಯಲ್ಲ. ನಿನ್ನಾಣೆ ಲಲಿತ ನಮ್ಮ ಭಾಗ್ಯಕ್ಕಿನ್ನು ಕಡಿಮೆಯಿಲ್ಲ. ನಮ್ಮಂಥವರಿಗೆ ಅಂಥವರು ದೊರಕುವುದೇ ಅಸಾಧ್ಯ. ಏನೋ ಪೂರ್ವ ಪುಣ್ಯದಿಂದ, ನಿನ್ನ ಭಾಗ್ಯದಿಂದ" ಎಂದು ನಾಗಿಯು ಮುಖಬಗ್ಗಿಸಿ ನೆಲವನ್ನು ನೋಡುತ್ತಿರುವ ಲಲಿತೆಯ ಗಡ್ಡ ಹಿಡಿದೆತ್ತಿ ಮಾತು ಮುಂದುವರಿಸುವಷ್ಟರಲ್ಲಿ ಲಲಿತೆಯು ಅವಳ ಕೈಗಳೆರಡನ್ನೂ ಜೋಡಿಸಿ ಹಿಡಿದು, "ಅಮ್ಮಾ! ಮತ್ತೇನು ಬೇಕಾದರೂ ಹೇಳು, ಅದೊಂದು ಮಾತ್ರ ಹೇಳಬೇಡ. ನನಗೆ ಅದರಿಂದ ಎಂತಹ ಸುಖ ದೊರಕಿದರೂ ನಾನದಕ್ಕೊಪ್ಪಲಾರೆನು ಅಮ್ಮಾ ನಿನಗೆ ನನ್ನ ಮೇಲೆ ಒಂದಿಷ್ಟು ಕರುಣೆಯಿಲ್ಲವೇ? ನಾನು ಋತುವಾದರೇನು? ನನ್ನ ವಯಸ್ಸು ಕೇವಲ ಹದಿನಾಲ್ಕಲ್ಲವೇ? ಕ್ಷಮಿಸಮ್ಮಾ ಕ್ಷಮಿಸು ನನಗದನ್ನು ನೆನಸಿದರೇನೇ ಭಯವಾಗುವುದು ಶರೀರವೆಲ್ಲಾ ಕಂಪಿಸುವುದು ಈ ವರೆಗೆ ಎಂದಿಗಾದರೂ ನಿನ್ನ ಮಾತನ್ನು ಮೀರಿದವಳೇ ನಾನು? ಈಗ ನಿರ್ವಾಹವಿಲ್ಲವಮ್ಮಾ ಹಾಗೆಮಾಡದೆ ನಾನು ನಿನ್ನ ಮಾತಿನಂತೆ ನಡೆದರೆ ನಿಶ್ಚಯವಾಗಿಯೂ ನನ್ನ ಸರ್ವನಾಶವಾಗುವುದೆಂಬ ಭೀತಿಯಿಂದ ನನ್ನ ಹೃದಯವೇ ತಳಮಳಿಸುತ್ತಿರುವುದಮ್ಮಾ. ಬೇಡ, ಬೇಡ ಅಮ್ಮಾ ನೀನೀ ಛಲತೊಟ್ಟು ನನ್ನೀ ಬಾಳನ್ನು ಹಾಳು ಮಾಡಬೇಡ" ಎಂದು ಲಲಿತೆಯು ಒಂದೇ ಸವನೆ ಕಣ್ಣೀರಿಡಲು ನಾಗಿಯ ಹೃದಯವು ಕರಗಿದರೂ ಮನಸ್ಸಿನ ನಿರ್ಧಾರವೇನೂ ಬದಲಾಗಲಿಲ್ಲ

ಅವಳು ಮನಸ್ಸು ಬಿಗಿಹಿಡಿದು "ನೀನೇನು ಮಾಡುವೆ ಮತ್ತೆ?" ಎಂದು ಸ್ವಲ್ಪ ಸಿಟ್ಟಿನಿಂದಲೇ ಪ್ರಶ್ನಿಸಿದಳು "ನಾನು ಇನ್ನೆರಡು ವರ್ಷ ಕಲಿತು ಸ್ಕೂಲು ಫೈನಲ್ ಪಾಸಾಗುವೆನು. ಆ ಮೇಲೆ ಅಧ್ಯಾಪಕಿ ಅಥವಾ ಮಿಡ್‌ವೈಫ್ ಆಗಲು ನಮ್ಮ ಟೀಚರ್ ಸುಮಿತ್ರಾ ಬಾಯಿಯವರು ಸಹಾಯಮಾಡುವೆನೆಂದು ಮಾತುಕೊಟ್ಟಿದ್ದಾರಮ್ಮಾ; ನಾನೆಂದರೆ ಅವರಿಗೆ ಬಹಳ ಪ್ರೀತಿ. ಯಾವಾಗಲೂ ಅವರು ನನಗೆ ಬುದ್ಧಿಹೇಳುತ್ತಲೇ ಇದ್ದಾರೆ'' ಎಂದು ಲಲಿತೆಯು ಉತ್ತರವಿತ್ತಳು. "ಹೌದೌದು ಹೇಳಿಕೊಟ್ಟ ಬುದ್ಧಿಯಿದು ನಿನ್ನದು! ನಿನಗೇನು ಲೋಕಾನುಭವವಿದೆ? ಅಧ್ಯಾಪಕಿ ಅಥವಾ ಮಿಡ್‌ವೈಫ್ ಆಗಿ ನೀನು ಹೀಗೆಯೇ ಇರುವೆಯಾ? ನಿನ್ನ ಸುಮಿತ್ರಾ ಬಾಯಿಯವರು ಮದುವೆಮಾಡಿಕೊಳ್ಳಲಿಲ್ಲವೇ?'' ಎಂದು ನಾಗಿಯು ಮತ್ತಷ್ಟು ಸಿಟ್ಟುಗೊಂಡಳು. "ನಾನೂ ಆ ಮೇಲೆ ಮದುವೆಯಾಗುವೆನಮ್ಮಾ ಮದುವೆಯಾಗಿ ನಾವೆಲ್ಲರೂ ಸುಖವಾಗಿರಬಹುದು" ಎಂದು ನಿರ್ದುಷ್ಟವಾಗಿ ಲಲಿತೆಯು ನುಡಿದಳು. ನಾಗಿಯ ಕೋಪ ಮಿತಿಮೀರಿತು. ಅವಳು "ಹೌದೌದು ನೀನು ಮದುವೆಯಾಗುವೆ! ಯಾರನ್ನು? ನೋಡುವ, ನಿನ್ನ ಸುಮಿತ್ರಾ ಬಾಯಿಯವರು ನಿನಗೊಂದು ಯೋಗ್ಯ ಗಂಡನನ್ನೊದಗಿಸಿಕೊಡಲಿ!" ಎಂದು ಹಂಗಿಸಿ ಮಾತಾಡಿದಳು. "ಸಿಟ್ಟುಗೊಳ್ಳಬೇಡಮ್ಮಾ; ನೀನು ಕಲಿ, ಹುಶಾರಾಗು, ನಿನಗೊಬ್ಬ ಯೋಗ್ಯ ವರನನ್ನು ನಾನೊದಗಿಸಿಕೊಡುತ್ತೇನೆ"ಂದು ಸುಮಿತ್ರಾ ಬಾಯಿಯವರೇ ಹೇಳಿರುತ್ತಾರಮ್ಮ ಅವರು ಬಹಳ ಒಳ್ಳೆಯವರು ಅವರಿಗೆ ಹೆಣ್ಣು ಮಕ್ಕಳಿಲ್ಲ. ನನ್ನನ್ನವರು ತನ್ನ ಮಗಳಂತೆಯೇ ಪ್ರೀತಿಸುತ್ತಿದ್ದಾರೆ." "ಹೌದೌದು ಎಲ್ಲರೂ ಪ್ರೀತಿಸುತ್ತಾರೆ. ಸ್ವಲ್ಪ ರೂಪವಿದ್ದರೆ! ಅವರೊಬ್ಬರು ಹೇಳಲಿಕ್ಕೆ, ನೀನು ಕೇಳಲಿಕ್ಕೆ! ನೀನೇನು, ನಿನ್ನ ಕಸುಬೇನು, ನೀನು ಮಾಡತಕ್ಕದ್ದೇನೆಂದು ನಿನಗಿನ್ನೂ ತಿಳಿದಿಲ್ಲ. ವಿದ್ಯೆ, ಶಾಲೆ, ಉದ್ಯೋಗ ಇದರಲ್ಲೇ ಬಿದ್ದಿದ್ದಿ ನೀನು-" ಎಂದು ನಾಗಿಯು ಬಿರುನುಡಿದಳು.

"ಅಮ್ಮಾ ನನಗೆ ಬೆಳಗ್ಗೆ ಬೇಗ ಏಳಬೇಕು ಕ್ಲಾಸು ಪರೀಕ್ಷೆ

ಯಿದೆ ಸ್ವಲ್ಪ ಓದಬೇಕು. ಇನ್ನು ಮಲಗಿದರಾಗದೇ?" ಎಂದು ಲಲಿತೆಯು ವಿನೀತಳಾಗಿ ಪುನಃ ನಾಗಿಯ ಮುಖ ನೋಡಿದಳು.

ನಾಗಿ—ಆ ಸ್ವಾಮಿಯ ಜನರು ನನ್ನ ಪ್ರಾಣ ತಿನ್ನುತ್ತಿದ್ದಾರೆ ನೀನೆಲ್ಲಿ ಅವರ ಕಣ್ಣಿಗೆ ಬಿದ್ದುಬಿಟ್ಟೆಯೋ? ನಾನು ನಿನ್ನೊಡನೊಂದು ಮಾತು ಕೂಡಾ ಕೇಳದೆ ಮಾತುಕೊಟ್ಟು ಸಿಕ್ಕಿಬಿದ್ದೆ ಅವರು ಬಹಳ ಜೋರಿನವರು

ಲಲಿತ—ಅಮ್ಮಾ, ನಿನ್ನ ಮಗಳ ವಿಷಯದಲ್ಲಿ ನಿನಗೆ ಸ್ವತಂತ್ರವಿಲ್ಲವೇ? ಅವರೆಷ್ಟು ಜೋರಿನವರಾದರೇನು? ನಮ್ಮನ್ನೇನು ಮಾಡುವರು.

ನಾಗಿ—ನಿನಗೇನು ಗೊತ್ತು ಅವರ ಸಂಗತಿ ಲಲಿತ? ನಾನು ಕೊಟ್ಟ ಮಾತಿಗೆ ತಪ್ಪಿದ ಪಕ್ಷದಲ್ಲಿ ನಮ್ಮ ಮನೆಗೆ ಬೆಂಕಿಹಿಡಿಸಲೂ ಹಿಂಜರಿಯರವರು!

ಲಲಿತ– ಎಂತಹ ಸ್ವಾಮಿಯುವರಪ್ಪಾ ಅವರು; ಅಷ್ಟು ಜೋರಿನವರು!

ನಾಗಿ—ಒಟ್ಟಾರೆ ನಾನೀಗ ಸಿಕ್ಕಿಬಿದ್ದೆ. ಇನ್ನೇನು ಮಾಡುವುದು? ನಿನಗೆ ಬಂಗ್ಲೆಯಂಥಾ ದೊಡ್ಡ ಮನೆ ಕಟ್ಟಿಸಿಹಾಕಿ, ಖರ್ಚಿಗೆ ಬೇಕಷ್ಟು ಆಸ್ತಿಯನ್ನು ನಿನ್ನ ಹೆಸರಲ್ಲೇ ಮಾಡಿ ಮರಣಕಾಲದ ವರೆಗೆ ನಿನ್ನೊಬ್ಬಳನ್ನೇ ನಂಬಿಕೊಂಡಿದ್ದೇನೆಂದು ತನ್ನ ದೇವರಾಣೆಯಿಟ್ಟು ಮಾತುಕೊಟ್ಟಿದ್ದಾರವರು ಲಲಿತ. ಇಷ್ಟೆಲ್ಲಾ ಮಾಡಿ ನಾನೇ ಈಗ ಮಾತಿಗೆ ತಪ್ಪುವುದಾದರೂ ಹೇಗೆ?

ಲಲಿತ—ಹೇಳಿದ್ದನ್ನೇ ಮತ್ತೂ ಹೇಳಿ ಫಲವೇನಮ್ಮಾ? ಆ ಮಾತು ಬಿಡು. ಮತ್ತೇನಾದರೂ ಮಾತಾಡು.

ನಾಗಿ– ಹುಂ, ಎಷ್ಟು ಸುಲಭವಾಗಿ ನಿರ್ವಹಿಸಿ ಬಿಡುವೆ ನನಗೆ ಪ್ರಾಣಕ್ಕೆ ಬಂದಿರುವ ವಿಷಯವನ್ನು ನೀನು ಲಲಿತ!

ಲಲಿತ—ನಿನಗೀಗೊಮ್ಮೆ ಪ್ರಾಣಕ್ಕೆ ಬಂದಿರುವುದೆಂದು ನಾನು ನನ್ನ ಪ್ರಾಣವನ್ನೇ ನಿರಂತರವೂ ನಾಶಮಾಡಿಕೊಳ್ಳಲೇ? ಅಮ್ಮಾ ನಿನಗಾಗಿ ಸರ್ವ ಸಾಧಾರಣ ಅಸಾಧ್ಯ ಕಾರ್ಯವನ್ನಾದರೂ ಸಾಧಿಸಲೆತ್ನಿಸುವುದು ನನ್ನ ಕರ್ತವ್ಯ. ಎಂದೆಂದಿಗೂ ತೀರಿಸಲಸದಳವಾದ

ಋಣವಿದೆ ನಿನ್ನದು ನನ್ನ ಮೇಲೆ. ಅಂದ ಮೇಲೆ ನಿನಗೆ ಅವಿಧೇಯ ಳಾಗಿ ನಡೆಯುವುದು ನನಗೆ ಅದೆಂತಹ ಅಸಹನೀಯ ವೇದನೆಯಿರ ಬೇಕಮ್ಮಾ! ನಿನ್ನ ಮಾತು ಮೀರುವುದು ನನಗಷ್ಟು ಸುಲಭವೆಂದು ಬಗೆದೆಯಾ? ನಾನು ಅಷ್ಟೊಂದು ಕೃತಘ್ನಳೇ?

ಲಲಿತೆಯ ಕಣ್ಣುಗಳಲ್ಲಿ ಪುನಃ ನೀರು ತುಂಬಿ ಹರಿಯಿತು ಅದನ್ನು ಕಂಡೊಡನೆಯೇ ನಾಗಿಯ ಹೃದಯವು ಥಕ್ಕನೆ ಮೃದುವಾ ಯಿತು ಅವಳು ತನ್ನ ಸೆರಗಿನಿಂದ ಲಲಿತೆಯ ಕಣ್ಣೀರೊರಸಿ, "ಅಳ ಬೇಡ, ಮಗೂ ಅಳಬೇಡ ನಾನೂ ನಿನ್ನ ಒಳಿತನ್ನೇ ಬಯಸಿ ನೀನೊಪ್ಪು ವೆಯೆಂದು ನೆನಸಿ ಮಾತುಕೊಟ್ಟು ಸಿಕ್ಕಿಬಿದ್ದೆ. ಇನ್ನು ಹೇಗಾದರೂ ತಪ್ಪಿಸಿಕೊಳ್ಳುವಂತೆ ಪ್ರಯತ್ನಿಸುವೆನು ದೈವೇಚ್ಛೆ ಇದ್ದಂತಾಗುವದು ಇನ್ನಾ ಕುರಿತು ಚಿಂತೆ ಕಟ್ಟಿಕೊಳ್ಳಬೇಡ ಎಳೆ ಹುಡುಗಿ ನೀನು ಯಾವಾ ಗಲೂ ಕಣ್ಣೀರು ಸುರಿಸುತ್ತಿರಬಾರದು. ಹೋಗು ಮಲಗು, ನಾನೂ ಮಲಗುವೆನು. ನನಗೆ ಅಡಿಗೆಕೋಣೆಯಲ್ಲಿ ಸ್ವಲ್ಪ ಕೆಲಸವಿದೆ" ಎಂದು ಲಲಿತೆಯು ಚಾಪೆ ಬಿಡಿಸುವವರೆಗೆ ಚಿಮಣಿ ಹಿಡಕೊಂಡು ನಿಂತು ಆ ಮೇಲೆ ಅಡಿಗೆಕೋಣೆಗೆ ಹೋದಳು.

ಅಧ್ಯಾಯ ೨

"ಹಿಡಿಯಿರಿ ರಂಡೆಗಳಿಬ್ಬರನ್ನೂ!"

ತಾಯಿ ಮಗಳಿಬ್ಬರೇ ಇರುವುದರಿಂದ ಹೊತ್ತುಮುಳುಗಿದ ಕೂಡಲೆ ನಾಗಿಯು ರಸ್ತೆಯೆದುರಿನ ಮನೆಬಾಗಿಲು ಹಾಕಿಬಿಡುತ್ತಿದ್ದಳು. ಎಂಟು ಎಂಟೂವರೆ ಘಂಟೆ ರಾತ್ರಿಯಾಗಬಹುದು. "ಅಮ್ಮಾ ಸ್ವಲ್ಪ ಬಾಗಿಲು ತೆರೆಯಿರಿ" ಎಂದು ಕೂಗಿ ಬಾಗಿಲಿಗೆ ಬಡಬಡ ಬಡೆದ ಶಬ್ದವಾಯಿತು "ಯಾರದು? ಸ್ವಲ್ಪ ಮೆಲ್ಲಗೆ ಬಾಗಿಲು ಬಡೆಯಿರಿ. ಬಾಗಿಲು ಒಡೆದು ಹೋದೀತು ಎಲ್ಲಿಯಾದರೂ'' ಎಂದು ನಾಗಿಯು ಸ್ವಲ್ಪ ಸಿಟ್ಟಿನಿಂದ ಬಿರುಸಾಗಿ ಮಾತಾಡಿದಳು. ''ನಾನು ವೆಂಕಟ್ರಮಣ, ಅಕ್ಕಾ ಊಟ

ಉಂಟೋ ಮುಗಿಯಿತೊ? ಇವತ್ತು ಇಡೀ ದಿನ ಊಟಮಾಡಲಿಲ್ಲಮ್ಮಾ! ಕಾಫಿ ಕುಡಿಕುಡಿದು ಜೀವಸಂಕಟವಾಗುತ್ತಿದೆ. ಒಂದು ಮುಷ್ಟಿ ಅನ್ನ ಹಾಕದೆ ನಿರ್ವಾಹವಿಲ್ಲಮ್ಮಾ" ಎಂದಿತು ಹೊರಗಿನ ವ್ಯಕ್ತಿ ದೀನ ಮತ್ತು ಕ್ಷೀಣ ಸ್ವರದಿಂದ ನಾಗಿಯು, "ಒಹೋ ವೆಂಕಟ್ರಮಣನೇ! ಬಹಳ ಅಪರೂಪ" ಎಂದು ಎಡಗೈಯಲ್ಲಿ ಚಿಮುಣಿ ಹಿಡಕೊಂಡು ಬಲಗೈಯಲ್ಲಿ ಬಾಗಿಲು ತೆರೆದು ಚಿಮುಣಿಯನ್ನು ವೆಂಕಟ್ರಮಣನ ಮುಖಕ್ಕೆದುರಾಗಿ ಹಿಡಿದು ಪರೀಕ್ಷಿಸಿದಳು ಬೆಳಕು ಕಂಡೊಡನೆಯೇ ವೆಂಕಟ್ರಮಣನ ಕಣ್ಣುಗಳು ಮುಚ್ಚಿಹೋದುವು. ಆದರೆ ಆ ಮೊದಲು ಅವು ತಮ್ಮ ಸ್ವರೂಪವನ್ನು ನಾಗಿಗೆ ಕ್ಷಣಮಾತ್ರದಲ್ಲಿ ವ್ಯಕ್ತಗೊಳಿಸಿಬಿಟ್ಟವು ಅದೇನೋ ದುರುದ್ದೇಶದಿಂದ ಬಂದುದೆಂದು ವೆಂಕಟ್ರಮಣನ ಹೊಗೆ ಹಿಡಿದ ಮುಖವು ಎತ್ತಿ ತೋರಿಸುತ್ತಿತ್ತು. ಅವನು ತನ್ನೆದುರು ಚಿಮುಣಿ ಹಿಡಿದು ನಿಂತಿರುವ ನಾಗಿಯನ್ನು ಮುಖವೆತ್ತಿ ಕೂಡಾ ನೋಡದೆ, ಅವಳೊಡನೆ ಒಂದು ಮಾತು ಕೂಡಾ ಆಡದೆ, ಟಿಕೇಟಿಲ್ಲದೆ ರೈಲು ಬಂಡಿಯೊಳನುಗ್ಗುವವನಂತೆ ಫಕ್ಕನೆ ನಾಗಿಯ ಮನೆಯೊಳಕ್ಕೆ ನುಗ್ಗಿ ಬಿಟ್ಟನು. ಅವನ ಶರೀರದಲ್ಲಿ ಸ್ಥಿರತೆಯಿರಲಿಲ್ಲ. ವರ್ತನೆಯು ನೆಟ್ಟಗಿರಲಿಲ್ಲ ಇದನ್ನೆಲ್ಲಾ ಕಂಡ ನಾಗಿಯ ಮನಸ್ಸು ಬಹಳ ಸಂದೇಹಕ್ಕೊಳಗಾಯಿತು. ತನ್ನೊಡನೆ ಅತ್ಯಂತ ಸಲುಗೆಯಿಂದಿದ್ದು, ಮಾತು ಮಾತಿಗೆ ಅಮ್ಮಾ, ಅಕ್ಕಾ, ಎಂದು ಕರೆದು, ಲಲಿತೆಯನ್ನು ಹಾಗೆ ಮಾಡಬೇಕು ಹೀಗೆ ಮಾಡಬೇಕ ಎಂದು ಹಿತೋಪದೇಶವಿತ್ತು, ಬಾಯಿತುಂಬಾ ಮಾತಾಡಿ,ನಗೆಯ ಚೆಲ್ಲಾಟವಾಡಿ,ಆರಾಮವಾಗಿ ಕುಳಿತು ವೀಳ್ಯಹಾಕಿ, ಅಲ್ಲಿ ಹಾಗಾಯಿತು, ಇಲ್ಲಿ ಹೀಗಾಯಿತೆಂದು ಪತ್ರಿಕೆಗಳಿಗೂ ಸಿಗದ ಊರ್‍ರು ಪರವೂರುಗಳ ಸುದ್ದಿಗಳ ನಾರದನಾಗಿ ಆತ್ಮೀಯನಂತಿರುತ್ತಿದ್ದ ಆ ವೆಂಕಟ್ರಮಣನೆಲ್ಲಿ! ಮಿತಗೆಟ್ಟು ಕುಡಿದು ಕೆಂಗಣ್ಣನಾಗಿ, ಮುಖವೆತ್ತಿ ಮಾತಾಡಲು ಕೂಡಾ ಸಾಧ್ಯವಾಗದೆ ಬಾಗಿಲು ತೆರೆದೊಡನೆಯೇ ಅಪರಾಧಿಯಂತೆ ಒಳಗೆ ನುಸುಳಿದ ಈ ವೆಂಕಟ್ರಮಣನೆಲ್ಲಿ! ನಾಗಿಯು ಅನುಮಾನಪಟ್ಟಳು. ಅವಳ ಮನಸ್ಸು ಸ್ವಲ್ಪ ಪಲ್ಲಟಿಸಿತು. "ಛೆ ವೆಂಕಟ್ರಮಣನಂಥವನು ಹಾಗೇನೂ ಮಾಡಲಾರ. ಇವತ್ತೇನೋ

ಸ್ವಲ್ಪ ಹದತಪ್ಪಿ ಕುಡಿದಿರಬೇಕು, ಯಾರದೋ ಧರ್ಮಕ್ಕೆ ಸಿಕ್ಕಿರಬೇಕು" ಎಂದು ನಾಗಿಯು ತಾನೇ ತನ್ನ ಸಂದೇಹ ನಿವಾರಿಸಿಕೊಂಡಳು ಆ ಮೇಲೆ ಒಳಗೆ ಹೋಗಿ ನೋಡುವಾಗ ವೆಂಕಟ್ರಮಣನು ಚಾವಡಿಯ ಒಂದು ಮೂಲೆಯಲ್ಲಿ ಗೋಡೆಗೆ ಮುತ್ತಿಟ್ಟೋ ಎಂಬಂತೆ ಮಲಗಿ ಕೊಂಡಿದ್ದನು. "ವಿಪರೀತ ಕುಡಿದಿರಬೇಕು ಪಾಪ" ಎಂದು ನಾಗಿಯು, "ವೆಂಕಟ್ರಮಣ, ವೆಂಕಟ್ರಮಣ. ಒಂದು ತುತ್ತು ಊಟಮಾಡಿ ಮಲಗಪ್ಪ. ರಾತ್ರಿ ಬರಿ ಹೊಟ್ಟೆಯಲ್ಲಿ ಮಲಗಬಾರದು ಮಗ" ಎಂದು ತೋಳು ಹಿಡಿದು ಅಲುಗಿಸಿದಳು "ಬೇಡಮ್ಮಾ ಬೇಡ. ನನಗೆ ಜೀವ ಸಂಕಟದಿಂದ ತಲೆಯೆತ್ತಲು ಕೂಡಾ ಸಾಧ್ಯವಿಲ್ಲ. ನಾನು ಸ್ವಲ್ಪ ಮಲಗುತ್ತೇನಮ್ಮಾ, ದೀಪ ಸ್ವಲ್ಪ ಆಚೆಗೆ ಕೊಂಡುಹೋಗಿ" ಎಂದ ವೆಂಕಟ್ರಮಣ ಕಣ್ಣುಸಹ ತೆರೆಯದೆ "ಅದು ಕೂಡದು ಮಗ ಊಟ ಮಾಡದಿದ್ದರೆ ಒಂದಿಷ್ಟು ಹಾಲಾದರೂ ಕುಡಿದು ಮಲಗು, ಏಳು ಏಳು" ಎಂದು ನಾಗಿಯು ಮತ್ತಷ್ಟು ಬಲವಾಗಿ ಮೈ ಕುಲುಕಿದಳು "ಇಲ್ಲಮ್ಮಾ ಇಲ್ಲ ನನಗೆ ಬಾಯಾರಿಕೆ ಆಗುವುದಿಲ್ಲ. ನನ್ನನ್ನು ಸ್ವಲ್ಪ ನನ್ನಷ್ಟಕ್ಕೆ ಬಿಡಿ. ಅಷ್ಟುಮಾಡಿ. ಎಲ್ಲಾ ನಾಳೆ ಮಾತಾಡುವ" ಎಂದು ನಾಗಿಯೊಡನೆ ಮಾತಾಡಲೂ ಸಹ ಮನಸ್ಸಿಲ್ಲದೆ ಬೇಡಿಕೊಳ್ಳುವ ವೆಂಕಟ್ರಮಣನನ್ನು ಕಂಡು ನಾಗಿಯು ಕುಡುಕತನದ ಅವಸ್ಥೆಗಾಗಿ ಬಹಳ ಕನಿಕರಪಟ್ಟು, "ಅಯ್ಯೋ ಭಗವಂತ!" ಎಂದು ನಿಟ್ಟುಸಿರಿಟ್ಟು ಜೋಲುಮೋರೆ ಮಾಡಿಕೊಂಡು ಒಳಗೆ ಹೋದಳು ಮನೆಯ ದಕ್ಷಿಣಭಾಗದ ಒಂದು ಮೂಲೆಜು ಕೋಣೆಯಲ್ಲಿ ಬಾಗಿಲು ಹಾಕಿಕೊಂಡು ಓದುವುದರಲ್ಲೇ ನಿರತಳಾಗಿದ್ದ ಲಲಿತೆಯ ಜೀವನ ವೃಕ್ಷಕ್ಕೆ ವಜ್ರಘಾತವಾಗಲಿರುವ ಈ ವಿದ್ಯಮಾನದ ಯಾವ ಸಂಗತಿಯೂ ಅವಳಿಗೆ ತಿಳಿಯಲಿಲ್ಲ ಹೊರಗಿಂದ ಕರೆದು ಬಾಗಿಲು ಬಡೆದ, ನಾಗಿಯು ಬಾಗಿಲು ತೆರೆದು ಮಾತನಾಡಿದ ಶಬ್ದವೆಲ್ಲಾ ಲಲಿತೆಗೆ ಕೇಳಿಸಿತ್ತು ಆದರೆ ಯಾರೋ ಅಮ್ಮನ ಪರಿಚಯಸ್ಥರು ಊಟಕ್ಕೆ ಬಂದಿರಬೇಕೆಂದವಳು ಅದರ ಗೊಡವೆಗೇ ಹೋಗಲಿಲ್ಲ. ನಾಗಿಯೂ ಆ ಕುರಿತು ಯಾವ ಸಂಗತಿಯನ್ನೂ ಅವಳಿಗೆ ತಿಳಿಸಲಿಲ್ಲ. ತಿಳಿಸುವ

ಆವಶ್ಯವೂ ಇರಲಿಲ್ಲ. ಅಷ್ಟೊಂದು ಅಪ್ರಾಮುಖ್ಯವಾಗಿದ್ದಿತು ಸಂಗತಿ ಆಗ.

ಅಂದಿನ ರಾತ್ರಿ ಅದೇಕೋ ಲಲಿತೆಗೆ ನಿದ್ದೆಯೇ ಬರಲೊಲ್ಲದು. ನಾಗಿಯು ಅಡಿಗೆಮನೆಯ ಕೆಲಸವನ್ನೆಲ್ಲಾ ಮುಗಿಸಿಕೊಂಡು ಕೋಣೆಗೆ ಮಲಗ ಹೋದಾಗ, ಲಲಿತೆಯು ಓದುತ್ತಲೇ ಇದ್ದಳು. ಬೇರೆ ದಿನಗಳಲ್ಲಾದರೆ ಅವಳು ಗಾಢನಿದ್ರಾವಶಳಾಗುವ ಸಮಯವಾಗಿತ್ತು "ಆದೇಕೆ ಲಲಿತ, ಇನ್ನೂ ಮಲಗಿಲ್ಲ? ಹತ್ತುಘಂಟೆ ಹೊಡೆಯಿತಲ್ಲ? ಎಷ್ಟು ರಾತ್ರಿ ಓದಿ ಕುಳಿತುಕೊಳ್ಳುವೆ? ಮಲಗು ಮಗು ಮಲಗು" ಎಂದು ನಾಗಿಯು ಒತ್ತಾಯ ಮಾಡಿದಳು. 'ಅಮ್ಮಾ ನನಗಿಂದು ನಿದ್ದೆಯೇ ಬರಲಾರದು. ನಾನು ಇನ್ನೂ ಸ್ವಲ್ಪ ಸಮಯ ಓದಿ ಕುಳಿತುಕೊಳ್ಳಲೇ? 'ವಾಗ್ದೇವಿ' ಎಂಬ ಕತೆಮುಗಿಸಲು ಇನ್ನು ಸ್ವಲ್ಪ ಮಾತ್ರವುಂಟಮ್ಮಾ ನೀನು ಮಲಗು, ನಾನು ಇನ್ನೊಂದು ಅರ್ಧಘಂಟೆಯಲ್ಲೇ ಅದನ್ನು ಮುಗಿಸಿ ಮಲಗುತ್ತೇನೆ." ಎಂದಳು ಲಲಿತೆ ಅತಿ ವಿನಯದಿಂದ. "ಯಾರು ಕೊಟ್ಟರು ನಿನಗಾಪುಸ್ತಕವನ್ನು? ಯಾಕೆ ಓದುವುದು ನೀನದನ್ನು? ಸಾಕು ಸಾಕು ಓದಿದುದಿನ್ನು. ಮಲಗು ಮಲಗು" ಎಂದು ನಾಗಿಯು ಗದರಿಸಿದಳು. "ವಾಗ್ದೇವಿಯನ್ನೋದಿದ ನನಗೆ ಮಠ ದೇವಸ್ಥಾನಗಳಲ್ಲಿ ಎಂತೆಂತಹ ದುಷ್ಕೃತ್ಯಗಳೆಲ್ಲಾ ನಡೆಯುತ್ತಿರುವುದೆಂದು ಚೆನ್ನಾಗಿ ಮನವರಿಕೆಯಾಯಿತಮ್ಮಾ ಇದು ಹೊರತು, ನಾವು ಸುಮ್ಮನೆ ಏನೇನೋ ಆಶೆ ಕಟ್ಟಿಕೊಂಡು ಅದನ್ನು ನೆರವೇರಿಸಿಕೊಳ್ಳಲು ಯಾವ ದುಷ್ಕೃತ್ಯ ಮಾಡಲೂ ಹೇಸದಿರುವುದು ಅದರ ಪರಿಣಾಮ ಮಾತ್ರ ಪ್ರತಿವಿರುದ್ಧನಾಗುವುದು. ವಾಗ್ದೇವಿಯು ತನ್ನ ಮಗನೊಬ್ಬನನ್ನು ಸನ್ಯಾಸಿ ಪಟ್ಟಕ್ಕೇರಿಸಲು ಏನೆಲ್ಲಾ ಪ್ರಯತ್ನಮಾಡಿದಳಮ್ಮಾ? ಅದರಿಂದಾಗಿ ಏನೆಲ್ಲಾ ಅನಾಹುತವಾಯಿತು! ಕೂಡದಮ್ಮಾ ಕೂಡದು, ಎಂದಿಗೂ ದುರಾಶೆಗೆ ಮನಸ್ಸು ಕೊಡಕೂಡದು. ಇದ್ದುದರಲ್ಲೇ ತೃಪ್ತಿ ಹೊಂದಬೇಕು. ಸದ್ಧರ್ಮದಲ್ಲಿ ನಡೆಯಬೇಕು" ಎಂದು ಲಲಿತೆಯು ಬಹಳ ಆಗ್ರಹದಿಂದ ತಾಯಿಯೊಡನೆ ಕೇಳಿಕೊಂಡಳು. ಅವಳು ತಾಯಿಗೆ ಬುದ್ಧಿವಾದ ಹೇಳಲು ಎದೆಗೊಂಡುದು ಇದೇ

ಮೊದಲು. ವಾಗ್ದೇವಿಯ ಕತೆಯು ಅವಳ ಮನಸ್ಸನ್ನು ಚೆನ್ನಾಗಿ ಮಥಿಸಿ ಕಲ್ಲೋಲವನ್ನೆಬ್ಬಿಸಿತ್ತು. ತಾಯಿಯ ದುರಾಶೆಯಿಂದಾಗಿ ತನ್ನ ಜೀವನ ಪುಷ್ಪವನ್ನು ಮೊಗ್ಗೆಯಲ್ಲೇ ಅನೀತಿಯ ಕೀಟವು ಕೊರೆದು ಕರುಬಿಸಿ ಬಿಡುವುದೋ ಎಂಬ ಭೀತಿಯು ಅವಳಲ್ಲಿ ಅಂದೇಕೋ ವಿಶೇಷ ಉದ್ವೇಗವನ್ನುಂಟುಮಾಡಿತ್ತು. "ಯಾಕೆ ಓದುವುದು ನೀನ ದನ್ನು?" ಎಂಬ ತಾಯಿಯ ಸಿಟ್ಟಿನ ಪ್ರಶ್ನೆಯು ಅವಳ ಭೀತಿಯನ್ನು ಮತ್ತಷ್ಟು ಬಲಗೊಳಿಸಿತು ಆಗ ಅವಳ ಬಾಯಿಯಿಂದ ಒಂದೇ ಸವನೆ ಮೇಲಿನ ಉಪದೇಶ ವಾಕ್ಯಗಳು ಹೊರಬಿದ್ದುವು ನಾಗಿಯು ಆಶ್ಚರ್ಯ ಗೊಂಡು ಲಲಿತೆಯ ಮುಖವನ್ನು ದಿಟ್ಟಿಸಿದಳು. ಅವಳ ಮುಖಕಮ ಲದ ಮೇಲಿಂದ ಬೆವರ ಹನಿಗಳು ಜಾರಿಬೀಳುತ್ತಿದ್ದುವು ಮನೋಹರ ವಾಗಿ ಹೊಳೆಯುತ್ತಿರುವ ಹಣೆಯು ಸಂಪೂರ್ಣ ಒದ್ದೆಯಾಗಿ ಹೋಗಿತ್ತು ಕಣ್ಣುಗಳು ನಿಸ್ತೇಜವಾಗಿದ್ದುವು- "ನನಗೇಕೋ ಇವತ್ತು ಬಹಳವಾಗಿ ಬೆವರುತ್ತದಮ್ಮ" ಎಂದು ಲಲಿತೆಯು ಮೇಜಿಯ ಮೇಲಿನ ಕರವಸ್ತ್ರ ತೆಗೆದು ಮುಖ, ಕುತ್ತಿಗೆ, ಮುಂಗೈಗಳನ್ನೆಲ್ಲಾ ಒರಸಿ ಕೊಂಡಳು. "ಲಲಿತ, ನೀನೀಗ ನನಗೆ ಬುದ್ಧಿ ಹೇಳುವವಳಾಗಿ ಹೋದೆಯಲ್ಲ? ಈ ವಾಗ್ದೇವಿ ಕತೆಯನ್ನು ನೀನೆಂದಿಗೂ ಓದಬಾರದು ಬೇರೆಯಾವ ಪುಸ್ತಕವೂ ನಿನಗೆ ಸಿಗಲಿಲ್ಲವೇ" ಎಂದು ನಾಗಿಯು ಲಲಿತೆಯ ಕೈಯಿಂದ ಪುಸ್ತಕವನ್ನೆಳೆದು ತೆಗೆದುಕೊಂಡು ಮೇಜಿಯ ಮೂಲೆಗೆ ಬಿಸಾಡಿ, "ಮಲಗು ಲಲಿತ ಮಲಗು" ಎಂದು ಮೈದಡವಿ ಒತ್ತಾಯಮಾಡಿ ಮಲಗುವಂತೆ ಮಾಡಿದಳು.

ಅಂದು ಮಾಘ ಮಾಸದ ಕೃಷ್ಣಪಕ್ಷದ ದ್ವಾದಶಿ ರಾತ್ರಿ. ಶಿವಪುರವು ನಿದ್ರಾಲಿಂಗನಾ ಸುಖದಲ್ಲಿ ಮೈಮರೆತು ಬಿದ್ದಿತ್ತು. ಪ್ರಕೃತಿ ದೇವಿಯು ಭಾರಿ ಚಳಿಯಲ್ಲಿ ಕರಿಕಂಬಳಿ ಹೊದ್ದು ಪವಡಿಸಿದ್ದಂತೆ ತೋರುತ್ತಿತ್ತು. ಗಂಭೀರನೀರವವು ತಾರೆಗಳ ಮಿಣಿಮಿಣಿ ದೀಪಾರತಿಪಡೆದು ತಾನೇ ತಾನಾಗಿ ಮೆರೆಯುತ್ತಿತ್ತು. ಬೀದಿಯ ಭಿಕಾರಿ ನಾಯಿಗಳೂ ತಮ್ಮ ಬಗುಳಾಟದ ಮೇಲಾಟ ನಿಲ್ಲಿಸಿ ಸಿಕ್ಕಿದಷ್ಟು ಬೆಚ್ಚಗಿನ ಮೂಲೆಗೆ ಸೇರಿ ನಿದ್ದೆ ಹೋಗಿದ್ದುವು. ಇಂತಹ ಅಪರರಾತ್ರಿಯಲ್ಲಿ ಮೋಟರ್ ಕಾರೊಂದು

ನಾಗಿಯ ಮನೆಯ ಮುಂಭಾಗದಲ್ಲಿ ಬಂದು ನಿಂತಿತು. ಕೂಡಲೆ ಅದರ ದೀಪಗಳು ನೊಂದಿಸಲ್ಪಟ್ಟವು. ಕಾರಿನಿಂದ ವ್ಯಕ್ತಿಯೊಂದು ಬಾಗಿಲು ತೆರೆದು ಹೊರಬಂದು ನಾಗಿಯ ಮನೆಯ ಹೊರದ್ವಾರಕ್ಕೆ ಬಲವಾದ 'ಬೆಟ್ಟರಿಲೈಟು' ಹಾಕಿತು. ಬಾಗಿಲ ಬಳಿ ಹೋಗಿ ಮೆಲ್ಲಗೆ ಬಾಗಿಲು ಬಡೆಯಿತು ಆ ಮೇಲೆ "ವೆಂಕಟೋ, ವೆಂಕಟೋ" ಎಂದು ಕೈಬೆರಳುಗಳನ್ನು ಮಡಿಸಿ ಬಾಗಿಲ ಸಂದಿಗೊತ್ತಿಟ್ಟು ಆ ಮಡಿಕೆಯ ತೂತಿನೊಳಗಿಂದ ಸಾಕಷ್ಟು ಗಟ್ಟಿಯಾಗಿ ವೆಂಕಟ್ರಮಣನನ್ನು ಕರೆಯಿತು. ಒಳಗಿದ್ದ ವೆಂಕಟ್ರಮಣನು ಎದ್ದು ಕೂತು ತಲೆತುರಿಸಿಕೊಂಡು ತುಸುಹೊತ್ತು ಯೋಚಿಸತೊಡಗಿದನು. ಎಂದೂ ಇಲ್ಲದ ಬೇಸರವು ಅಂದು ಅವನ ಮನಸ್ಸನ್ನು ಹಿಡಿದು ಕಾಡುತ್ತಿತ್ತು. ಸುರೆಯ ಅಮಲಿನ ಸೆರೆಯೊಳಗಿಂದಲೂ, 'ವಿಶ್ವಾಸಘಾತುಕ ಮಾಡಬೇಡ!' ಎಂದು ಅಂತರಂಗವು ಪದೇ ಪದೇ ಕೂಗಿಡುತ್ತಿತ್ತು. ವೆಂಕಟ್ರಮಣನಿಗೆ ನಿದ್ದೆಯೇ ಬಂದಿರಲಿಲ್ಲ. ತಲೆಗೇರಿದ ಅಮಲಿನ ಬಿಗಿತವು ಸಡಿಲಾದೊಡನೆಯೇ ವಿವೇಕವು ಇಣಿಕಹತ್ತಿತು ಅವನಲ್ಲಿ. ಅವನು ಏನೇನೋ ಯೋಚಿಸಿಕೊಂಡು ನೆಲದ ಮೇಲೆ ಹೊರಳಾಡುತ್ತಿದ್ದನು. ಹಣದಾಶೆಯಿಂದ ಕೊಟ್ಟ ಮಾತು, ಮಾತಿಗೆ ತಪ್ಪಿದರೆ ಪರಿಣಾಮ ಏನಾಗುವುದೋ ಎಂಬ ಭೀತಿ ಒಂದೆಡೆ; ತನ್ನ ಮೇಲಿನ ನಾಗಿಯ ಪುತ್ರ ಸಮಾನ ಪ್ರೀತಿ, ಅವಳ ಸಚ್ಚರಿತೆ ಹಾಗೂ ನಿರ್ದುಷ್ಟ ಪುತ್ರಿಗಾಗುವ ಗತಿಯ ಚಿಂತೆ ಇನ್ನೊಂದೆಡೆ ಹೀಗೆ ವೆಂಕಟ್ರಮಣನ ಮನಸ್ಸೆಂಬುದು ಗಡಿಯಾರದ 'ಪೆಂಡ್ಯುಲಮಿ'ನಂತೆ ಓಲಾಡುತ್ತಿತ್ತು. ಅದರಿಂದಲೇ ಶರೀರದ ಹೊರಳಾಟವೂ. ವೆಂಕಟು, ವೆಂಕಟು. ಎಲ್ಲಿ ಸತ್ತುಹೋದೆ! ಬಾಗಿಲು ತೆರೆಯುತ್ತೀಯೋ ಇಲ್ಲವೋ?' ಎಂಬ ನಿಷ್ಠುರೋಕ್ತಿಯು ಎದ್ದು ಕೂತ ವೆಂಕಟ್ರಮಣನ ಮನಸ್ಸಿನ ಓಲಾಟವನ್ನು ಉತ್ತರಕ್ಷಣದಲ್ಲೇ ನಿಲ್ಲಿಸಿ ಬಿಟ್ಟಿತು ಅವನು 'ಹೂಂ'-ಎಂದು ದೀರ್ಘ ಶ್ವಾಸಬಿಟ್ಟು ಎದ್ದು ಮೆಲ್ಲಗೆ ಬಾಗಿಲು ತೆರೆದನು. 'ಬೆಟ್ಟರಿ ಲೈಟಿನ' ವ್ಯಕ್ತಿಯು ಕೂಡಲೆ ಒಳಗೆ ಬಂದು ವೆಂಕಟ್ರಮಣನ ಕೈರಟ್ಟೆಯನ್ನು ಬಲವಾಗಿ ಹಿಡಿಯಿತು. ವೆಂಕಟ್ರಮಣನು 'ಅಯ್ಯೋ' ಎಂದು ಗಡಗುಟ್ಟಿ ನಡುಗಿದನು. 'ಮುಚ್ಚುಬಾಯಿ ಮೂರ್ಖ! ನಾವು

ಎಷ್ಟು ಹೊತ್ತು ಕಾಯುತ್ತಿರುವುದು ಹೊರಗೆ?' ಎಂದಿತು ವ್ಯಕ್ತಿ ಸಿಟ್ಟಿನ ಪಿಸುಮಾತಿನಿಂದ. "ನಾನಿನ್ನೇನು ಮಾಡಬೇಕಪ್ಪ ಹೇಳಿ, ಕೈಬಿಡಿ" ಎಂದು ವೆಂಕಟ್ರಮಣನು ಸ್ವಲ್ಪ ಶಕ್ತಿಯನ್ನುಪಯೊಗಿಸಿ ತೋಳನ್ನು ವ್ಯಕ್ತಿಯ ಸಡಿಲಾದ ಕೈ ಹಿಡಿತದಿಂದ ತಪ್ಪಿಸಿಕೊಂಡನು. "ಮಠದಲ್ಲಿ ಸ್ವಾಮಿರು ಹೇಳಿದ್ದೆಲ್ಲಾ ಮರೆತುಹೋಯಿತೇ? ಅವರೆಂದಂತೆ ಮಾಡು. ನನಗೋಸ್ಕರವಾಗಿ ನೀನೇನೂ ಮಾಡಬೇಕಾಗಿಲ್ಲ ತಿಳಿಯಿತೇ?' ಎಂದಿತು ವ್ಯಕ್ತಿ. ಒತ್ತಿಟ್ಟ ಸಿಟ್ಟಿನ ಕತ್ತಿನೊಳಗಿಂದ ಸ್ವಾಮಿರ ಮಾತೆತ್ತಿದೊಡನೆಯೇ ವೆಂಕಟ್ರಮಣನು ಪ್ರತಿ ಮಾತೆತ್ತದೆ ಕೂಡಲೆ ಹೊರಚಾವಡಿಯೊಳಗಿಂದ ಬಾಗಿಲಿಲ್ಲದ ಉಣ್ಣುವ ಕೋಣೆಗೆ ಹೋಗಿ ಆದರ ಎಡಭಾಗದ ನಾಗಿ ಲಲಿತೆಯರು ಮಲಗಿದ್ದ ಕೋಣೆಯ ಬಾಗಿಲಿಗೆ ಬಡಬಡನೆ ಬಡೆದು, 'ಅಮ್ಮಾ, ಅಮ್ಮಾ! ಬಾಯಾರಿಕೆಯಾಗುತ್ತದೆ ಎದೆಯೆಲ್ಲಾ ಸುಡುತ್ತಿದೆ. ಕುತ್ತಿಗೆ ಒಣಗಿಹೋಗಿದೆ ಸ್ವಲ್ಪ ನೀರುಕೊಡಿ, ಅಷ್ಟು ಮಾಡಿ" ಎಂದು ಅತಿ ದೈನ್ಯದಿಂದ ಬೇಡಿಕೊಂಡನು. 'ಅಮ್ಮಾ ಅಮ್ಮಾ! ಆದಾರು? ಅಯ್ಯೋ! ಅಯ್ಯೋ! ಬಾಗಿಲು ತೆರೆಯಬೇಡ! ಯಾರೋ ದುರಾತ್ಮರು.........."ಎಂದು ಮುಂದೆ ಮಾತಾನಾಡಲಾರದೆ ಲಲಿತೆಯು ಹೆದರಿ ಕೂಗಿಬಿಟ್ಟಳು. ಮೊದಲೇ ಎಚ್ಚರವಾಗಿದ್ದ ನಾಗಿಯು ದಡಬಡನೆ ಎದ್ದು ಓಡಿಹೋಗಿ ಲಲಿತೆಯನ್ನು ಬಿಗಿಹಿಡಿದು, "ಹೆದರಬೇಡ ಮಗು ಹೆದರಬೇಡ, ವೆಂಕಟ್ರಮಣನಿಗೆ ಬಾಯಾರಿಕೆಯಾಗುವುದಂತೆ ಪಾಪ! ನಾನು ಆಗಲೇ ಹೇಳಿದೆ ಅವನೊಡನೆ, ಬಾಯಾರಿಕೆಯಾಗಬಹುದು ಹಾಲು ಕುಡಿದು ಮಲಗೆಂದು. ಆಗ ಬಿದ್ದುಕೊಂಡ ಸ್ಮೃತಿಯಿಲ್ಲದೆ. ಈಗ ಎದ್ದು ಕೂಗುತ್ತಿದ್ದಾನೆ. ನೀನು ಸ್ವಸ್ಥ ಮಲಗು ಮಗು. ಯಾವ ಭೀತಿಯೂ ಇಲ್ಲ. ನಾನವನಿಗೆ ಸ್ವಲ್ಪ ನೀರು ಕೊಟ್ಟು ಬರುತ್ತೇನೆ" ಎಂದು ನಾಗಿಯು ಲಲಿತೆಯನ್ನು ಸಮಾಧಾನಪಡಿಸಿ ಮಲಗಿಸಿ ಬೆಂಕಿ ಕಡ್ಡಿ ಕೀರಿ ಚಿಮುಣಿ ಹಚ್ಚಿದಳು. ಆದರೆ ಲಲಿತೆಗೆ ಸಮಾಧಾನವಾಗಲಿಲ್ಲ ಅವಳ ಎದೆಯು ಬಡಬಡನೆ ಬಡೆಯುತ್ತಿತ್ತು. ಅವಳು ಮಲಗಲಾರದೆ ಎದ್ದು ಕೂತಳು. ನಾಗಿಯು ಕೈಯಲ್ಲಿ ಚಿಮುಣಿ ಹಿಡಕೊಂಡು ಬಾಗಿಲು ತೆರೆದೊಡನೆಯೇ ಮೂರು ನಾಲ್ಕು ಮಂದಿ ಒಮ್ಮೆಯೇ ಒಳನುಗ್ಗಿದರು

“ಅಯ್ಯೋ, ಕಳ್ಳರು! ಕಳ್ಳರು!” ಎಂದು ನಾಗಿಯು ದಿಗಿಲುಗೊಂಡು ಚಿಮುಣಿಯ ದೀಪವನ್ನು ದಡಕ್ಕನೆ ಕೆಳಕ್ಕೆ ಹಾಕಿಬಿಟ್ಟಳು. ಅದು ನೊಂದಿ ಹೋಯಿತು. ಆಗ ‘ಬೆಟ್ಟರಿ ಲೈಟಿನ’ ವ್ಯಕ್ತಿಯು ಲೈಟನ್ನು ಚಮಕಿಸಿ “ಹಿಡಿಯಿರಿ ರಂಡೆಗಳಿಬ್ಬರನ್ನೂ!” ಎಂದು ಗರ್ಜಿಸಿತು. ಒಡನೆಯೇ ಒಬ್ಬನು ನಾಗಿಯ, ಇನ್ನೊಬ್ಬನು “ಅಯ್ಯೋ ಅಮ್ಮಾ!” ಎಂದು ಥಟ್ಟನೆ ಚಾಪೆಯಿಂದೇಳುವ ಲಲಿತೆಯ ಕುತ್ತಿಗೆಗಳನ್ನೊತ್ತಿಹಿಡಿದರು. ಲಲಿತೆಯು ಮತ್ತೂ ‘ಅಯ್ಯೋ’ ಎಂದು ಮೊರೆಯಿಡಲು ಅವಳನ್ನು ಹಿಡಿದವನು ತಾನು ಕುತ್ತಿಗೆಗೆ ಸುತ್ತಿದ್ದ ಶಾಲನ್ನೆಳೆದು ಅವಳ ಬಾಯಿಗೆ ತುರುಕಿ ಒತ್ತಿಹಿಡಿದನು. ಅಷ್ಟರಲ್ಲಿ ನಾಗಿಯೂ ‘ಅಯ್ಯೋ ಬಿಡಿರಿ!’ ಎಂದು ಬೊಬ್ಬೆ ಹಾಕಿದಾಗ ‘ಬೆಟ್ಟರಿಲೈಟಿನ’ ವ್ಯಕ್ತಿಯು ನಡುಕಟ್ಟಿನಿಂದ ಬಿಚ್ಚುಕತ್ತಿಯನ್ನೆತ್ತಿಹಿಡಿದು, ‘ಇದೋ ಜಾಗ್ರತೆ ಬೊಬ್ಬೆ ಹಾಕಿದರೆ ಕುತ್ತಿಗೆ ಕಡಿದು ಕೊಂದುಹಾಕುವೆನು ! ನಾಯಿಯಂತೆ ನಾನು ಹೇಳಿದ ಹಾಗೆ ಕೇಳಿದೆಯಾದರಾಯಿತು” ಎಂದು ಬೆದರಿಸಿತು. ಬಿಚ್ಚುಕತ್ತಿಯನ್ನು ಕಂಡಾಕ್ಷಣ ನಾಗಿಗೆ ಮಿಂಚುಬಡಿದಂತಾಯಿತು. ತನ್ನನ್ನು ಹಿಡಿದವನ ಕೈಯಿಂದ ಜಾರಿ ‘ಬೆಟ್ಟರಿಲೈಟ’ನ ವ್ಯಕ್ತಿಯು ಕಾಲಡಿಗೆ ಬಿದ್ದು “ನರಸಿಂಹ ಭಟ್ಟರೇ, ನನಗೇನು ಬೇಕಾದರೂ ಮಾಡಿ ನನ್ನ ಕುತ್ತಿಗೆಯನ್ನು ಈಗಲೇ ಬೇಕಾದರೆ ಕಡಿದುಹಾಕಿ. ಆದರೆ...ಆದರೆ ನನ್ನ ಮಗು...ನನ್ನ ಮಗು ಲಲಿತೆ” ಎನ್ನುವಷ್ಟರಲ್ಲಿ ನಾಲಿಗೆಯು ಶಕ್ತಿಗುಂದಿ ಒಳಸರಿಯಿತು. “ಈಗೇಕೆ ಕಾಲುಹಿಡಿಯುವೆ ರಂಡೆ! ಸ್ವಾಮಿರಿಗೆ ಮಾತುಕೊಟ್ಟು ಆ ಮೇಲೆ ಅದಕ್ಕೆ ತಪ್ಪಿ ಎಷ್ಟು ಸಲ ಜನಕಳುಹಿಸಿದರೂ ಮಠದ ಬಾಗಿಲಿಗೆ ಬಾರದಿರಲು ಎಷ್ಟರ ಪಿತ್ತವೇರಿರ ಬೇಕು ನಿನ್ನ ತಲೆಗೆ! ನಿನ್ನ ಮಗಳೊಬ್ಬಳ ಅಹಂಕಾರವೇ ಅಹಂಕಾರ ವಂತೆ! ಮಾನಮಾರಿ ಜೀವಿಸಲು ಅವಳು ಸಿದ್ಧಳಿಲ್ಲಂತೆ. ನೋಡಬೇಕು ಬೀದಿಸೂಳೆಯ ಮಾನ ಎಲ್ಲಿವರೆಗೆ ಬರುತ್ತದೆಂತ!” ಎಂದು ನರಸಿಂಹ ಭಟ್ಟನು ತನ್ನ ಮನುಷ್ಯತ್ವವನ್ನು ಮೂಲೆಗೊತ್ತಿ ಸಿಂಹಸ್ವರೂಪಿಯೇ ಆಗಿ ನಾಗಿಯನ್ನು ಕಾಲ್ಚೆಂಡಿನೋಪಾದಿ ತುಳಿದುಬಿಟ್ಟ. ಇಷ್ಟರಲ್ಲಿ ಅದಾವ ಶಕ್ತಿಯಿಂದಲೋ ಲಲಿತೆಯು ತನ್ನನ್ನು ಹಿಡಿದವನ ಕೈಗಳಿಂ

ಡನ್ನೂ ಬಿಡಿಸಿ "ಬೀದಿಸೂಳೆ ಯಾರು ದುರಾತ್ಮಾ?" ಎಂದು. ಸಿಂಹಿಣಿ ಯಂತೆ ನರಸಿಂಹನ ಮೇಲೆ ಹಾರುವಷ್ಟರಲ್ಲಿ ಅವಳನ್ನು ಹಿಡಿದಿದ್ದವನು ಅವಳ ನಡುವನ್ನು ಬಿಗಿಯಾಗಿ ಹಿಡಿದು ಹಿಂದಕ್ಕೆಳೆದನು. ಲಲಿತೆಯು, 'ಅಯ್ಯೋ' ಎಂದು ಕೂಗಿ ಬೋಧತಪ್ಪಿ ತನ್ನನ್ನು ಹಿಡಿದವನ ಮೇಲೊರಗಿದಳು. ಅವಳ ಆಯ್ಯೋ ಎಂಬ ಕೂಗು ನೆರೆಗರೆಯವರ ಕರ್ಣಕುಹರಗಳಿಗೆಲ್ಲಾ ಹೊಕ್ಕು ಭಗ್ನಮನೋರಥವಾಗಿ, 'ಅಯ್ಯೋ, ಅಯ್ಯೋ, ಅಯ್ಯೋ, ಅಯ್ಯೋ'! ಎಂಬ ನಿರಾಶೆಯ ಪ್ರತಿ ಧ್ವನಿಯಿಂದ ವಾತಾವರಣದಲ್ಲಿ ಕ್ಷೀಣ ಕ್ಷೀಣವಾಗುತ್ತಾ ಲೀನವಾಯಿತು. ಲಲಿತೆಯ ನಡುವನ್ನು ಉಕ್ಕಿನ ಕಟ್ಟಿನಂತೆ ಬಿಗಿಹಿಡಿದ ನರ ರಾಕ್ಷಸನು ಅವಳು ಪ್ರಜ್ಞೆಗೆಟ್ಟುದನ್ನು ಕಂಡು ಬೆದರಿ ಕೂಡಲೆ ಹಿಡಿತವನ್ನು ಸಡಿಲಿಸಿ ಅವಳನ್ನು ನೆಲಕ್ಕೊರಗಿಸಿದನು. ನರಸಿಂಹ ಭಟ್ಟನ ತುಳಿತದ ಪೆಟ್ಟು ಬಲವಾಗಿ ಕೋಣೆಯ ಗೋಡೆಯ ಬದಿಯಲ್ಲಿ ಅರೆ ಮರವೆಯಿಂದ ಬಿದ್ದು ಹೊರಳಾಡುತ್ತಿದ್ದ ನಾಗಿಯು ಥಟ್ಟನೆದ್ದು "ಅಯ್ಯೋ, ಏನಾಯಿತು? ನನ್ನ ಮಗುವಿಗೇನಾಯಿತು? ಅಯ್ಯೋ ದೇವರೆ!" ಎಂದು ತಲೆತಲೆ ಬಡಕೊಂಡಳು. "ಏನು ನೋಡುತ್ತಿರುವುದು ನೀವು ಕಣ್ಣು ಕಣ್ಣು? ಅವಳು ಬೊಬ್ಬೆಹಾಕುವುದು ಕೇಳುವುದಿಲ್ಲವೇ? ಅವಳನ್ನು ಹಿಡಿದು ವಸ್ತ್ರ ತುರುಕಿ ಬಾಯಿಗೆ! ಕೈಕಾಲು ಕಟ್ಟಿ ಮೋಟರ್‌ಕಾರಿಗೊಯ್ದು ಹಾಕಿ ಮೊದಲು. ಆಮೇಲೆ ಅವಳ ಮಗಳನ್ನೊಯ್ಯಬಹುದು ಅವರಿಗೆ ಅವಳಿಗೆ ಬೋಧ ಬರುವುದೋ ನೋಡುವ. ಬರದಿದ್ದರೆ ಮಠದಲ್ಲಿ ಬಂದೀತು" ಎಂದು ನರಸಿಂಹನ ಕಟ್ಟಾಜ್ಞೆಯಾಯಿತು ಕೂಡಲೇ ಇಬ್ಬರು ನಾಗಿಯನ್ನು ಹಿಡಿದು ಅವಳ ಬಾಯಿಗೆ ವಸ್ತ್ರ ತುರುಕ ಹೋದಾಗ, "ಭಟ್ರೇ! ನೀವು ಹೇಳಿದಂತೆ ಕೇಳುವೆನು. ನೀವು ಎಲ್ಲಿಗೆ ಬರಬೇಕೆಂದು ಹೇಳುವಿರೋ ಅಲ್ಲಿಗೆ ಬರುವೆನು. ಆದರೆ ನನ್ನ ಮಗಳಿಗೊಮ್ಮೆ ಬೋಧ ಬರುವುದೋ ನೋಡಬಿಡಿರಿ. ಸ್ವಲ್ಪ ನೀರು ತಂದು ಅವಳ ಮುಖಕ್ಕೆ ಚಿಮುಕಿಸಬಿಡಿ. ಅವಳ ಪ್ರಾಣ ಹಾರಿಹೋದೀತು! ನಾನು ಮಾಡಿದ ಅಪರಾಧಗಳನ್ನೆಲ್ಲಾ ಕ್ಷಮಿಸಿ ನನಗಷ್ಟೊಂದು ಉಪಕಾರ ಮಾಡಿ' ಎಂದು ಗೋಳಿಡುತ್ತಾ ನಾಗಿಯು ಪುನಃ ನರಸಿಂಹನ ಕಾಲಿ

ಗೆರಗಿದಳು. 'ಈಗ ಬುದ್ಧಿ ಬಂತೇ? ನಿನ್ನ ಮಗಳೇನೂ ಸತ್ತಿಲ್ಲ. ಆ ಭೀತಿ ಬೇಡ ನಿನಗೆ ಇದೇ ಬುದ್ಧಿ ಮೊದಲು ಬರುತಿದ್ದರೆ ಎಷ್ಟು ಮರ್ಯಾದೆ ಯಿತ್ತು! ಎಷ್ಟು ಸುಖವಿತ್ತು! ನಿನ್ನ ಮಗಳು ಬಹಳ ಹೆಮ್ಮೆನವಳು ನಾನು ದುರಾತ್ಮನಂತೆ! ಹುಂ ಸೂಳೆಯಿಂದಲೂ ನಾನಾಮಾತು ಕೇಳಬೇ ಕಾಯಿತು! ಅವಳಿಗೆ ಪ್ರಜ್ಞೆ ಬಂದರೆ ಪುನಃ ಗಲಾಟೆಮಾಡದಿರಲಿಕ್ಕಿಲ್ಲ ನಾನು ಹೇಳುವಂತೆ ಕೇಳುವಿಯಾದರೆ ನಾಯಿಯಂತೆ ಹೋಗಿ ಮೋಟರ್ ಕಾರಿನಲ್ಲಿ ಕುಳಿತುಕೋ. ನಿನ್ನ ಮಗಳನ್ನು, ಬಾಯಿಗೆ ವಸ್ತ್ರ ತುರುಕಿ ಸಿಟ್ಟು ಕೈಕಾಲು ಕಟ್ಟಿಯೇ ಕೊಂಡೊಯ್ಯಬೇಕು ಎಲ್ಲಿಯಾದರೂ ಮಧ್ಯ ಮಾರ್ಗದಲ್ಲಿ ಬೋಧಬಂದುಬಿಟ್ಟರೆ ಬೊಬ್ಬೆಹಾಕಿಬಿಟ್ಟಾಳು' ಎಂದ ನರಸಿಂಹ ಬೋರ್ಗಲ್ಲೇ ಆಗಿರುವ ಕೊಲೆಗಡುಕ ಹೃದಯದಿಂದ. "ಅಯ್ಯಪ್ಪ ನಿಮ್ಮಿಚ್ಛೆಬಂದಂತೆ ಮಾಡಿ" ಎಂದು ನಾಗಿಯು ಚಲಿಸುವ ಗೊಂಬೆಯಂತೆ ಹೊರಗೆ ಸರಿದಾಗ ಕೈದಿಯೋಪಾದಿ ಅವಳ ಎಡಬಲಗಳಲ್ಲಿ ಕೋಣೆಯೊಳಗಿಂದಿಬ್ಬರು ನಡೆದರು. ಮೂರನೆಯವನು ಲಲಿತೆಯ ಬಾಯಿಗೆ ವಸ್ತ್ರ ತುರುಕಿ ಆದರ ಮೇಲೊಂದು ವಸ್ತ್ರವನ್ನು ಬಲವಾ ಬಿಗಿದು ಹಿಂದೆ ಕುತ್ತಿಗೆಗೆ ಕಟ್ಟಿ ಕೈಕಾಲುಗಳನ್ನು ತಾನು ತಂದಿದ್ದ ಹಗ ದಿಂದ ಗಟ್ಟಿಯಾಗಿ ಬಿಗಿದನು ಆಗ ಲಲಿತೆಗೆ ಬೋಧೆಯಾಯಿತು. ಕೂಗುವ, ಮತ್ತು ಕೈಕಾಲು ಬಿಡಿಸಿಕೊಳ್ಳುವ ಅವಳ ಪ್ರಯತ್ನ ನಿಷ್ಫಲವಾಯಿತು

ಮೈ ಎಷ್ಟು ಕೊಡಹಿದರೂ ಫಲವಾಗಲಿಲ್ಲ. ಕಡೆಗೆ ಸೋತ ಸುಮ್ಮನೆ ಬಿದ್ದುಬಿಟ್ಟಳು. ಕಂಗಳಲ್ಲಿ ಧಾರೆಕಟ್ಟಿ ನೀರು ಹರಿಯ ತೊಡಗಿತು. ನಿರ್ದುಷ್ಟ ಬಾಲೆಯ ಈ ಕಣ್ಣೀರಧಾರೆಯು ಎಂತ ಕಠಿಣ ಹೃದಯವನ್ನಾದರೂ ಒಂದೊಮ್ಮೆ ಕರಗಿಸಿ ಬಿಡುತ್ತಿತ್ತು ಲಲಿತೆಯನ್ನು ಬಿಗಿದು ಕಟ್ಟಿದವನೇ ಅವಳ ಕಣ್ಣೀರನ್ನು ನೋಡಲಾರ ಉಗುಳುವ ನೆವದಿಂದ ಹೊರನಡೆದನು ಆದರೆ ನರಸಿಂಹ ಭಟ್ಟ ತನ್ನ ಸಾಹಸಕ್ಕೆ ತಾನೇ ಮೆಚ್ಚಿದ ಸದರ್ಪ ಮುಖ ಮುಪ್ರೇಂಕ್ಷಿ ಮಂದಸ್ಮಿತನಾಗಿ ಲಲಿತೆಯ್ನು ನೋಡುತ್ತಾ ನಿಂತನು ಲಲಿತೆ ಕಣ್ಣೀರು, ಕಾವೇರಿ ಕೆಂಡದಂತಾದ ನರಸಿಂಹನ ಹೃದಯ ಕತ್ತಿ

ಧಾರೆಯನ್ನು ಮತ್ತಷ್ಟು ಗಟ್ಟಿಮಾಡುವ ನೀರಾಗಿ ಪರಿಣಮಿಸಿತು. ಸ್ವಲ್ಪ ಹೊತ್ತಿನಲ್ಲಿ ನಾಗಿಯೊಂದಿಗೆ ಹೋದವರಲ್ಲೊಬ್ಬನೂ ಲಲಿತೆಯನ್ನು ಬಿಗಿದವನೂ ಇಬ್ಬರೂ ತಲೆತಗ್ಗಿಸಿಕೊಂಡು ಒಳಗೆ ಬಂದು ಲಲಿತೆಯ ನ್ನೆತ್ತಿ ಕೊಂಡೊಯ್ದು ಮೋಟರ್ ಕಾರಲ್ಲಿರಿಸಿದರು. ಅವರ ಹಿಂದೆಯೇ ಹೋದ ನರಸಿಂಹ ಭಟ್ಟನು ನಾಗಿಯ ಕೋಣೆಯ ಮತ್ತು ಮಾರ್ಗದೆ ದುರಿನ ಬಾಗಿಲೆಳೆದು, 'ವೆಂಕಟು ವೆಂಕಟು' ಎಂದು ಕರೆದಾಗ ವೆಂಕಟ್ರ ಮಣನ ಪತ್ತೆಯಿಲ್ಲ "ನಾವು ಕೋಣೆಯೊಳಗೆ ಪ್ರವೇಶಿಸುವಾಗಲೇ ವೆಂಕಟು ಕುಂಡೆಗೆ ಕಾಲು ಕೊಟ್ಟಿರಬೇಕು" ಎಂದ ಉಳಿದ ಮೂರು ಮಂದಿಯಲ್ಲೊಬ್ಬ "ಮೂರುಕಾಸಿನವನೆಲ್ಲಿಯೋ! ಇಂತಹ ಘಟಿಂಗ ರನ್ನು ನಂಬಿಕೊಂಡರಾದೀತು! ಸ್ವಾಮಿರೊಬ್ಬರಿಗೆ ಅಂಥವರೇನಂದರೂ ನಂಬಿಗೆಯೇ, ಹೋಗಲಿ ಅವ, ನೀವು ಜಾಗ್ರತೆಯಿಂದ ಇವರಿಬ್ಬರನ್ನೂ ಗಟ್ಟಿ ಹಿಡಕೊಂಡು ಕೂತುಕೊಳ್ಳಿ" ಎಂದು ತಾನೂ ಡ್ರ್ಯಾವರಿನ ಸೀಟಿನ ಎಡಗಡೆ ಕೂತು ಕಾರು ಯಾಕೆ ಹೋಗುವುದಿಲ್ಲೆಂದು ನೋಡುವಾಗ ಸ್ಟೀಯರಿಂಗಿನ ಮೇಲೊರಗಿ ನಿದ್ದೆಮಾಡಿದ ಡ್ರ್ಯಾವರನಿಗೆ ಈ ಲೋಕದ ಬೋಧೆಯೇ ಇಲ್ಲ! 'ಹ್ಯೋ ಹ್ಯೋ, ಡ್ರ್ಯಾವರ್ ಸಾಹೇಬ್ರು! ಇದೇ ನಯ್ಯಾ?" ಎಂದು ಟೆಟ್ಟಿರಿ ಲೈಟಿನ ಕಡೆಯನ್ನುಡ್ರ್ಯಾವರನ ಮೈಗೊತ್ತಿ ಎಬ್ಬಿಸಿದನು 'ಹಾ.......'ಎಂದು ಡ್ರ್ಯಾವರನು ಗೇಣುದ್ದ ಬಾಯಿ ಮಾಡಿ ಆಕಳಿಸಿ ಎರಡೂ ಅಂಗೈಗಳನ್ನು ಚಕಚಕತಿಕ್ಕಿ ಮುಖ ಸವರಿ "ಆಯ್ತೋ ಸ್ವಾಮಿ? ಹೋಗುವುದೋ" ಎಂದ. "ನಮ್ಮ ಕೆಲಸವಾಗಿ ತಾಸು ಅರ್ಧವಾಯಿತು. ನೀವು ಎಲ್ಲಿದ್ದೀರೋ ಏನೋ? ಎಂದು ತಮಾಷೆ ಮಾಡಿದ ನರಸಿಂಹ ಮುಗುಳ್ನಗೆ ನಕ್ಕು. "ನಾನು ಕೂಡಾ ನೀವು ಯಾವಾಗ ಬರುತ್ತೀರೆಂದು ಸ್ಟೀಯರಿಂಗ್ ಹಿಡಿದೇ ಕಾದಿದ್ದೆ ಸ್ವಾಮಿ. ಹೋಗಬಹುದಲ್ಲ ಈಗ?" ಎಂದ ಡ್ರ್ಯಾವರ. "ಕ್ಯ್ರೊಶ್, ಬೇಗ ಹೋಗುವ ತಡವಾಯಿತು. ಸ್ವಾಮಿರು ಇನ್ನೆಷ್ಟು ಬೈಯ್ಯುವರೋ? ನಮ್ಮ ಕಷ್ಟ ಅವರಿಗೇನು ಗೊತ್ತು" ಎಂದು ನರಸಿಂಹ ಭಟ್ಟನು ಮಾತು ಮುಗಿಸುವಷ್ಟರಲ್ಲಿ ಜರ್ಕನೆ ಮೋಟರ್ ಕಾರು ಸ್ಟಾರ್ಟ್‌ಮಾಡಿ ಓಡಿಸಿಬಿಟ್ಟ ಡ್ರ್ಯಾವರ್.

ಅಧ್ಯಾಯ ೩

"ಅಯ್ಯಯ್ಯೋ! ಅಯ್ಯೋ!! ಅ...ಯ್ಯೋ......!"

ಆ ರಾತ್ರಿ ಶಿವಪುರ ಮಠದ ಶಿವಾನಂದ ಸ್ವಾಮಿರಿಗೆ ತುಸ ಹೊತ್ತು ಹಾಸಿಗೆಯಲ್ಲಿ ಮಲಗಿ, ಆ ಮೇಲೆ ಜಗ್ಗನೆದ್ದು ತೀವ್ರ ಅಸಹಿಷ್ಣುತೆಯಿಂದ ರಸ್ತೆಬದಿಯ ಕಿಟಕಿಯಿಂದ ಇಣಿಕಿಣಿಕಿ ನೋಡುವುದೊಂದೇ ಕೆಲಸ. ಪ್ರತಿ ಹತ್ತು ನಿಮಿಷಕ್ಕೊಮ್ಮೆ ಎಂಬಂತೆ ಈ ಕ್ರಿಯೆಯನ್ನವರು ಯಾಂತ್ರಿಕವಾಗಿ ನಡೆಸುತ್ತಿದ್ದರು. ಅದೊಂದು ಉತ್ತೇಜಕತೆಯು ಅವರ ನರನಾಡಿಗಳಲ್ಲಿ ತುಂಬಿ ಅಮಲೇರಿದವರಿಗಿಂತಲೂ ಕಡೆಯಾಗಿ ಮಾಡಿದ್ದಿತವರನ್ನು. ಮದವೇರಿದ ಆನೆಯಂತಾಗಿದ್ದರವರು ಅಂದಿನ ರಾತ್ರಿ. ಅದೊಂದು ದಿನ ಶಿವಗುಡಿಗೆ, ಶಿವಪೂಜೆಗೆಂದು ತನ್ನ ಗೆಳತಿಯರೊಂದಿಗೆ ಬಂದಿದ್ದ ಲಲಿತೆಯನ್ನು ಕಂಡಂದಿನಿಂದ ಶಿವಾನಂದರ ಹೃದಯದಲ್ಲುಂಟಾಗಿದ್ದ ಕಾಮತೃಷೆಯು ಇಂದು ತೃಪ್ತಿಹೊಂದುವ ನಿರೀಕ್ಷೆಯಿಂದ ಮತ್ತಷ್ಟು ಪ್ರಕೋಪಗೊಂಡು ಹೃದಯವನ್ನೇ ಸುಡುತ್ತಿತ್ತು. ಅವರು ಮತಿವಿಕಳರಂತೆ ಆಗಾಗ ಏನೇನೋ ತನ್ನಷ್ಟಕ್ಕೆನೇ ಗುಡುಗುಡಿಸುತ್ತಾ ಕ್ಷೋಭೆಗೊಂಡು ಗಡಗಡ ನಡುಗುತ್ತಿದ್ದರು. ಕಿಟಕಿಯಲ್ಲಿ ಇಣಿಕಿಣಿಕಿ ಸಾಕಾಗಿ ಬುಸ್ಸೆಂದು ಬುಸುಗುಟ್ಟುತ್ತಾ ಹಾಸಿಗೆಯ ಮೇಲೆ ಕೈಕಾಲು ಬಿಟ್ಟು ಮರದ ದಿಂಬಿನಂತೆ ಬಿದ್ದು ಬಿಟ್ಟರು ಇದೇ ರೀತಿ ನಡೆದರೆ ಅವರ ಹೃದಯವೆಲ್ಲಿ ಒಡೆದುಹೋಗುವುದೋ ಎಂದು ಭೀತಿಪಡಬೇಕಾಗಿತ್ತು.

ಅಷ್ಟರಲ್ಲಿ ಬಡಬಡ ಬಾಗಿಲು ತಟ್ಟಿದ ಶಬ್ದವಾಯಿತು. ಆ ಶಬ್ದವು ಶಿವಾನಂದರ ಕ್ಷೋಭೆಯನ್ನೆಲ್ಲಾ ಕ್ಷಣಮಾತ್ರದಲ್ಲಿಳಿಸಿ ಬಿಡುವ ಮಂತ್ರಶಕ್ತಿಯಾಯಿತು. ಅವರು ಹೊಸ ಜೀವ ಪಡೆದವರಂತೆ ಅತ್ಯುಲ್ಲಾಸದಿಂದ ತಕ್ಷಣವೇ ಹಾಸಿಗೆಯಿಂದೆದ್ದು ಬಾಗಿಲು ತೆರೆದು ಅತ್ಯಂತ ಉತ್ಸುಕತೆಯಿಂದ ಕತ್ತು ನೀಡಿ ಹೊರ ನೋಡಿದರು. ಆಗ ಎದುರಿನಲ್ಲಿ ನರಸಿಂಹ ನಾಗಿಯರು ಮಾತ್ರ ನಿಂತಿರುವುದನ್ನು ಕಂಡು--ಎಷ್ಟೊಂದು ಉತ್ಸಾಹದಿಂದ ಕತ್ತು ನೀಡಿದರೋ ಅಷ್ಟೇ ನಿರುತ್ಸಾಹದಿಂದ ಅದನ್ನೊ

ಗೆಳೆದು ಬಿಟ್ಟರು. ಸಿಟ್ಟಿನ ಭರದಲ್ಲಿ ಮಾತಾಡುವುದೇನೆಂದು ಅವರಿಗೆ ತಿಳಿಯಲಿಲ್ಲ ಉಗ್ರ ನರಸಿಂಹರಾಗಿ, ಗೂಡೊಳಗಣ ಹಸಿದ ಸಿಂಹವು ಇನ್ನೂ ತನಗೆ ತಿನ್ನಸಿಗದೆ ಹೊರಗೆಯೇ ತೂಗಾಡಲ್ಪಟ್ಟಿರುವ ಮಾಂಸ ವನ್ನು ಕಂಡು ಗೂಡಿನ ಸರಳುಗಳ ನಡುವೆ ಬಾಯಿಹಾಕಿ ಅಡ್ಡಬರುವ ಸರಳುಗಳನ್ನು ಕಟಕಟನೆ ಕಡಿವಂತೆ, ತನ್ನ ಇಚ್ಛಾಪೂರ್ತಿಗೆ ದೊಡ್ಡ ತಡೆಯಾಗಿರುವ ಸ್ವಾಮಿತ್ವದ ಬಂಧನವನ್ನೇ ಕಟ ಕಟ ಕಡಿವಂತೆ ಹಲ್ಲು ಕಡಿದರು. ಆ ಮೇಲೆ ಉನ್ಮತ್ತನಂತೆ, ನರಹಿಂಹ ಭಟ್ಟನ ಹುಲುಸಾಗಿ ಬೆಳೆದ ಜುಟ್ಟನ್ನು ಗಟ್ಟಿಯಾಗಿ ಹಿಡಿದು ಒಳಗೆಳೆದು, "ಈ ರಂಡೆ ಯಾಕೆ? ಅವಳೆಲ್ಲಿ?" ಎಂದು ಗರ್ಜಿಸಿದರು ನರಸಿಂಹನ ಕಪಾಲವೇ ಎದ್ದು ಬರುವಂತಾಯಿತು. ಅವನು, "ಕ್ಷ—ಕ್ಷ—ಕ್ಷಮಿಸ ಬೇಕು ಪರಾಕೆ! ಅ—ಅವಳೂ ಇದ್ದಾಳೆ" ಎಂದು ಮೊರೆಯಿಟ್ಟನು. ನರಸಿಂಹಿನ ಅವಸ್ಥೆಯನ್ನು ಕಂಡು ಆ ದುಃಖದಲ್ಲಿಯೂ ನಾಗಿಯ ತುಟಿಗಳಲ್ಲಿ ನಗೆಯು ತನ್ನಂತೆ ನೆಗೆದುಬಂತು. ಅವಳು ಸೆರಗಿನ ತುದಿ ಯಿಂದ ತುಟಿಗಳನ್ನು ಮರೆಮಾಡಿದಳು. "ಅವಳೂ ಬಂದಿದ್ದಾಳೆ" ಎಂದೊಡನೆಯೇ ನರಹಿಂಹನ ಜುಟ್ಟಿನ ಕೈ ಥಟ್ಟನೆ ಬಿಟ್ಟುಹೋಯಿತು. ಶಿವಾನಂದರ ಉರಿಮುಸಗಿದ ಮುಖಕ್ಕೆ ಫಕ್ಕನೆ ಪನ್ನೀರು ಚೆಲ್ಲಿದಂತಾ ಯಿತು. ಅವರು ನರಸಿಂಹನ ಕುರಿತು ಮೊದಲು ಎಷ್ಟು ಜೇಗ ಬಹು ಕ್ರೋಧಗೊಂಡಿದ್ದರೊ ಅಷ್ಟೇ ಬೇಗ ಈಗ ಅತ್ಯಂತ ಪ್ರಸನ್ನರಾದರು "ನೀನು ಹೋದರೆ ಹಾಗೆಯೇ ಹಿಂದೆ ಬರುವುದುಂಟೇ ನರಸಿಂಹ? ಆದರೆ ಅವಳೆಲ್ಲಿ?" ಎಂದು ಬಹಳ ಉತ್ಕಂಠಿತರಾಗಿ ಪ್ರಶ್ನಿಸಿದರು. ನರಸಿಂಹನು ಜುಟ್ಟು ಸರಿಮಾಡಿಕೊಳ್ಳುತ್ತಾ, "ಹೌದೌದು, ಒಮ್ಮೆ ತುಳಿಯುವುದು, ಮತ್ತೊಮ್ಮೆ ತಲೆಯ ಮೇಲೆ ಹೊತ್ತುಕೊಳ್ಳುವುದು! ನನಗಿನ್ನು ಈ ಚಾಕರಿಯೇ ಬೇಡ" ಎಂದ ಸ್ವಲ್ಪ ಎದೆಗೊಂಡು. "ಸಾಕು ಸಾಕು ನಿನ್ನ ಅಧಿಕಪ್ರಸಂಗ! ಅವಳೆಲ್ಲಿರುವಳು ಹೇಳು" ಎಂದರು ಸ್ವಾಮಿರು ಪುನಃ ಸಿಟ್ಟಿನ ನಟನೆಯಿಂದ. "ಅವಳಲ್ಲಿರುವಳೆಂದು ಅವಳ ತಾಯಿಯೇ ಹೇಳುವಳು. ಅವಳೊಡನೆಯೇ ಕೇಳಿರಿ" ಎಂದು ನರ ಸಿಂಹನು ನಾಗಿಯನ್ನು ಒಳಕರೆದನು. ನಾಗಿಯು ಒಳ ಬರುವಾಗಲೆ,

"ಪರಾಕೆ, ಕ್ಷಮಿಸಬೇಕು. ನಾನು ಮಾಡಿದ ಅಪರಾಧವನ್ನು" ಎಂದು ಸ್ವಾಮಿರ ಪವಿತ್ರ ಪಾದಕ್ಕೆ ತನ್ನಂತಹ ಪಾಪಿಯ ಗಾಳಿ ಕೂಡಾ ಸೋಕ ಲಾಗದೆಂದು ದೂರದಲ್ಲೇ ಅಡ್ಡಬಿದ್ದಳು. "ಎಲ್ಲಿ ನಿನ್ನ ಮಗಳೆಲ್ಲಿ ಹೇಳು" ಎಂದು ಮತ್ತಷ್ಟು ಸಿಟ್ಟು ನಟಿಸಿ ಕೇಳಿದರು ಸ್ವಾಮಿರು. "ಮೊದಲು ನನಗೆ ಅಭಯಕೊಟ್ಟರೆ ಆ ಮೇಲೆ ಅವಳನ್ನು ಕರತರುತ್ತೇನೆ ಪರಾಕೆ" ಎಂದು ನಾಗಿಯು ಕಣ್ಣೀರಿಂದ ಮುಖದಡಿಯ ನೆಲ್ಲವನ್ನೆಲ್ಲಾ ಒದ್ದೆಮಾಡಿಬಿಟ್ಟಳು. "ಹೂಂ, ಏಳು, ಅವಳನ್ನು ಬೇಗ ಕರೆತಾ" ಎಂದರು ಸ್ವಾಮಿರು ಸ್ವಾಮಿತ್ವದ ಗಾಂಭೀರ್ಯದಿಂದ. ನಾಗಿಯು ಎದ್ದು ಅತಿ ದೈನ್ಯದಿಂದ, "ಪರಾಕೆ ಅವಳು ಬಹಳ ಎಳೆಪ್ರಾಯದವಳು ಇನ್ನೂ ಶಾಲೆಗೆ ಹೋಗುವ ಹುಡುಗಿ. ಅಲ್ಲಿ ಅವಳ ಟೀಚ ರೊಬ್ಬಳು ಏನೇನೋ ಅವಳ ತಲೆಗೆ ಹಾಕಿ ಮರಳುಮಾಡಿರುವಳು. ಆದುದರಿಂದಲೇ ನನಗೆ ಮಾತುಕೊಟ್ಟಂತೆ ನಡೆಯಲಾಗಲಿಲ್ಲ ಬುದ್ಧಿ" ಎಂದು ಕೇಳಿಕೊಂಡಳು. "ಆಯ್ತಾಯ್ತು. ನೀನೀಗ ಹೋಗಿ ಅವಳನ್ನು ಕರಕೊಂಡು ಬಾ ಬೇಗ" ಎಂದರು ಸ್ವಾಮಿರು ಸ್ವಲ್ಪ ಅಸಹನೀಯ ಯಿಂದ ಆದರೆ ನಾಗಿಯು ಅದನ್ನರಿತುಕೊಳ್ಳದೆ "ಪರಾಕೆ" ಎಂದು ಇನ್ನೂ ಮಾತಾಡಲಾರಂಭಿಸುವಷ್ಟರಲ್ಲಿ ಸ್ವಾಮಿರು ಅದನ್ನು ಅಷ್ಟರಲ್ಲೇ ನಿಲ್ಲಿಸಿ, "ಸಾಕಿನ್ನು ನಿನ್ನ ಪರಾಕೆಗಿರಾಕೆಯೆಲ್ಲ! ತೊಲಗಿಲ್ಲಿಂದ! ನಿನ್ನ ಮಗಳನ್ನು ಕರಕೊಂಡು ಬಾ" ಅಬ್ಬರಿಸಿದರು. ನಾಗಿಯು ಬಹ ಭೀತಿಗೊಂಡು ತಲ್ಲಣಿಸಿ "ಅವಳು ಬರಲಿಕ್ಕೆ ಕೇಳುವುದಿಲ್ಲ ಬುದ್ಧಿ ಮಠಕ್ಕೂ ಅವಳನ್ನು ಕಟ್ಟಿತಂದುದು ಹುಡುಗಾಟಿಕೆಯುವಳು ಬುದ್ಧಿ ಕ್ಷಮಿಸಬೇಕು" ಎಂದು ಬಗ್ಗಿ ಕೈಜೋಡಿಸಿ ಬೇಡಿಕೊಂಡಳು "ಹುಂ ಏನು ಧಿಮಾಕು ರಂಡೆಗೆ! ಹೌದೋ ನರಸಿಂಹ? ಈಗ ಎಲ್ಲಿದ್ದಾಳವಳು? ಎಂದು ಪ್ರಶ್ನಿಸಿದರು ಸ್ವಾಮಿರು ಕಣ್ಣು ಕೆರಳಿಸಿ. "ಹೌದು ಪರಾಕೆ ಅವಳೇನು ಸಾಧಾರಣ ಧಿಮಾಕಿನವಳಲ್ಲ. ಕೈಕಾಲು ಕಟ್ಟಿಯೆ ತಂದ ದನವಳನ್ನು. ಈಗ ಬೈತಕು ಕೋಣೆಯಲ್ಲಿದ್ದಾಳೆ" ಎಂದ ನರಸಿಂಹ "ನಾಗಿ, ಸಾಧ್ಯವಿದ್ದರೆ ಕರೆತಾ ಆ ರಂಡೆಯನ್ನಿಲ್ಲಿ. ಇಲ್ಲವಾದರೆ ನರಸಿ ಹನು ಜುಟ್ಟು ಹಿಡಿದು ಧರಧರನೆ ಎಳೆದು ತರುತ್ತಾನೆ" ಎಂದು ಸಿಡು

ದರು ಸ್ವಾಮಿರು ಹುಬ್ಬುಗಂಟಿಕ್ಕಿ. ನಾಗಿಯು ಬೆದರಿ, "ಬೇಡ ಬುದ್ಧಿ, ಬೇಡ. ನಾನೇ ಕರತರುತ್ತೇನೆ" ಎಂದರು "ಹಾಗಾದರೆ ಹೋಗು ನರಸಿಂಹ, ಅವಳನ್ನು ಕೋಣೆಗೆ ಕರಕೊಂಡು ಹೋಗು" ಎಂದು ಕೈಬೀಸಿ ಆಜ್ಞೆಯಿತ್ತರು ಸ್ವಾಮಿರು.

ನಾಗಿಯೂ ನರಸಿಂಹನೂ ಸ್ವಾಮಿರ ಬೈಠಕು ಕೋಣೆಗೆ ಹೋಗುವಾಗ ನಾಗಿ ಮಧ್ಯೆ ಸ್ವಲ್ಪ ಹೊತ್ತು ನಿಂತು ಆಲೋಚಿಸಿದಳು ಆ ಮೇಲೆ ಏನೋ ನರಸಿಂಹನ ಕಿವಿಯಲ್ಲಿ ಹೇಳಿದಳು. ನರಸಿಂಹನು ಕೋಣೆಯ ಸಂಕೋಲೆ ತೆಗೆದು ಅಲ್ಲಿಂದಲೇ ಎಲ್ಲಿಗೋ ಹೊಗಿಬಿಟ್ಟನು. ನಾಗಿಯೊಬ್ಬಳೇ ಕೋಣೆಯೊಳಕ್ಕೆ ಪ್ರವೇಶಿಸಿ ಅತ್ಯವಸರದಿಂದ ಲಲಿತೆಯ ಕೈಕಾಲು ಬಿಟ್ಟು ಬಾಯಿಯ ವಸ್ತ್ರವನ್ನೂ ಬಿಚ್ಚಿತೆಗೆದಳು. ಲಲಿತೆಯ ಮುಖದ ಮೇಲೆಲ್ಲಾ ಕಣ್ಣೀರು ಹರಿ ಹರಿದು ಗಟ್ಟಿಕಟ್ಟಿ ಹೋಗಿತ್ತು. ಅವಳಿಗೆ ಥಕ್ಕನೆ ಏಳಲು ಸಾಧ್ಯವಾಗಲಿಲ್ಲ. ಆಗ ನಾಗಿಯು, "ಮಗು ಮಗು, ಏಳು ಏಳು, ನಾವು ಮನೆಗೆ ಹೋಗುವ" ಎಂದು ಕೈಹಿಡಿದೆತ್ತಿದಳು ಮನೆಗೆ ಹೋಗುವ ಎಂದೊಡನೆಯೇ ಲಲಿತೆಗೆ ಒಮ್ಮೆಯೇ ಹೊಸ ಜೀವ ಬಂದ ಹಾಗಾಯಿತು. "ಹೋಗುವ ಅಮ್ಮಾ, ಬೇಗ ಹೋಗುವ. ಆ ದುರಾತರೆಲ್ಲಿ? ನಮ್ಮನ್ನವರು ಹೋಗಬಿಡುವರೇ?" ಎಂದಳವಳು ಬೆದರಿ ಕಂಗೆಟ್ಟ, ಮರಿ ಹುಲ್ಲೆಯಂತಹ ಭೀತ ದೀನ ದೃಷ್ಟಿಯಿಂದ ತಾಯಿಯ ಮಾತು ಸತ್ಯವೆಂದೇ ಬಗೆದಿದ್ದಳವಳು. ಒಂದೇಸವನೆ ನಾಗಿಯ ಕಂಗಳಲ್ಲಿ ಧರಧರನೆ ನೀರು ಹರಿಯಹತ್ತಿತು. ಅವಳ ಕಂಠವು ಕಟ್ಟಿಕೋಯಿತು. ಅವಳು ಲಲಿತೆಯನ್ನು ಬಿಗಿದಪ್ಪಿ ಬಾಯ್ಬಿಟ್ಟು ಅಳತೊಡಗಿದಳು "ಅವ್ವಾ, ಅದೇಕೆ ಅಳುವೆ? ಹೋಗುವ ಮನೆಗೆ ಬೇಗ ಮತ್ತೆ ಆ ದುಷ್ಟರೆಲ್ಲಿಯಾದರೂ ಪೀಡೆಕೊಟ್ಟರೆ?" ಎಂದಳು ಲಲಿತೆ ತಾಯಿಯ ಮರುಕವನ್ನು ಕಂಡು ವಿಸ್ಮಯಗೊಂಡು ಅವಳಿಗೇನು ಗೊತ್ತು ನಾಗಿಯ ಅಂತರಂಗದ ತಳಮಳದ ಸಂಗತಿ? ನಾಗಿಯು ಕೋಣೆಗೆ ಬರುವಾಗ ಮಾಡಿದ ದೃಢನಿರ್ಧಾರವು ಲಲಿತೆಯನ್ನು ಕಂಡೊಡನೆಯೇ ಕರಗಿ ನೀರಾಯಿತು ಅವಳು ಚಿಕ್ಕ ಮಗುವಿನಂತೆ ಅಳತೊಡಗಿದಳು ಆಮೇಲೆ ಸ್ವಾಮಿರು ಮತ್ತೇನು ಮಾಡುವರೋ ಎಂದು

ಭಯವಿಹ್ವಲಳಾಗಿ ದೇವರಿಟ್ಟಂತಾಗುತ್ತದೆಂದು ಒಳಗೊಳಗೇ ಅಂದು "ಹೋಗುವ, ಮಗು ಹೋಗುವ" ಎಂದು ಕಂಬನಿತುಂಬಿದ ಕಂಗಳಿಂದ ಲಲಿತೆಯನ್ನ ರಕ್ಷಣದಿಟ್ಟಿಸಿ ಕೂಡಲೆ ದೃಷ್ಟಿ ತಿರುಗಿಸಿ ದುಃಖದ ಆವೇಗ ವನ್ನು ಒತ್ತಿಟ್ಟುಕೊಂಡಳು ಮಾತೆಯ ಪ್ರೇಮದ ಕರುಳನ್ನು ಭೀತಿಯು ಕತ್ತರಿಸಿ ಹಾಕಿತು ಕೈಹಿಡಿದು ಲಲಿತೆಯನ್ನು ಕರದೊಯ್ದು ಸ್ವಾಮಿಯ ಶಯ್ಯಾಗೃಹದ ಬಳಿಗೆ ಹೋಗಿ ನಿಂತು ತುಸು ಯೋಚಿಸಿದಳು ಆ ಮೇಲೆ ದೀರ್ಘ ಶ್ವಾಸ ಬಿಟ್ಟು ಟಪ್ ಟಪ್ ಬಾಗಿಲು ಬಡಿದಳು. ಸಾಸಿವೆ ಬಿದ್ದರೂ ಗಟ್ಟಿಯಾಗಿ ಕೇಳಿ ಬಗ್ಗನೇಳುವಷ್ಟರ ಉತ್ಕಂಠಿತರಾಗಿದ್ದ ಶಿವಾನಂದರು ಒಡನೆಯೇ ಹಾಸಿಗೆಯಿಂದ ದಡಬಡನೆ ಎದ್ದು ಓಡಿಹೋಗಿ ಬಾಗಿಲು ತೆರೆದರು. ಅವರೊಂದಿಗೇನೇ ದೀಪದ ಬೆಳಕು ಹೊರಚಿಮ್ಮಿತು ಶಿವಾನಂದರ ಭೀಮಕಾಯವನ್ನು ಕಂಡೊಡನೆಯೇ ಲಲಿತೆಯು ದಿಗಿಲುಗೊಂಡು "ಅಮ್ಮಾ" ಎಂದು ಚೀರಿ ನಾಗಿಯನ್ನಪ್ಪಿ ಹಿಡಿದಳು. ಅಷ್ಟರಲ್ಲಿ ಶಿವಾನಂದರು, ಎತ್ತರದಲ್ಲೆಲ್ಲಿಯೋ ಕಾದಿದ್ದು ಅನುಕೂಲ ಸಂದರ್ಭ ದೊರೆತಾಗ ಒಮ್ಮೆಯೇ ನೆಲಕ್ಕೆರಗಿ ಕೋಳಿಮರಿಯನ್ನೆತ್ತಿ ಹಾರುವ ಗಿಡುಗನಂತೆ, ದಟ್ಟ ಪೊದರುಗಳೊಳಗೆ ಅವಿತಿದ್ದು ಸಂದರ್ಭ ನೋಡಿ ಥಟ್ಟನೆ ಹುಲ್ಲೆಯ ಮೇಲೆ ಹಾರಿ ಕಚ್ಚಿಕೊಂಡೊಯ್ಯುವ ಹಸಿದ ಹುಲಿಯಂತೆ, ಲಲಿತೆಯನ್ನು ರಟ್ಟೆಹಿಡಿದು ಎಳದೊಯ್ದು, ನಾಗಿಯು "ಬುದ್ಧಿ! ಪರಾಕೆ!!" ಎನ್ನುವಷ್ಟರಲ್ಲಿ ದಡಕ್ಕನೆ ಬಾಗಿಲು ಹಾಕಿ ಬಿಟ್ಟರು. ನಾಗಿಗೆ ಜೀವ ಹಾರಿದಂತಾಯಿತು. ಅವಳು ಗೋಡೆಗೆ ಕೈಗೊಟ್ಟು ನಿಲ್ಲಲೆತ್ನಿಸಿ ನಿಲ್ಲಲಾರದೆ ಜಾರಿ ನಿಶ್ಚೇತನಳಾಗಿ ಬಿದ್ದುಬಿಟ್ಟಳು. ಹಿಂದಿನಿಂದಲೇ ಕತ್ತಲೆಯ ಮರೆಯಲ್ಲಿದ್ದ ಧಾಂಡಿಗ ನರಸಿಂಹನು ಅವಳನ್ನೆಲ್ಲಿಗೋ ಹೊತ್ತುಕೊಂಡು ಹೋದನು.

ಷಡ್ವೈರಿಗಳಲ್ಲಿ ಮತ್ತಾವುದೂ ಕಾಮದಷ್ಟು ವಿಚಾರ ಕುರುಡಲ್ಲ ಕಾಮೋದ್ರಿಕ್ತ ಮಾನವನು ನರ ಪಿಶಾಚಿಯು. ಎಂತಹ ಭೀಕರ ಕೃತ್ಯ ವನ್ನಾದರೂ ಮಾಡಹೇಸನವನು. ಇನ್ನೂ ಬಹಳ ಎಳೆ ವಯಸ್ಸಿನವಳಿದ್ದು ನಿರ್ದುಷ್ಟ ನಿರ್ಮಲ ಹೃದಯಳಿರುವ ಬಡ ಹುಡುಗಿ ಲಲಿತೆ ದೃಷ್ಟ ಪುಷ್ಟನಾಗಿ ಕೊಬ್ಬಿ ಬೆಳೆದು ಕಾಮೋನ್ಮತ್ತನಾಗಿದ್ದ ಶಿವಾನಂ

ನು ಎಂತಹ ಉಪಟಳವನ್ನೆಲ್ಲಾ ಕೊಟ್ಟು, ಯಾವ ರೀತಿಯಲ್ಲಿ ಅವ ಳನ್ನು ಬಲಾತ್ಕರಿಸಿ ಅವಳ ಮೇಲೆ ಪೈಶಾಚಿಕ ಅತ್ಯಾಚಾರ ನಡೆಸಿದ ನೆಂಬುದನ್ನೆಲ್ಲಾ ವಿವರಿಸಲು ನಮ್ಮ ಲೇಖನಿಯು ಹೇಸುವುದು ಅವನು ಲಲಿತೆಯನ್ನೆಳದೊಯ್ದು ಸುಮಾರು ಅರ್ಧ ತಾಸಿನಲ್ಲಿ 'ಅಯ್ಯಯ್ಯೋ! ಅಯ್ಯೋ! ಅ....ಯ್ಯೋ.......!' ಎಂಬ ಹೃದ್ರಾವಕ ಚೀತ್ಕಾರವು ಆ ಕರಾಳ ರಾತ್ರಿಯ ಗುಪ್ತ ಮುಸುಕನ್ನು ಕೆಲವೆಡೆ ಹರಿದುಬಿಟ್ಟಿತು. ನರ ಸಿಂಹನು ಸ್ವಾಮಿರ ಬೈಠಕು ಖಾನೆಯ ಹೊರಗಣ ಜಗಲಿಯಲ್ಲಿ ಆಗ ತಾನೆ ಮಲಗಿ ಕಣ್ಣಿಗೆ ಅಮಲು ಹಿಡಿಯುವಷ್ಟರಲ್ಲಿ ಎದ್ದ ಈ ಚಿತ್ಕಾರವು ಅವನನ್ನು ಹೊಡೆದೆಬ್ಬಿಸಿತು. ಸ್ವಾಮಿರಿಗೆ ತನ್ನ ಸಹಾಯವೇನಾದರೂ ಬೇಕಾಗುವುದೋ ಎಂದು ಅವನು ಅವರ ಮಲಗುವ ಕೋಣೆಯ ಕಡೆಗೆ ಅವಸರವಸರದಿಂದ ಕಚ್ಚೆ ಕಟ್ಟಿಕೊಂಡು ಧಾವಿಸುವಷ್ಟರಲ್ಲಿ, "ಅಯ್ಯೋ! ಮಗು, ಲಲಿತ! ಲಲಿತ!! ಏನಾಯಿತು! ಏನಾಯಿತು!! ಹಾ ಪರ ಮೇಶ್ವರ ನನ್ನ ಲಲಿತೆಯನ್ನು ಕಾಪಾಡು, ಕಾಪಾಡು" ಎಂದು ಸ್ವಾಮಿರ ಬೈಠಕು ಕೋಣೆಯೊಳಗಿಂದ ನಾಗಿಯು ಗೋಳಿಟ್ಟಳು. ನರ ಸಿಂಹನು ಥಟ್ಟನೆ ಹಿಂದಕ್ಕೆ ಸರಿದು ಬೈಠಕು ಕೋಣೆಯ ಸಂಕೋಲೆ ತೆಗೆದು ದಢಲ್ಲನೆ ಬಾಗಿಲು ದೂಡಿದನು. ಬಂದವರು ಸ್ವಾಮಿರೆಂದು ಬಗೆದು ನಾಗಿಯು "ಪರಾಕೆ, ಅಯ್ಯಯ್ಯೋ! ಅಯ್ಯೋ!! ಅಯ್ಯೋ!!! ಎಂದು ಕೂಗಿದುದಾರು? ಲಲಿತೆಗೇನು ಮಾಡಿದಿರಿ? ಅವಳೆಲ್ಲಿರುವಳು? ದಯಮಾಡಿ ಅವಳನ್ನೊಮ್ಮೆ ನನಗೆ ತೋರಿಸಿ ಬುದ್ಧಿ" ಎಂದು ದೊಪ್ಪನೆ ಬಿದ್ದು ಸಾಷ್ಟಾಂಗ ವಂದನೆಮಾಡಿದಳು. ಆ ಸಂದರ್ಭದಲ್ಲೆ ಶಿವಾನಂದರು, 'ನರಸಿಂಹ! ನರಸಿಂಹ!! ಎಂದು ಗಂಟಳೊಳಗೇನೇ ಕರೆ ಯುತ್ತಾ, ಅಲ್ಲಿಗೋಡಿಬಂದರು. "ಏನಾಯಿತು, ಏನಾಯಿತು ಪರಾಕೆ" ಎಂದು ಪ್ರಶ್ನಿಸಿದ ನರಸಿಂಹ ದಿಗಿಲುಗೊಂಡು. ಆಗ ನಾಗಿಯು ಎದ್ದು ನಿಂತುದನ್ನು ಕಂಡು ಶಿವಾನಂದರು, ತನ್ನ ಆವೇಗದ ವೇಗಕ್ಕ ಫಕ್ಕನೆ ಬ್ರೇಕ್ ಹಾಕಿ, "ಏನಿಲ್ಲ. ಲಲಿತೆಗೆ ಚೆನ್ನಾಗಿ ನಿದ್ದೆಹತ್ತಿದೆ ಅವಳು ಬಹಳ ದಣಿದಿರಬೇಕು ಪಾಪ ನೀವು ಕೊಟ್ಟ ಉಪಟಳದಿಂದ. ಅದಂತಿ ರಲಿ. ಅದಾರು ನರಸಿಂಹ 'ಅಯ್ಯೋ! ಅಯ್ಯೋ!!' ಎಂದು ಕೂಗಿ

ದುದು? ಮಠದೊಳಗೋ ಹೊರಗೋ?" ಎಂದು ಉತ್ಸುಕತೆಯ ನಟನೆ ಯಿಂದ ಕೇಳಿದರು. ಸ್ವಾಮಿಯ ಇಂಗಿತವನ್ನು ನರಸಿಂಹನು ಆಕ್ಷಣ ಅರಿತುಕೊಂಡನು - ಅವನ ತುಟಿಗಳ ಮೇಲೆ ಹುಸಿನಗೆ ಎದ್ದು ನಲಿಯ ತೊಡಗಿತು "ಯಾರೋ ನಿದ್ದೆಯಲ್ಲಿ ಕನಸುಬಿದ್ದು ಕೂಗಿರಬೇಕು ಪರಾಕೆ. ಆದಕ್ಕಾಗಿ ನೀವೇನೂ ತಳಮಳಿಸಬೇಕಾಗಿಲ್ಲ. ನೀವು ಹೋಗಿ ಮಲಗಿ ಬುದ್ಧಿ ಬಹಳ ರಾತ್ರಿಯಾಯಿತು ನಾಗಿ, ಇನ್ನಾದರೂ ತಿಳಿಯಿತೆ ನಿನ್ನ ಮಗಳು ಸುಖವಾಗಿದ್ದಾಳೆಂದು? ಸ್ವಾಮಿಯೇನು ಸುಳ್ಳು ಹೇಳಲಿಕ್ಕಿಲ್ಲವಲ್ಲ? ಮಲಗು, ಮಲಗು, ಬೆಳಗ್ಗೆ ಐದು ಘಂಟೆಗೇನೇ ಎದ್ದು ಹೋಗಬೇಕು" ಎಂದ ನರಸಿಂಹ. ಸ್ವಾಮಿಯ ಮುಖದ ಕಡೆಗೆ ಓರೆನೋಟಬೀರಿ "ಅಷ್ಟಾದರೆ ಸರಿಯಪ್ಪ ಭಗವಂತ! ಹೋಗಿ ಬುದ್ಧಿ ಮಲಗಿ, ನಾನೂ ಮಲಗುತ್ತೇನೆ. ಆದಷ್ಟು ಬೇಗ ನಮ್ಮನ್ನು ಮನೆಗೆ ಕಳುಹಿಸಿಬಿಡಿ." ಎಂದಳು ನಾಗಿ ಅತಿ ನಮ್ರಭಾವದಿಂದ. ಸ್ವಾಮಿಯೂ ನರಸಿಂಹನೂ ಕೂಡಲೆ ಹೊರಗೆ ನಡೆದರು. ನರಸಿಂಹನು ಬೈಠಕು ಕೋಣೆಯ ಬಾಗಿಲೆಳೆದು ಹೊರಗಣ ಸಂಕೋಲೆ ಸಿಕ್ಕಿಸಿದ.

ಅಷ್ಟರಲ್ಲಿ ಜಗಲಿಯ ಒಂದು ಮೂಲೆಗೆ ಸರಿದಿದ್ದ ಸ್ವಾಮಿಯು "ಇಲ್ಲಿ ಬಾ ನರಸಿಂಹ, ಬೇಗ ಬಾ!" ಎಂದು ದೊಡ್ಡ ಅನಾಹುತವಾಗಿ ಕಂಗೆಟ್ಟು ತಳಮಳದಿಂದ ಕರೆದರು. ನರಸಿಂಹನು, "ಪರಾಕೆ, ಏನು, ಏನಾಯಿತು?" ಎನ್ನುವಷ್ಟರಲ್ಲಿ, ಆ ಜಗಲಿ ಬಳಿಯ ಕೋಣೆಯೊಳಗಿಂದ, "ನಾಗವೇಣಿ! ನಾಗವೇಣಿ!! ಯಾರೆ ಅದು 'ಅಯ್ಯೋ! ಅಯ್ಯೋ!!' ಎಂದು ಕೂಗಿದ್ದು? ಶಿವ ಶಿವ, ಈ ಮಠದೊಳಗೆ ಏನೆಲ್ಲಾ ನಡೆಯು ತ್ತದೋ ಏನೊ? ದೇವರೇ ಗತಿ!" ಎಂಬ ಮುದುಕಿಯೊಬ್ಬಳ ಮಾತು ಅವರಿಬ್ಬರನ್ನೂ ಮೌನಗೊಳಿಸಿಬಿಟ್ಟಿತು. "ಮಲಗಮ್ಮ ಸುಮ್ಮನೆ ಮಲಗು ಯಾರೋ ಕನವರಿಸಿ ಕೂಗಿರಬೇಕು'' ಎಂದಳು ಇನ್ನೊಬ್ಬಳು ಹೆಂಗಸು. ಹಾ........ಎಂದು ಬಾಯಿ ಆಕಳಿಸಿ, "ಶಿವ ಶಿವ, ಶಂಭೋ ಶಂಕರ. ಪರಮೇಶ್ವರ" ಎಂದು ಮಲಗಿತು ಮುದುಕಿ. "ಆ ಮುದುಕಿ ಮತ್ತು ಅವಳ ಮಗಳನ್ನು ನಾಳೆಯೇ ಮಠದಿಂದ ಹೊರ ಡಿಸಿಬಿಡಬೇಕು ನರಸಿಂಹ! ಬಹಳ ಅಧಿಕಪ್ರಸಂಗಿಯುದು'' ಎಂದು

ಶಿವಾನಂದರು ಮುದುಕಿಯ ಮೇಲೆ ನುನಿದು ಬಿದ್ದರು- "ಆ ಮುದುಕಿಗೆ ಬೆಂಕಿಹಾಕಲಿ ಪರಾಕೆ! ಲಲಿತೆಗೇನಾಯಿತು? ಅವಳೇಕೆ ಕೂಗಿದುದು?" ಎಂದು ಆತುರದಿಂದ ಕೇಳಿದ ನರಸಿಂಹ. "ನರಸಿಂಹ, ಈಕ್ಷಣ ಮೋಟರ್‌ಕಾರಿನಲ್ಲಿ ಹೋಗಿ ಡಾಕ್ಟರ್ ಗಂಗಾಧರರಾಯರನ್ನು ಕರಕೊಂಡು ಬರಬೇಕು. ಲಲಿತೆಗೆ ಸ್ಮೃತಿತಪ್ಪಿ ಹೋಗಿರುವುದು. ನರಸಿಂಹ, ನಾನೀಗ ಏನು ಮಾಡುವುದು? ಡಾಕ್ಟರರು ಬಂದು ನೋಡಿದರೆ ಹೇಸಿಕೆಯಾಗುವುದಲ್ಲ? ಒಬ್ಬರಿಗೂ ಈ ಸಂಗತಿ ತಿಳಿಯದಂತಾಗಬೇಕು ನೋಡು. ಅದಕ್ಕಾಗಿ ಎಷ್ಟು ವೆಚ್ಚವಾದರೂ ಚಿಂತೆಯಿಲ್ಲ. ನೀನೀಗ ಏನುಮಾಡುವೆ? ಉಪಾಯವೇನಿದಕ್ಕೆ?" ಎಂದರು. ಶಿವಾನಂದರು ಸಂಪೂರ್ಣ ಧೃತಿಗೆಟ್ಟು, ಆ ಚಳಿಯಲ್ಲಿಯೂ ಅವರ ಶರೀರವು ಬೆವರಿಹೋಗಿತ್ತು. ಕೈಕಾಲುಗಳು ಕಂಪಿಸುತ್ತಿದ್ದುವು. ಭೀತಿಯಿಂದ ಕಣ್ಣುಗಳು ಕಳೆಗುಂದಿಹೋಗಿದ್ದುವು. ಮುಖವು ಬಿಳುಪೇರಿಹೋಗಿತ್ತು. "ಹೆದರಬೇಡಿ ಬುದ್ಧಿ ಹೆದರಬೇಡಿ ಎಲ್ಲಾ ನಾನು ಉಪಾಯಮಾಡುತ್ತೇನೆ. ಮೊದಲು ನಾನವಳನ್ನೊಮ್ಮೆ ಪರೀಕ್ಷಿಸಿಕೊಳ್ಳುತ್ತೇನೆ" ಎಂದ ನರಸಿಂಹ ಒಂದಿಷ್ಟು ಗಲಿಬಿಲಿಗೊಳ್ಳದೆ. "ಬೇಡ ಬೇಡ ನರಸಿಂಹ, ಮೊದಲು ಡಾಕ್ಟರರನ್ನು ಕರಕೊಂಡುಬಾ" ಎಂದರು. ಶಿವಾನಂದರು "ಅಲ್ಲ ಪರಾಕೆ, ನೀವು ಸ್ಮೃತಿತಪ್ಪಿದೊಡನೆಯೇ ಬೆದರಿ ಅವಳನ್ನು ಬಿಟ್ಟುಬಂದಿರಿ. ಅದರಲ್ಲೇನೂ ಭೀತಿಯಿಲ್ಲ ಅವಳಿಗೀಗ ಪ್ರಜ್ಞೆ ಬಂದೀತು, ಇದು ಹೊರತು ಅವಳನ್ನು ನಿಮ್ಮ ಶಯ್ಯಾಗೃಹದಲ್ಲೆ ಇರಿಸಿ ಡಾಕ್ಟರರನ್ನು ಅಲ್ಲಿಗೆ ಕರತರಲಾಗುವುದೇ? ನಾನವಳನ್ನು ಇನ್ನೊಂದು ಕೋಣೆಗೊಯ್ದು ಆ ಮೇಲೆ ಡಾಕ್ಟರರನ್ನು ಕರತರಲು ಹೋಗುತ್ತೇನೆ ಆಗದೇ?" ಎಂಬ ನರಸಿಂಹನ ಪ್ರಶ್ನೆಯಿಂದ ಶಿವಾನಂದರ ಮುನಸ್ಸಿನ ಗೊಂದಲವು ಸ್ವಲ್ಪ ಕಡಿಮೆಯಾಯಿತು. "ಆಯ್ತಾಯ್ತು ನರಸಿಂಹ, ಅಂತೆಯೇ ಮಾಡು. ನಿನ್ನುಪಕಾರ ನಾನೆಂದಿಗೂ ಮರೆಯಲಾರೆ" ಎಂದರವರು ಕೃತಜ್ಞತೆಯ ಪ್ರತಿಮೂರ್ತಿಯೇ ಆಗಿ.

ನರಸಿಂಹನು ಒಡನೆಯೇ ಶಿವಾನಂದರ ಕೋಣೆಯೊಳಗೆ ಧಾವಿಸಿದ ಹೋಗಿ ನೋಡುವುದೇನನ್ನು! "ಶಿವ! ಶಿವ!!" ಎಂದು ಅವನ ಪೈಶಾಚಿಕ

ಹೃದಯವೂ ತಲ್ಲಣಿಸಿತು. ಶಿವಾನಂದರ ಹಾಸಿಗೆಯೆಲ್ಲಾ ರಕ್ತಮಯ ವಾಗಿತ್ತು. ಲಲಿತೆಯು ಹೆಣದಂತೆ ಬಿದ್ದಿದ್ದಳು. ಆವನು ತುಸು ಹತ್ತಿರ ಹೋಗಿ ನೋಡಿದ. ಅವನಲ್ಲೂ ಜಿಗುಪ್ಸೆಯುಂಟಾಯಿತು. ಆತನು ಕೂಡಲೆ ಹೊರ ನಡೆದು ಬಾಗಿಲುಹಾಕಿ ಏನೇನೋ ಯೋಚಿಸುತ್ತಾ ಶಿವಾನಂದರ ಬಳಿಗೆ ನಡೆದು, "ಆಗುವುದಿಲ್ಲ ಪರಾಕೆ. ನನ್ನಿಂದವಳನ್ನು ಎತ್ತಿತರಲು ಸಾಧ್ಯವಿಲ್ಲ. ನಾನೀಗ ಕೂಡಲೆ ಡಾಕ್ಟರರನ್ನು ಕರತರುತ್ತೇನೆ. ಅವರಿಂದ ಸಂಗತಿಯನ್ನು ಮುಚ್ಚುಮರೆ ಮಾಡಿ ಫಲವಿಲ್ಲ. ಹೇಗೂ ಅವರಿಗೆ ತಿಳಿಯದಿರುವುದಿಲ್ಲ. ಈ ರಾತ್ರಿಗೆ ಅವರು ಬರಲೊಪ್ಪುತ್ತಾರೋ ಇಲ್ಲವೋ?" ಎಂದು ನರಸಿಂಹ ಹೊರಡುವಷ್ಟರಲ್ಲಿ ಶಿವಾನಂದರು "ನಾನು ಹೇಳಿದೆನೆಂದು ಹೇಳು. ಅವರು ಕೇಳಿದಷ್ಟು ಹಣ ಕೊಡಬಹುದು" ಎಂದರು. ನರಸಿಂಹನು "ಹೂಂ ಹೂಂ" ಎಂದು ಬೇಗ ಬೇಗನೆ ಹೊರಟುಹೋದನು.

ಅಧ್ಯಾಯ ೪

"ಅದೋ ಸುಮಿತ್ರಾಬಾಯಿಯವರು ಬಂದರವ್ವಾ! ನಾನೇನು ಮಾಡಲಿ! ನಾ—ನೇ—ನು ಮಾಡಲಿ!"

ಸುದ್ದಿಯಷ್ಟು ದೊಡ್ಡ ಮತ್ತು ಶೀಘ್ರ 'ನ್ಯೂಸ್ ಏಜೆನ್ಸಿ'ಯು ಲೋಕದಲ್ಲಿ ಮತ್ತಾವುದೂ ಇಲ್ಲ. ಅದು ಎಷ್ಟೊಂದು ಚಮತ್ಕಾರವಾಗಿ ತನ್ನ ಕೆಲಸವನ್ನು ನಡಿಸಿಬಿಡುವುದು! ಮಾನವನ ಸ್ವಭಾವಸಿದ್ಧ ಉತ್ಸುಕತೆಯೇ ಸುದ್ಧಿಯ 'ರೇಡಿಯೋ' ಯಂತ್ರದ ವಿದ್ಯುಚ್ಛಕ್ತಿ. ಯಾವ ಪ್ರತಿಫಲದ ಆಶೆಯೂ ಇಲ್ಲದೆ, ಸಂಬಳಕ್ಕೆ ದುಡಿಯುವವರಿಗಿಂತ ಎಷ್ಟೋ ಹೆಚ್ಚಿನ ಉತ್ಸಾಹ ಮತ್ತು ಚಾತುರ್ಯದಿಂದ ಸುದ್ದಿಯ ವಾರ್ತಾವಾಹಕರು ತಾವಾಗಿ ಕೆಲಸ ನಡೆಸಿಬಿಡುವರು ಅವರ ವಿಶಿಷ್ಟತೆಯೆಂದರೆ ಗುಟ್ಟನ್ನು ಗುಟ್ಟಾಗಿಯೇ ಬಯಲುಮಾಡುವುದು. ಎಂತಹ ನಿಗೂಢವಾಗಿರುವ ರಹಸ್ಯವನ್ನಾದರೂ ಅವರು ಭೇದಿಸಿ ಬಯಲುಮಾಡಿಬಿಡುವರು. ಕಟ್ಟಕಡೆಗದು ಬಯಲು ರಹಸ್ಯ

ವಾಗುವುದು. ಅಂತೆಯೇ ಶಿವಾನಂದರು ಅತಿ ರಹಸ್ಯವಾಗಿರಿಸಬೇಕೆಂದು ಅಷ್ಟೊಂದು ಚಡಪಡಿಸಿದ್ದ ಗುಟ್ಟು ಮರುದಿನ ಬೆಳಿಗ್ಗೆಯೇ ಶಿವಪುರಿಯಲ್ಲೆಲ್ಲಾ ಗುಜು ಗುಜು ಹಬ್ಬಿತ್ತು ಎಲ್ಲೆಲ್ಲಿಯೂ ಅದೇ ಸುದ್ದಿ, ಅದೇ ಮಾತು, ಮಠದೊಳಗಣ ಗುಪ್ತ ಕೋಣೆಯೊಳಗೆ ಅಪರರಾತ್ರಿಯ ಮುಸುಕಿನಲ್ಲಿ ಅತಿ ಗೋಪ್ಯವಾಗಿ ನಡೆದ ಈ ರಹಸ್ಯವು ಬಯಲಾದ ಬಗೆಯಾದರೂ ಹೇಗೆ?

ನರಸಿಂಹ ಭಟ್ಟನು ಶಿವಾನಂದರ ಸೂತ್ರದ ಗೊಂಬೆ. ಆ ಗೊಂಬೆ ಎಂದೆಂದಿಗೂ ಗುಟ್ಟು ಹೊರಗೆ ಬಿಡಲಾರದು. ನರಸಿಂಹನು ಡಾಕ್ಟರರನ್ನು ಕರಕೊಂಡುಬರಲು ಮಠದಿಂದ ಹೊರಬಿದ್ದು 'ಬೆಟ್ಟರಿಲೈಟ್' ಚಮುಕಿಸಿದೊಡನೆಯೇ ಡ್ರೈವರನು, "ಹಾಂ, ಬನ್ನಿ ಸ್ವಾಮಿ ಇನ್ನೆಲ್ಲಿ ಹೋಗಬೇಕು?" ಎಂದು ಕೂಡಲೆ ಕಾರಿನ ದೀಪ ಬೆಳಗಿಸಿದನು. ಶಿವಾನಂದರ ದುಷ್ಕೃತ್ಯಗಳ ಅತಿ ನಿಪುಣ ಕೈಯಾಗಿದ್ದ ವೆಂಕಟ್ರಮಣನೂ ಆ ಸಂದರ್ಭದಲ್ಲಿ ಅಚಾತುರ್ಯದಿಂದ, "ಡ್ರೈವರ್, ಈಕ್ಷಣ ಹೋಗಬೇಕು ಡಾಕ್ಟರ್ ಗಂಗಾಧರರಾಯರಲ್ಲಿಗೆ. ಸ್ಟಾರ್ಟ್‌ಮಾಡು" ಎಂದು ಮೋಟರಿನ ಬಾಗಿಲು ತೆರೆದು ಒಳ ಕೂತನು ಈ ಅಚಾತುರ್ಯವೇ ಸುದ್ಧಿಯ ದೂತನನ್ನೆಬ್ಬಿಸಿಬಿಟ್ಟಿತು ಡ್ರೈವರನು ಮೋಟರ್ ಸ್ಟಾರ್ಟ್ ಮಾಡುವುದನ್ನೇ ಬಿಟ್ಟು "ಯಾಕೆ ಸ್ವಾಮಿ ಈ ರಾತ್ರಿಗೆ ಡಾಕ್ಟರರಲ್ಲಿ ಹೋಗುವುದು? ಏನಾಗಿದೆ ಮಠದಲ್ಲಿ? ಅದಾರು ಸ್ವಾಮಿ 'ಅಯ್ಯೋ! ಅಯ್ಯೋ!' ಎಂದು ಕೂಗಿದುದು? ಬಹಳ ಚಿಕ್ಕವಳು ಪಾಪ ಆ ಹುಡುಗಿ! ನಿಮ್ಮ ಸ್ವಾಮಿರು ದೊಡ್ಡ ದೈತ್ಯ! ಏನಾಯಿತೋ ಪಾಪ!" ಎಂದು ಡ್ರೈವರನು ಎಲ್ಲವನ್ನೂ ತಿಳಿದವನಂತೆ ಹೇಳಿದಾಗ ನರಸಿಂಹನು ವಿಸ್ಮಿತನಾದ ಮೋಟರ್ ನಿಲ್ಲುವುದೊಂದೇ ತಡ, ಸ್ಟೀಯರಿಂಗಿಗೆ ತಲೆಯಿಟ್ಟು ಗೊರಕೆ ಹೊಡೆಯುವ ಈ ಟೊಣಪ್ಪನಿಗೆ ಇದೆಲ್ಲಾ ಹೇಗೆ ಗೊತ್ತಾಯಿತೆಂದು ಆಲೋಚಿಸ ತೊಡಗಿದ. ಆ ಮೇಲೆ ದರ್ಪದ ನಟನೆಯಿಂದ, "ಏನೆಲ್ಲಾ ಹೇಳುತ್ತಿರುವೆಯೋ ಮನ ಬಂದಂತೆ? ಯಾವ ಹುಡುಗಿ? ಸ್ವಾಮಿರಿಗೆ ಜ್ವರ ಬರತೊಡಗಿ ದಿವಸ ಹತ್ತಾಯಿತು ಈಗ ಜ್ವರ ತಲೆಗೇರಿ ಬುದ್ಧಿಯೇ ಅವರ ಸ್ವಾಧೀನವಿಲ್ಲ

ಕೂಗಿದುದು ಅವರು ಜ್ವರದ ಭಾಧೆ ತಡಕೊಳ್ಳಲಾರದೆ- ಅದಕ್ಕಾಗಿಯೆ
ನಾನೀಗ ಡಾಕ್ಟರರನ್ನು ಕರತರಹೊರಟುದು ಈ ರಾತ್ರಿಗೆ'' ಎಂದ ನ
ಸಿಂಹ. "ಹೌದೌದು ಜ್ವರ! ನನಗೆಲ್ಲಾ ಗೊತ್ತಿಲ್ಲೆಂದು ತಿಳಿದಿರಾ
ಸಾಕು ಸಾಕು ಸುಮ್ಮಗಿರಿ" ಎಂದು ಡ್ರ್ಯಾವರನು ನರಸಿಂಹನ ಕ
ಗೊಮ್ಮೆ ಕಳ್ಳನೋಟ ಬೀರಿ ಮೋಟರ್ ಸ್ಟಾರ್ಟ್‌ಮಾಡಿ ಓಡಿಸಿದ. ನ
ಸಿಂಹನು ಡಾಕ್ಟರರನ್ನು ಕರತಂದೊಡನೆಯೇ ಆ ಡ್ರ್ಯಾವರನನ್ನು ಕ
ಹಿಸಿಬಿಡುವ ನಿರ್ಧಾರಮಾಡಿದ. ಟೀಕ್ಸಿ ಡ್ರ್ಯಾವರನೊಬ್ಬನು ಸುದ್ದಿ
ದೂತನಾದನೆಂದರೆ ಮತ್ತೆ ಕೇಳಬೇಕೇ? ಇಲ್ಲವಾದರೆ ಅಷ್ಟು ಬೇ
ಸುದ್ದಿಯು ತನ್ನ ಕೆಲಸ ಮಾಡುತ್ತಿದ್ದಿಲ್ಲ. ಯಾಕಂದರೆ ಡಾಕ್ಟರರಿ
ಎಂದೂ ಗುಟ್ಟು ಹೊರಬೀಳುವಹಾಗಿಲ್ಲ. ಅಲ್ಲದೆ ಸ್ವಾಮಿರು ೨೦
ರೂಪಾಯಿ ನಗದಿ ಕೊಟ್ಟು, ಗುಟ್ಟು ರಟ್ಟುಮಾಡದೆ ಮಾನವನ್ನೇ
ಕೊಡಬೇಕೆಂದು ಕೇಳಿಕೊಂಡಿದ್ದರು. ಮನೆಯಜ್ಜಿಯು ತನ್ನ ಮಕ್ಕಳ
ಮೊಮ್ಮಕ್ಕಳಿಗೆ ಕಠಿಣ ಕಾಯಿಲೆಯಾದಾಗ ದಿಗಿಲುಗೊಂಡು ಬೇರೆ ಬೇ
ಕಡೆಯ ದೈವ ದೇವರುಗಳಿಗೆ, ತೀರಿಸಲು ಸಾಧ್ಯವೇ ಇಲ್ಲದ ಹರಿಕೆಗಳನ್ನು
ಹೇಳಿಕೊಳ್ಳುವಂತೆ ಶಿವಾನಂದರು ಶೋಕಿನ ಮನೆ, ಅಮೂಲ್ಯ ಚಿನ
ಭರಣ, ಬೇಕಷ್ಟು ಆಸ್ತಿಪಾಸ್ತಿಯ ಆಶೆ ಬೀರಿ ನಾಗಿಯನ್ನು ಹೇಗ
ಸಮಾಧಾನಪಡಿಸಿದರು ಇದುಹೊರತು ಆಗಲೇ ರೂಪಾಯಿ ನೂರ
ಕೊಟ್ಟರು. ಲಲಿತೆಗೆ ಯಾವ ಅಪಾಯವೂ ಆಗಿಲ್ಲೆಂದು ಡಾಕ್ಟರರಿಂ
ಭರವಸೆ ಹೇಳಿಸಿದರು. ಆ ಮೇಲೆ ಬೆಳಗಾಗಲು ಎರಡು ಮೂರು ಘಂ
ಯಿರುವಾಗಲೇ ಅರೆಮರವೆಯಲ್ಲಿದ್ದ ಲಲಿತೆಯನ್ನು ನಾಗಿಯೊಂದಿ
ಅವಳ ಮನೆಗೆ ನರಸಿಂಹನು ಮುಟ್ಟಿಸಿದ್ದನು. ಅದಕ್ಕಾಗಿ ಅವನ
ಮೊದಲಿನದನ್ನು ಬಿಟ್ಟು ಬೇರೆಯೇ ಒಂದು ಟೀಕ್ಸಿತರಿಸಿದ್ದನು. ಎಲ್ಲವ
ಅತಿ ರಹಸ್ಯವಾಗಿಯೇ ನಡೆದಿತ್ತು. ಹೊರಗಣ ಜನರಿಗೇನೂ ತಿಳಿದಿಲ್ಲ
ಸಮಾಧಾನದಿಂದ ಶಿವಾನಂದರೂ ನರಸಿಂಹನೂ ಆಗಾಗ ಹೃದಯ
ದಲ್ಲೇಳುತ್ತಿದ್ದ ತಳಮಳವನ್ನು ಮೂಲೆಗೊತ್ತುತ್ತಿದ್ದರು. ಆದರೆ ಪಾ
ಕವು ಒಳಗೊಳಗಿಂದಲೇ ಊರೆಲ್ಲಾ ತುಂಬಿ ನಾನಾ ಉದ್ಗಾರಗಳನ್ನೆ
ಸುತ್ತಿತು.

ಶಿವಪುರದ ಹೆಮ್ಮಕ್ಕಳ ಟ್ರೈನಿಂಗ್ ಸ್ಕೂಲಿನ ಉಪಾಧ್ಯಾಯಿನಿಯರಲ್ಲೊಬ್ಬರೂ ವಿದ್ಯಾರ್ಥಿನಿಯರಿಗೆ ಪ್ರಿಯರೂ ಅತ್ಯಂತ ಪ್ರಗತಿಪರ ಮನೋವೃತ್ತಿಯವರೂ ಆದ ಶ್ರೀಮತಿ ಸುಮಿತ್ರಾಬಾಯಿಯವರು ಮರುದಿನ ಬೆಳಿಗ್ಗೆ ಶಾಲೆಗೆ ಹೋದಾಗ, ಲಲಿತೆಯ ಸಂಗಾತಿಯರು, "ಇವತ್ತು ಲಲಿತೆ ಶಾಲೆಗೆ ಬರುವುದಿಲ್ಲ ಸುಮಿತ್ರಮ್ಮಾ, ಅವಳಿಗೆ ಪಾಪ ಜ್ವರಬರುತ್ತದೆ. ಇನ್ನವಳು ಶಾಲೆಗೇನೇ ಬರುವುದಿಲ್ಲವಂತೆ; ಜ್ವರ ಗುಣವಾದ ಮೇಲೆ ಬರುತ್ತಾಳಂತೆ" ಎಂದೆಲ್ಲಾ ತಮಗೆ ತಿಳಿದಿರುವುದನ್ನು ಬಹಳ ಉಮೇದಿನಿಂದ ಸುಮಿತ್ರಾ ಬಾಯಿಯವರಿಗೆ ತಿಳಿಸಿದರು. ಲಲಿತೆಯ ಮೇಲೆ ಅವರಿಗೆಷ್ಟು ಪ್ರೀತಿ ಇರುವುದೆಂಬುದನ್ನವರು ಅರಿತಿದ್ದರು. ಆದುದರಿಂದ ಅವಳ ವಾರ್ತೆಯನ್ನವರಿಗೆ ತಿಳಿಸಿದರೆ ತಮ್ಮಮೇಲೆ ಅವರು ಪ್ರಸನ್ನರಾದಾರೆಂದೇ ಹುಡುಗಿಯರು ಅಷ್ಟೊಂದು ಉಮೇದುಗೊಂಡುದು ಆದರೆ ಅಂದಿನ ಸುಮಿತ್ರಾಬಾಯಿಯೇ ಬೇರೆಯಾಗಿ ಹೋಗಿದ್ದರು. ಎಂದಿನಂತಹ ವಿನೋದ, ಉಲ್ಲಾಸ ಮತ್ತು ಮಾತು ನಗೆಯ ಚೆಲ್ಲಾಟವೆಲ್ಲಾ ಕುಂದಿ ಮುಖವು ಕಂದಿಹೋಗಿತ್ತು. ಅವರ ಮೃದು ಹೃದಯವನ್ನು ಅದಾವುದೋ ತೀವ್ರ ಚಿಂತೆಯ ಬೇಗೆಯು ಸುಡುತಿತ್ತು. ಹುಡುಗಿಯರೆಲ್ಲಾ ಇದನ್ನು ಕಂಡು ವಿಸ್ಮಿತರಾಗಿ ಸುಮ್ಮನಾದರು. ಅಂದು ಸುಮಿತ್ರಾಬಾಯಿಯವರು ಕ್ಲಾಸಿನಲ್ಲಿ ಹುಡುಗಿಯರನ್ನು ಓದಹೇಳಿ ತಾನು ದೀರ್ಘಕಾಲ ಕುರ್ಚಿಯಲ್ಲೇ ಕೂತು ಗಾಢ ಚಿಂತಾಮಗ್ನರಾಗಿದ್ದರು. ಸ್ವಲ್ಪವೇನಾದರು ಪಾಠಮಾಡುವಾಗಲೂ ವಿಮನಸ್ಕರೇ ಆಗಿದ್ದರು. ಅವರು ಶಾಲೆಗೆ ಬಂದೊಡನೆಯೇ ಅವರ ಸಹೋದ್ಯೋಗಿನಿ ಸುಶೀಲೆಯು "ಸುಮಿತ್ರಮ್ಮಾ, ನಿಮ್ಮ ಲಲಿತೆಯ ಗತಿಯೇನಾಯಿತೆಂದು. ಗೊತ್ತೇ? ಊರೆಲ್ಲಾ ಹಬ್ಬಿದೆ ಅವಳ ಸುದ್ದಿ" ಎಂದು ಗುಟ್ಟಿನಲ್ಲಿ ಎಲ್ಲಾ ಸಂಗತಿಗಳನ್ನವರಿಗೆ ತಿಳಿಸಿದರು. ಅವರದನ್ನು ಕೇಳಿ ಸ್ತಂಭಿತರಾದರು. ಒಂದು ಶಬ್ದ ಕೂಡಾ ಮಾತಾಡದಾದರು., ಅವರ ಕಂಗಳಲ್ಲಿ ನೀರು ತುಂಬಿ ಬಂತು. "ಸುಶೀಲ, ನಾನು ಹೊರಗೆ ಹೋಗಿ ಬರುತ್ತೇನೆ"ಂದು ಹೇಳಿ 'ಟೀಚರ್ಸ್ ರೂಮಿ'ನಿಂದ ಹೊರನಡೆದರು. 'ವರಾಂಡ'ದ ಒಂದು ಮೂಲೆಗೆ ಹೋಗಿ ಉಕ್ಕಿಬರುವ ದುಃಖವನ್ನು ಸಹಿಸಲಾರದೆ ಬಿಕ್ಕಿಬಿಕ್ಕಿ

ಅತ್ತರು. ಅಷ್ಟು ಕೋಮಲವಾಗಿತ್ತು ಅವರ ಹೃದಯ. ಆ ಶಾಲಾರಂಭವಾಗುವ ಘಂಟೆಯಾಯಿತು. ಒಡನೆಯೇ ಅವರು ದುಃಖ ವನ್ನು ಒತ್ತಿಕೊಂಡು ಕಣ್ಣೀರನ್ನೊರಸಿ 'ಕ್ಲಾಸ್‌ರೂಮಿ'ಗೆ ಹೋದರು ಆಗ ಹುಡುಗಿಯರು ಮೇಲಿನ ಮಾತುಗಳನ್ನೆಲ್ಲಾ ಅವರೊಡನೆ ಹೇಳಿದರು.

"ಲಲಿತೆಗೆ ಈ ಗತಿಯಾಯಿತೇ? ಅಹ, ಎಷ್ಟು ಒಳ್ಳೆಯ ಹುಡುಗಿ ಎಂತಹ ಗುಣನಡತೆಯುವಳು! ಅದೆಷ್ಟು ಚುರುಕುಬುದ್ಧಿಯುವಳು ಮೇಲಾಗಿ ಎಷ್ಟೊಂದು ರೂಪವತಿ! ಅಯ್ಯೋ ದೇವರೆ! ಎಂತಹ ರಾಕ್ಷಸರಪ್ಪ ಪುರುಷಜಾತಿ! ಆದರೂ ಶಿವಾನಂದರು ಸರ್ವಬಿಟ್ಟ ಸನ್ಯಾಸಿ ಸನ್ಮಾನ್ಯ ಯೋಗಿ!! ಸಮಾಜದ ಧರ್ಮಾಧಿಕಾರಿ!!! ಅವರೇ ಇಂತಹ ನರಪಿಶಾಚಿ!!!! ಅಹಹ, ಏನೆನ್ನಬೇಕು ಈ ವಿಪರ್ಯಾಸಕ್ಕೆ! ಇಂತಹ ನರಾಧಮನನ್ನೂ ವಿಚಾರಹೀನ ಸಮಾಜವು ಧರ್ಮಾಧಿಕಾರದ ಪೀಠಕ್ಕೆ ರಿಸಿ ಪೂಜಿಸುವುದಲ್ಲವೇ? ಅವನನ್ನೂ ಜನರು ಧರ್ಮಗುರುವಾಗಿ ಪ ಗಣಿಸಿ ಪರಾಕೆ ಬುದ್ಧಿಯೆಂದು ತಲೆಯ ಮೇಲೆ ಹೊತ್ತು ತಿರುಗುವ ರಲ್ಲವೇ? ಕಾಣಿಕೆ ಉಡುಗೊರೆಗಳಿಂದ ಸತ್ಕರಿಸಿ ಕೊಬ್ಬಿಸುವುದಲ್ಲವೇ ಛೆ! ಛೆ!! ಇಂತಹ ತುಚ್ಛ ನೀಚ ಧರ್ಮಾಧಿಕಾರಿಗೂ, ವಿವೇಕಹೀನ ಕರ್ತವ್ಯಭ್ರಷ್ಟ ಜಡ ಸಮಾಜಕ್ಕೂ ಶತಶಃ ಧಿಕ್ಕಾರವಿರಲಿ! ಅಯ್ಯೋ ಲಲಿತೆ, ನಿನ್ನ ಗತಿ ಹೀಗಾಯಿತೇ? ನಿನ್ನ ತಾಯಿಯೇ ನಿನ್ನನ್ನು ಜೀ ನ್ಮೃತಳನ್ನಾಗಿ ಮಾಡಲು ನೆರವಾದಳಲ್ಲವೇ? ಅವಳೇನು ಮಾಡಿಯಾಳ ಮತ್ತೆ! ಅವಳ ಮಗಳು ಅವಳಂತೆಯೇ ಆಗದೆ ಬೇರೆ ರೀತಿಯಾಗ ಕ್ರೂರ ಸಮಾಜವು ಬಿಡುವುದೇ? ವೇಶ್ಯೆಯ ಮಗಳು ಎಷ್ಟೊಂದು ಸುಶೀಲೆಯಾದರೂ ವೇಶ್ಯೆಯೇ ಅಲ್ಲವೇ? ಸಮಾಜದ ರೀತಿಯೇ ಹಾ ಲ್ಲವೇ? ರೂಢಿಯ ಗೂಡೊಳಗಣ ಗೊಂಬೆಯಾದ ಅದಕ್ಕೆ ಲಲಿತೆಯ ಹೃದಯದ ಪರಿಯೇನು ಗೊತ್ತು! ಅಹ, ಎಳೆ ಬಾಲೆಯ ಮೇಲೆ ಎಂತಹ ಪೈಶಾಚಿಕ ಅತ್ಯಾಚಾರ! ಮನಸ್ಸಾದರೂ ಹೇಗೆ ಬಂತಪ್ಪಾ ಆ ಪಿಶಾಚಿ ನ್ಯಾಯ, ನೀತಿ, ಧರ್ಮ, ದೇವರೆಲ್ಲಿ? ಅವೆಲ್ಲವೂ ಅಂಧರೂಢಿಯು ಪುರು ಷಾಧಿಕಾರದ ಧನ ದೌಲತ್ತಿನ ಕೈಗೊಂಬೆಗಳು! ಹಾಳು ಸಮಾಜ

ಹಾಳು ರೀತಿ, ನೀತಿ, ಹಾಳು ಧರ್ಮ ದೇವರು ಎಲ್ಲವೂ ಹಾಳು. ಇವೆಲ್ಲಾ ಹಾಳಾಗಿಹೋಗದೆ ಸ್ತ್ರೀಯರಿಗೆಲ್ಲಿ ಒಳ್ಳೇ ಬಾಳು!" ಎಂದೆಲ್ಲಾ ಸುಮಿತ್ರಾಬಾಯಿಯವರಲ್ಲಿ ತರಂಗವಾಗಿ ಭಾವನೆಗಳೆದ್ದು ಹೃದಯದಲ್ಲಿ ಪ್ರಚಂಡ ಕೋಲಾಹಲವನ್ನೆಬ್ಬಿಸಿದವು ಸ್ತ್ರೀ ಸಮಾಜದ ದುರವಸ್ಥೆಗಾಗಿ ಅನುದಿನವೂ ಪರಿತಪಿಸುತ್ತಿದ್ದ ಸ್ವತಂತ್ರ ವಿಚಾರದ ಮಹಿಳೆಯಿದ್ದರವರು ಕುರ್ಚಿಯಲ್ಲಿ ಕುಳಿತು ಚಿಂತಾಮಗ್ನರಾಗಿದ್ದ ಅವರಿಗೆ ತಾನೊಂದು ಕ್ಲಾಸು ನಡಿಸುತ್ತಿದ್ದೇನೆಂಬ ಗೋಷ್ಠಿಯೇ ಇರಲಿಲ್ಲ.ಎಳೆಬಾಲೆ-ಲಲಿತೆಯ ಚಿತ್ರವೇ ಆವರ ಮನೋದೃಷ್ಟಿಯ ಮುಂದೆ ಕಣ್ಣೀರಿಡುತ್ತಾ ನಿಂತಿದ್ದಿತು. ಅವರೆಷ್ಟು ಪ್ರಯತ್ನಿಸಿದರೂ ಮತ್ತೂ ಅದೇ ಚಿತ್ರ ಕಣ್ಣಮುಂದೆ ಬಂದು ನಿಲ್ಲುವುದು. ಅವಳನ್ನೊಮ್ಮೆ ನೋಡಿಯೇ ಬರಬೇಕೆಂದು ತೋರಿತವರಿಗೆ ಅಂತೆಯೇ ಅವರು ನಿರ್ಧರಿಸಿದರು.

ಲಲಿತೆಗೆ ಸರಿ ಜ್ಞಾನ ಬಂದಾಗ ಮೊದಲು ಅವಳೆತ್ತಿದ ಉದ್ಗಾರವೆಂದರೆ, "ಅದೋ ಸುಮಿತ್ರಾಬಾಯಿಯವರು! ನಾನೇನು ಮಾಡಲಮ್ಮಾ!! ನಾನೇನು ಮಾಡಲಿ!!!" ಎಂಬುದು. ನಾಗಿಯು ಯಾವ ರೀತಿಯಲ್ಲಿ ಸಂತೈಸಿದರೂ ಲಲಿತೆಯು ಭ್ರಾಂತಳಂತೆ ಮೇಲಿನ ಉದ್ಗಾರವನ್ನು ಆಗಾಗ ಎತ್ತುತ್ತಲೇ ಇದ್ದಳು. ಆ ಉದ್ಗಾರವೆತ್ತಿದಾಗಲೆಲ್ಲಾ ಆವಳ ಕಣ್ಣುಗಳಿಂದ ಒಂದೇ ರೀತಿ ನೀರಿಳಿದುಬರುತ್ತಿತ್ತು ಆಗ, "ಅಯ್ಯೋ! ನಾನೇಕಿವಳನ್ನು ಶಾಲೆಗೆ ಕಳುಹಿಸಿದೆನಪ್ಪಾ! ಎಲ್ಲಿಂದೊಬ್ಬರು ಸುಮಿತ್ರಾಬಾಯಿಯವರು ಇವಳಿಗೆ ಸಂಘಟನೆಯಾದರೋ!" ಎಂದು ನಾಗಿಯು ಹಂಬಲಿಸುತ್ತಿದ್ದಳು. ಶಿವಪುರ ಮಠದಲ್ಲಿ ನಡೆದ ವಿದ್ಯಮಾನದ ಮರುದಿನ ಸಂಜೆ ಲಲಿತೆಯು ಹಲವು ಬಾರಿ ಮೇಲಿನ ಉದ್ಗಾರವೆತ್ತಿದಳು ನಾಗಿಯು ಆದಕ್ಕೇನುಮಾಡುವುದೆಂದು ತೋರದೆ ಕಂಗೆಟ್ಟು ಆವಳ ಕಾಲಬುಡದಲ್ಲಿ ಕುಳಿತ್ತಿದ್ದಳು. ಆಗ ಸುಮಿತ್ರಾಬಾಯಿಯವರು ಸಾವಿನ ಮನೆಗೆ ಪ್ರವೇಶಿಸುವಂತೆ ಬಹಳ ಶಂಕಿಸಿ ಶಂಕಿಸಿ ನಾಗಿಯ ಮನೆಯ ಒಳಹೊಕ್ಕರು ರಸ್ತೆಬದಿಯ ಬಾಗಿಲಿಂದ ಒಳಗೆ ಬಂದೊಡನೆಯೇ ತುಸುಹೊತ್ತು ನಿಂತು ಯೋಚಿಸಿದರು. ಆಗ ಒಳಗಿಂದ, "ಅದೋ ಸುಮಿತ್ರಾಬಾಯಿಯವರು! ನಾನೇನು ಮಾಡಲಮ್ಮಾ!

ನಾನೇನು ಮಾಡಲಿ!” ಎಂದು ಲಲಿತೆಯು ಗೋಳಿಡುವುದು ಕೇಳಿಬಂತು. ಅವರು ಚಕಿತರಾಗಿ ಗೊಂಬೆಯಂತೆ ಕ್ಷಣಕಾಲನಿಂತು ಉತ್ತರಕ್ಷಣದಲ್ಲೇ ಒಳಗೆ ಲಲಿತೆಯು ಕೋಣೆಗೆ ಹೋಗಿ “ಲಲಿತ! ಲಲಿತ!!” ಎಂದು ಕರೆದ ಮುಂದೇನು ಹೇಳುವುದೆಂದು ತೋಚದೆಯೇ ಸಂತಾಪ ಭರದಿಂ ಕುತ್ತಿಗೆಯು ಬಿಗಿದು ಬಂದು ಸುಮ್ಮನಾದರು. ಲಲಿತೆಯು ದೃಷ್ಟಿ ತಿರುಗಿಸಿ ಸುಮಿತ್ರಾ ಬಾಯಿಯವರನ್ನು ಕಣ್ಣು ಕಣ್ಣು ನೋಡಿದಳು. ಎವೆಯಿಕ್ಕದೆ ನೋಡಿದಳು. ದಣಿವರಿಯದೆ ನೋಡಿದಳು. ಧರಧರನೆ ಕಣ್ಣೀರು ಸುರಿಸಿದಳು. ತುಸು ಸಮಯದಮೇಲೆ ಮಾತಾಡಲೆತ್ನಿಸಿದಳು ಆಗಲಿಲ್ಲ. ಬಹಳವಾಗಿ ಪ್ರಯತ್ನಿಸಿದಳು ನಿಷ್ಫಲ. ಆ ಮೇಲೆ ಕೈಸನ್ನೆಯಿಂದ ಸುಮಿತ್ರಾ ಬಾಯಿಯವರನ್ನು ಸಮೀಪ ಬರಕೇಳಿ ಅವರ ಅಂಗೈಗಳೆರಡನ್ನೂ ಹಿಡಿದು ಚುಂಬಿಸಿದಳು. ತನ್ನ ಕೈಗಳೆ ರಡನ್ನೂ ಪ್ರಯಾಸದಿಂದ ಒಟ್ಟುಮಾಡಿ ವಂದಿಸಿದಳು. ಸುಮಿತ್ರಾ ಬಾಯಿಯವರು ಎಷ್ಟೊಂದು ದೃಢನಿರ್ಧಾರದಿಂದ ದುಃಖವನ್ನು ಕಟ್ಟಿ ಕೊಂಡರೂ ಪ್ರಯೋಜನವಾಗಲಿಲ್ಲ. ಅದು ಒಮ್ಮೆಯೇ ಕಟ್ಟೊಡೆದು ಹೊರ ಹರಿಯಿತು. ಅವರು, ದೊಪ್ಪನೆ ಲಲಿತೆಯ ಬಳಿ ಕುಳಿತು ಅವಳ ಕೈಗಳೆರಡನ್ನೂ ಹಿಡಿದು ಅತ್ತುಬಿಟ್ಟರು. ಎಷ್ಟೊಂದು ಪ್ರಯತ್ನಿ ಸಿದರೂ ಮತ್ತೆ ಶಬ್ದಗಳೇ ಹೊರಡವು ಅವರ ಬಾಯಿಯಿಂದ. ಇಬ್ಬರೂ ಒಬ್ಬರೊಬ್ಬರನ್ನು ನೋಡುತ್ತಾ ಕೆಲಸಮಯ ಕಳೆದರು. ಧಾರೆಕಟ್ಟಿ ಕಣ್ಣೀರು ಸುರಿಸಿದರು. ಆ ಮೌನವಾದರೂ ಅದೆಷ್ಟು ಅರ್ಥಪೂರ್ಣ! ಎಷ್ಟೊಂದು ಹೃದ್ರಾವಕ! ಸುಮಿತ್ರಾಬಾಯಿಯವರೆಂದರೆ ಮುನಿದು ಬೀಳುತ್ತಿದ್ದ ನಾಗಿಯ ಮೇಲೂ ಅದು ಪರಿಣಾಮವನ್ನುಂಟುಮಾಡಿತು. ಎಂತಹ ವಜ್ರ ಹೃದಯವನ್ನೂ ಕರಗಿಸಿಬಿಡುವಷ್ಟು ಪ್ರಭಾವದ ಮೌನವದು ನಾಗಿಯ ಮಾತೇನು ಮತ್ತೆ? ಅವಳೂ ಕಣ್ಣೀರಿಳಿಸಿ ದುಃಖಿಸುತ್ತಾ ಕೂತಳು. ಲಲಿತೆಯು ಏನೋ ಹೇಳಲೆತ್ನಿಸಿ ಗಂಟಲೊ ತ್ತಿಹಿಡಿದಂದಾಗಿ ಚಡಪಡಿಸಿದಳು ಆಗ ಸುಮಿತ್ರಾಬಾಯಿಯವರು. “ಅಯ್ಯೋ ಲಲಿತ! ಬೇಡ ಮಗು ಬೇಡ, ಮಾತಾಡಲೆತ್ನಿಸಬೇಡ!” ಎಂದು ವೈದಡವಿ ಲಲಿತೆಯನ್ನು ಸಮಾಧಾನಪಡಿಸಲೆತ್ನಿಸಿದರು. ಅವಳು ಜೀವಸಂಕಟವಾಗಿ ಕಣ್ಣು ಮುಚ್ಚಿದಳು.

"ಅಯ್ಯೋ! ಮಗು! ಏನಾಯಿತು!! ಏನಾಯಿತು!!!" ಎಂದು ನಾಗಿಯು ತಲ್ಲಣಗೊಂಡು ಓಡಿಬಂದು ಲಲಿತೆಯ ಗಲ್ಲಹಿಡಿದೆತ್ತಿದಳು "ಏನಿಲ್ಲ, ಸ್ವಲ್ಪ ಹಾಲುತನ್ನಿ, ಬೇಗತನ್ನಿ!" ಎಂದರು ಸುಮಿತ್ರಾಬಾಯಿಯವರು ಉದ್ವೇಗಗೊಂಡು. ನಾಗಿಯು ಅಡಿಗೆಮನೆಗೋಡಿ ಒಂದು ಕಂಚಿನ ಲೋಟಿಯಲ್ಲಿ ಹಾಲು ಹಿಡಕೊಂಡು ಓಡಿಬಂದಳು ಅವಳ ಕೈಕಾಲುಗಳು ಕಂಪಿಸುತ್ತಿದ್ದವು. ಹೃದಯವು ದಡಬಡಿಸುತ್ತಿತ್ತು ಸುಮಿತ್ರಾಬಾಯಿಯವರು "ಲಲಿತ, ಲಲಿತ! ಇದೋ ಸ್ವಲ್ಪ ಹಾಲುಕುಡಿ ಮಗು" ಎಂದರು. ಲಲಿತೆಯು ಮೆಲ್ಲಗೆ ಬಾಯಿತೆರೆದು ಹಾಲು ಕುಡಿದು ತುಸು ಸಮಯದಲ್ಲಿ ಕಣ್ಣು ತೆರೆದಳು ಮತ್ತೂ ಕಣ್ಣೀರು ಹರಿಯತೊಡಗಿತು. ಆಗ ನಾಗಿಯು ತಳಮಳಗೊಂಡು, "ಅಮ್ಮಾ, ನೀವಿನ್ನು ಹೋಗಿ. ಡಾಕ್ಟರರು ಬರುವ ಹೊತ್ತಾಯಿತು. ಯಾರನ್ನೂ ಲಲಿತೆಯ ಹತ್ತಿರ ಬರಬಿಡಕೂಡದೆಂದವರು ಹೇಳಿರುವರು ಮತ್ತೆ ಸಿಟ್ಟುಗೊಂಡಾರು" ಎಂದಳು. ಸುಮಿತ್ರಾಬಾಯಿಯವರು ತುಸು ಕಠಿಣ ದೃಷ್ಟಿಯನ್ನೊಮ್ಮೆ ನಾಗಿಯ ಕಡೆಗೆ ಬೀರಿ, "ಆಯ್ತಾಯ್ತು ಹೋಗುತ್ತೇನೆ. ಇನ್ನೊಮ್ಮೆ ಬರುತ್ತೇನೆ" ಎಂದರು "ಯಾಕೆ ಇನ್ನೊಮ್ಮೆ ಬರುವುದಮ್ಮಾ? ಲಲಿತೆಯು ಇನ್ನು ಶಾಲೆಗೆ ಬರುವ ಹಾಗಿಲ್ಲ. ನಮ್ಮ ಮನೆಗೆಲ್ಲಾ ನೀವು ಯಾಕೆ ಬರುವುದು? ಇನ್ನು ಬರುವುದು ಬೇಡಮ್ಮಾ" ಎಂದು ಬಿಟ್ಟಳು ನಿರ್ದಾಕ್ಷಿಣ್ಯವಾಗಿ ಸುಮಿತ್ರಾಬಾಯಿಯವರನ್ನು ಕಂಡರೆ ಲಲಿತೆಗೆ ಅಸಹನೀಯ ದುಃಖವಾಗುವುದೆಂಬ, ಮತ್ತು ಲಲಿತೆಯನ್ನವರು ಪುನಃ ಎಲ್ಲಿಯಾದರೂ ತಮ್ಮ ವಶಮಾಡಿಕೊಂಡುಬಿಟ್ಟರೆ ಮತ್ತೇನು ಆಪತ್ತುಂಟಾಗುವುದೋ ಎಂಬ ಭೀತಿ ನಾಗಿಗೆ. ಸುಮಿತ್ರಾಬಾಯಿಯವರಿಗೆ ನಾಗಿಯ ಅಭಿಪ್ರಾಯವೆಲ್ಲಾ ತಿಳಿದುಹೋಯಿತು. ಅವರು ಲಲಿತೆಯನ್ನು ನೋಡಿ ದೀರ್ಘ ನಿಶ್ವಾಸಬಿಟ್ಟರು. "ಲಲಿತ ನಾನು ಹೋಗುತ್ತೇನೆ. ಸಂತಾಪಪಡಬೇಡ" ಎಂದು ಹೇಳುವಾಗ ಒಮ್ಮೆಯೇ ದುಃಖವು ಏರಿ ಬರಲು ಅವರು ಸೆರಗಿನ ತುದಿಯನ್ನು ಬಾಯಿಗೊತ್ತಿಟ್ಟು ಕಚ್ಚಿಹಿಡಿದು ಕಣ್ಣೀರಿಳಿಸುತ್ತಾ ಹೊರನಡೆದುಬಿಟ್ಟರು. ಆದರೆ ಲಲಿತೆಯ ಕೋಣೆಬಿಟ್ಟು ಚಾವಡಿಗೆ ಹೋದೊಡನೆಯೇ ಅವರಿಗೆ

ಕಾಲೇ ಬಾರದು. ಎಷ್ಟು ಪ್ರಯತ್ನಿಸಿದರೂ ಹೆಜ್ಜೆಯಿಡಲು ಸಾಧ್ಯ ವಾಗದೆ ಹೋಯಿತು. ಅವರು ತುಸುಹೊತ್ತು ನಿಂತಲ್ಲೇ ನಿಂತರು. ಆ ಮೇಲೆ ಅದೇನೋ ಬೇರೆ ಯೋಚನೆ ಮಾಡಿ ದೃಢ ನಿರ್ಧಾರ ಮಾಡಿದರು ಮೆಲ್ಲಗೆ ನಾಗಿಯ ಮನೆಯಿಂದ ಹೊರ ನಡೆದರು. ಅವರು ಮನೆಗೆ ಹೋಗುವಾಗ ಅವರ ಮನಸ್ಸಿನಲ್ಲುಂಟಾದ ಭಾವನೆ ಗಳನ್ನೆಲ್ಲಾ ನಾವಿಲ್ಲಿ ವಿವರಿಸುವ ಅವಶ್ಯವಿಲ್ಲ. ವಾಚಕರೇ ಅದನ್ನು ಊಹಿಸಿಕೊಳ್ಳಬಹುದು.

ಅಧ್ಯಾಯ ೫

“ಶರಾಬು! ಶರಾಬು!! ಅವ್ವಾ, ನನಗೆ ಶರಾಬು ಕುಡಿಸಿದೆಯಾ?”

ಎಂತಹ ಸ್ಮರಣೆಯಾದರೂ ಕಾಲದ ಉರುಳಾಟದಲ್ಲಿ ಮರೆಮಾಜಿಯೇ ಬಿಡುವುದು ಎಷ್ಟೊಂದು ಛಿನ್ನಛಿನ್ನವಾಗಿ ಒಡೆದುಹೋದ ಹೃದಯ ವನ್ನಾದರೂ ಕಾಲ ವೈದ್ಯನು ಸರಿಮಾಡಿ ಬಿಡುವನು. ಚಮತ್ಕಾರ ವಾಗಿ ಒರಸಿ ಮರೆಸಿಬಿಡುವ ಕಾಲನ ಜಾದು ವಿದ್ಯೆಯಿಂದಲೇ ಜೀವನ ವ್ಯಾಪಾರವು ಸಾಧ್ಯವಾಗಿದೆ. ಲೋಕ ವ್ಯವಹಾರದ ಸಂಚಾಲಕ ಶಕ್ತಿಯೇ ಅದೆನ್ನಬಹುದು. ಭವಿಷ್ಯದ ಗರ್ಭದಲ್ಲಿ ಭೀಕರವಾಗಿ ಅಸಹ ನೀಯವಾಗಿ ತಲ್ಲಣಗೊಳಿಸುವ ಪರಿಸ್ಥಿತಿಯು ವರ್ತಮಾನದ ಮಡಿಲಿಗೆ ಬರುವಾಗ ತುಸು ಸಮಯದ ವೇದನೆಯನ್ನಷ್ಟೇ ಉಂಟುಮಾಡುವುದು. ಆಮೇಲೆ ಕೆಲಸಮಯ ಸಂತಾಪದ ಬಿಸಿಯುಸಿರನ್ನೆಬ್ಬಿಸಿ ಭೂತಕಾಲದ ಸೆರಗಿನೊಳಗೆ ಮರೆಯಾಗುವುದು.

ಶಿವಪುರವನ್ನೊಮ್ಮೆ ಚಕಿತಗೊಳಿಸಿ ಎಲ್ಲೆಲ್ಲಿಯೂ ಕ್ಷೋಭೆ ಯನ್ನೆಬ್ಬಿಸಿದ್ದ ಆ ಭೀಕರ ಸುದ್ದಿಯ ನಲಿದಾಟವು ಇಂದೀಗ ಮುಗಿದು ಅಂಕದ ಪರದೆ ಎಳೆಯಲ್ಪಟ್ಟಿತ್ತು. ಶಿವಪುರಸ್ಥರು ಯಥಾಪ್ರಕಾರ ತಮ್ಮ ಅನುನಿತ್ಯದ ಜೀವನ ವ್ಯಾಪಾರದಲ್ಲಿ ನಿರತರಾಗಿದ್ದರು. ಶಿವಾ ನಂದರು ಕೆಲದಿನ, ಗಂಡ ಸತ್ತ ಸ್ತ್ರೀಯಂತೆ ಹೊರಗೆ ಮುಖ ಸಹ

ತೋರಿಸದೆ ಒಳಗೊಳಗೇನೇ ಇದ್ದರೂ ದಿನ ಹೋದಂತೆಲ್ಲಾ ಹೆಚ್ಚೆಚ್ಚು ಧೈರ್ಯಗೊಂಡು ಮುಂದಡಿಯಿಟ್ಟು ಹಿಂದಿನ ಜೀವನದ ದಾರಿಗೇನೇ ಸೇರಲೆತ್ನಿಸುತ್ತಿದ್ದರು. ಸ್ವಲ್ಪ ಸಮಯ ಕಾಕಪೋಕರು ಕೆಲವರು ಅವರನ್ನು ಕಂಡೊಡನೆಯೇ ಏನೇನೋ ಹೇಳಿ ಕೂಗಿಡುತ್ತಿದ್ದರು. ಗೊಳ್ಳೆಂದು ನಗುತ್ತಿದ್ದರು. ಮಾನವಂತವೆನಿಸುವ ಸಮಾಜವು ಕಣ್ಮುಚ್ಚಿ ಸುಮ್ಮನಿರುತ್ತಿದ್ದಾಗ ಕಾಕಪೋಕ ಹೃದಯವು ಶಿವಾನಂದರನ್ನು ಬಹಿರಂಗವಾಗಿ ಅವಮಾನಿಸಲು ಎದೆಗೊಂಡಿತ್ತು. ಆದರೆ ಶಿವಾನಂದರು ಅದನ್ನು ಗಣ್ಯಮಾಡಬೇಕೇಕೆ? ಸಮಾಜದ ಆಧಾರ ಸ್ಥಂಭದಂತಿರುವ ಆಢ್ಯಗೃಹಸ್ಥರು ಅವರನ್ನು ಯಥಾಪ್ರಕಾರ ಮಾನಿಸುತ್ತಿರುವಾಗ ಈ ತಲೆಹೋಕರೇನು ಮಾಡಿದರೇನು?

ಆದರೆ ಲಲಿತೆಯ ಮೇಲೆ ಕಾಲನ ಕೈಚಳಕವು ಅಷ್ಟೊಂದು ಜಯಶೀಲವಾಗಿ ನಡೆಯಲಿಲ್ಲ. ಅವಳು ನೆಳಲಡಿಯ ಸೊರಗಿದ ಹೂಗಿಡದಂತಿದ್ದಳು ರಕ್ತಛಾಯೆಯಿಲ್ಲದೆ ಮುಖವೆಲ್ಲಾ ಬಿಳುಪೇರಿ ಹೋಗಿತ್ತು. ಕಂಗಳು ನಿಸ್ತೇಜವಾಗಿದ್ದವು. ನಾಗಿಯು ಹತ್ತು ಮಾತಾಡಿದರೆ ಒಂದೇನಾದರೂ ಶಬ್ದವು ಅವಳ ತುಟಿಗಳೊಳಗಿಂದ ಬಹು ಪ್ರಯಾಸದಿಂದ ಹೊರಬೀಳುತ್ತಿತ್ತು. ಅವಳಿಲ್ಲಿಯಾದರೂ ದಿನಕ್ಕೊಂದು ಸಲ ಒಂದು ಮುಷ್ಟಿ ಊಟಮಾಡಿದರೆ ದೊಡ್ಡದು. ಜೀರ್ಣವೇ ಇದ್ದಿಲ್ಲ. ಇಡೀ ದಿನ ಮಲಗಿಕೊಂಡು ಕಣ್ಣೀರಡುವುದೊಂದೇ ಅವಳ ಕೆಲಸ. ಎದ್ದು ಕೂತರೂ ಕೂತಲ್ಲೇ ಕೂತು ಯೋಚಿಸುವುದೇ ನಾಗಿಯು ಏನೇನೆಲ್ಲಾ ಮದ್ದು ಮಾಡಿಸಿದಳು. ಬಗೆ ಬಗೆಯ 'ಟೋನಿಕ್'ಗಳನ್ನೆಲ್ಲಾ ಒತ್ತಾಯದಿಂದ ಕುಡಿಸಿದಳು. ಹಲವು ಪರಿಯಿಂದ ಸಮಾಧಾನಪಡಿಸಲೆತ್ನಿಸಿದಳು. ಏನು ಮಾಡಿದರೂ ಲಲಿತೆಯು ಕ್ಷೀಣಳಾಗುತ್ತಾ ಬರುತ್ತಿದ್ದಳೇ ಹೊರತು ಸ್ವಲ್ಪವೂ ಪುಷ್ಟಿಯಾಗುತ್ತಿದ್ದಿಲ್ಲ. "ನಾನಿನ್ನು ಯಾವಾಗ ಶಾಲೆಗೆ ಹೋಗುವುದಮ್ಮಾ? ಸುಮಿತ್ರಾ ಬಾಯಿಯವರನ್ನೊಮ್ಮೆ ನೋಡಿಬರಲೇ?" ಎಂದು ಮಾತ್ರ ನಾಗಿಯೊಡನೆ ಒಮ್ಮೊಮ್ಮೆ ಪ್ರಶ್ನಿಸುತ್ತಿದ್ದಳು. ಮೊದಮೊದಲು ನಾಗಿಯು, "ನೀನು

ಸಂಪೂರ್ಣ ಆರೋಗ್ಯವಂತಳಾಗು. ಆ ಮೇಲೆ ಶಾಲೆಗೂ ಹೋಗ
ಬಹುದು. ಸುಮಿತ್ರಾಬಾಯಿಯವರನ್ನೂ ನೋಡಬಹುದು" ಎಂದು
ಲಲಿತೆಯನ್ನು ಸಮಾಧಾನ ಪಡಿಸುತ್ತಿದ್ದಳು. ಆದರೆ ಯಾವ ಸಮಾಧಾ
ನವೂ ಲಲಿತೆಯ ಹೃದಯದ ಕೊರಗಿನ ಮೊನೆಯನ್ನು ಸವೆಯಿಸಲಿಲ್ಲ.
ಹೀಗಾದರೆ ಅವಳು ಬದುಕುವ ಬಗೆ ಹೇಗೆಂಬ ದುಗುಡದಿಂದ ನಾಗಿಯು
ಬಹಳ ತಳಮಳಗೊಂಡಿದ್ದಳು. ಲಲಿತೆಯನ್ನು ನೋಡಿದಾಗಲೆಲ್ಲಾ
ಅವಳ ಕಣ್ಣಲ್ಲಿ ನೀರು ತುಂಬಿ ಬರುತ್ತಿತ್ತು

ಇನ್ನು ಮುಚ್ಚು ಮರೆಮಾಡಿದರೆ ಫಲವಿಲ್ಲೆಂದು ಒಂದು ದಿನ
ನಾಗಿಯು ಲಲಿತೆಗೆ ಎಲ್ಲವನ್ನೂ ಸ್ಪಷ್ಟವಾಗಿ ಹೇಳಿಬಿಟ್ಟಳು. "ಮಗು
ಲಲಿತ, ಇನ್ನು ನೀನು ಶಾಲೆ ಮತ್ತು ಸುಮಿತ್ರಾಬಾಯಿಯವ
ಯೋಚನೆ ಬಿಡಬೇಕು. ಈ ಪಾಪಿನಿಯ ಗರ್ಭದಲ್ಲಿ ಹುಟ್ಟಿದ ನಿನಗೆ
ವಿದ್ಯೆ, ಬುದ್ಧಿ ಕಲಿತು, ಮದುವೆಯಾಗಿ ಮಾನವಂತ ಜೀವನ ನಡಿಸುವ
ಭಾಗ್ಯವಿಲ್ಲ. ನೀನಿನ್ನು ಪತಿತೆ. ಸಮಾಜವು ಆ ಮುದ್ರೆಯನ್ನು
ಇಷ್ಟರಲ್ಲೇ ನಿನ್ನ ಹಣೆಗೊತ್ತಿಬಿಟ್ಟಿರುವುದು. ಅಂದಮೇಲೆ ಈ ರೀ
ಕೊರಗಿ ನಿನ್ನ ಶರೀರವನ್ನು ಕರಗಿಸಿಕೊಂಡೇನುಫಲ ಮಗು? ಹೇಗೂ
ಆದುದಾಯಿತು. ಶಿವಾನಂದರ ಉಪಟಳದಿಂದಾಗಿ ಅತ್ಯಾಚಾರ
ದಿಂದಾಗಿ ನಿನ್ನ ಜೀವನಲತೆಯು ಬೇರುಮುರಿದು ನೆಲಕ್ಕೊರಗಿರುವುದು
ಇನ್ನು ಅದರ ಬುಡಕ್ಕೆನೇ ಗೊಬ್ಬರ ಹಾಕಿ ಅದರಿಂದ ಆದಷ್ಟು ಫ
ಪಡೆಯುವುದೊಂದೇ ದಾರಿಯುಳಿದಿರುವುದು. ಮಗು, ನೀನೀರೀ
ಜೀವನವನ್ನು ಹಾಳುಮಾಡಿಕೊಂಡು ಫಲವೇನು? ಇದೇ ರೀತಿ ನಡೆದ
ಹೆಚ್ಚುಕಾಲ ಬದುಕಲಾರೆ. ನನಗೂ...." ಎನ್ನುವಷ್ಟರಲ್ಲಿ ನಾಗಿಯ
ಕುತ್ತಿಗೆಯು ಕಟ್ಟಿಹೋಯಿತು. ಅವಳು ಬಾಯ್ಬಿಟ್ಟು ಅತ್ತುಬಿಟ್ಟಳು
ಆದರೆ ಲಲಿತೆಯ ಬಾಯಿಯಿಂದ ಒಂದು ಶಬ್ದವೂ ಹೊರಡಲಿಲ್ಲ
ಒಂದೇ ಒಂದು ಬೊಟ್ಟು ಕಣ್ಣೀರಾದರೂ ಅವಳ ಕಂಗಳಿಂದ ಹೊ
ಬೀಳಲಿಲ್ಲ. ಗೊಂಬೆಯಂತೆ ಕೂತು ತಾಯಿಯು ಹೇಳುವುದನ್ನೆಲ್ಲಾ
ಕೇಳುತ್ತಿದ್ದಳವಳು.

ಈ ಮಧ್ಯೆ ನರಸಿಂಹನು ಆಗಾಗ ಬಂದು, ಲಲಿತೆಗೆ ಸೌಖ್ಯವಾಗಿರು
ವುದೋ ಎಂದು ನೋಡಿ ಹೋಗುತ್ತಿದ್ದನು. ಶಿವಾನಂದರ ಕಾವ

ದಾಹವು ಅವನನ್ನು ನಾಗಿಯ ಮನೆಗಟ್ಟುತ್ತಿತು. ಶಿವಾನಂದರಿಗೀಗ ಇಡಿ ಮುಳುಗಿದ ಮೇಲೆ ಚಳಿಯೇನೂ ಇರಲಿಲ್ಲಿ. ಮೊದಮೊದಲು ಸಮಾಜವು ಏನು ಮಾಡಿಬಿಡುವುದೋ ಎಂಬೊಂದು ಭೀತಿ ಅವರಲ್ಲಿತ್ತು. ತಾನೊಬ್ಬ ಸನ್ಯಾಸಿ, ಹಾಗೆಲ್ಲ, ಮಾಡುವುದು ತಪ್ಪೆಂದು ಮನಸ್ಸಾಕ್ಷಿಯೂ ಕೂಗಿಡುತ್ತಿತ್ತು ಆದರೆ ಸಮಾಜವು ಕೆಲಸಮಯ ಮಾತ್ರ ಬರಿಯ ಗುಲ್ಲೆಬ್ಬಿಸಿ ಸುಮ್ಮನಾದುದರಿಂದ, ಮಾತ್ರವಲ್ಲದೆ ತನ್ನನ್ನು ಯಥಾಪ್ರಕಾರ ಮಾನಿಸ ಹತ್ತಿದುದರಿಂದ ಅದರ ಹಣೆಬರಹ ಇಷ್ಟೇ ಎಂದವರು ಬೆಲೆಕಟ್ಟಿ ನಿರ್ಭಯರಾದರು. ಮನಸ್ಸಾಕ್ಷಿಯು ಕೂಗಿನ ಕುತ್ತಿಗೆಯನ್ನೇ ಹಿಸುಕಿಬಿಟ್ಟರು. ಮೊದಮೊದಲು ಬೀದಿಹೋಕರ ಅಪಹಾಸ್ಯದ ಕೂಗು ಅವರ ಹೃದಯವನ್ನೊಮ್ಮೆ ತಿವಿದು ಬಿಡುತ್ತಿತ್ತು. ಆ ಮೇಲೆ ಅದವರಿಗೆ ಅಭ್ಯಾಸವಾಗಿ ಹೋಯಿತು ಹುಸಿನಗೆಯಿಂದ ಅದನ್ನವರು ಮೂಲೆಗೊತ್ತುತ್ತಿದ್ದರು ಶಿವಾನಂದರಿಗೆ ಶಿವಪುರದಲ್ಲಿ ಹುಡುಗಿಯರಿಗೇನೂ ಬರಗಾಲಬಿದ್ದಿರಲಿಲ್ಲ. ಅವರನ್ನೊದಗಿಸಿಕೊಡುವ ದಲಾಲಿಗಳಿಗೂ ಕೊರತೆಯಿದ್ದಿಲ್ಲ. ಯಾಕೆಂದರೆ ಶಿವಪುರ ಮಠದಲ್ಲಿದ್ದ ಹೆಚ್ಚಿನವರೆಲ್ಲಾ ಅವರು ಹೇಳಿದಂತೆ ಕುಣಿಯಲು ಸಿದ್ಧರಿದ್ದವರು. ಅವರೇನಾದರೂ ಆಜ್ಞಾಪಿಸಿದರೆಂದರೆ 'ಪರಾಕೆ, ಬುದ್ಧಿ'ಯೆಂದು ಎಂತಹ ನೀಚ ಕೃತ್ಯ ಮಾಡಕೆಂದಹೇಸುವವರಲ್ಲ. ಅಷ್ಟೊಂದು ಕೆಟ್ಟುಹೋಗಿತ್ತು ಮಠದ ವಾತಾವರಣ ಯಾವುದು ಧರ್ಮಪೀಠವಾಗಿ ಧರ್ಮಪ್ರಚಾರ, ನೀತಿನಿಯಮ ಪಾಲನೆ, ಸಮಾಜದ ಸಂಘಟನೆ ಮತ್ತು ಕ್ಷೇಮ ಸಾಧನೆಯ ಉಪಕರಣವಾಗಿ, ಆತ್ಮತೇಜಸ್ಸಿನ ಪವಿತ್ರ ವಾತಾವರಣವಾಗಿರಬೇಕಿತ್ತೋ ಅದೇ ಇಂದು ಅಧರ್ಮ, ಅನೀತಿ, ಅನಾಚಾರದ ತವರುಮನೆಯಾಗಿ, ಕೊಳತು ಹುಳತು ನಾರುತ್ತಿತ್ತು. ವೇಶ್ಯೆಯರನ್ನು ಶಿವಾನಂದರಿಗೆ ತಂದುಕೊಡುವ ಮಾತಂತಿರಲಿ, ತಮ್ಮ ಸ್ತ್ರೀಯರನ್ನೂ ಅವರ ಕಾಮದಾಹದ ಬಾಯಿಗೆ ಬಲಿಕೊಡಲು ಮುಂದಾಗುತ್ತಿದ್ದ ಲಂಡರಿಗೇನೂ ಮಠದಲ್ಲಿ ಕಡಿಮೆ ಯಿದ್ದಿರಲಿಲ್ಲ. ಮಠದಲ್ಲಿದ್ದವರೆಲ್ಲಾ ಅವರಿಗೆ ಅನುಕೂಲರಾಗಿಯೇ ಇದ್ದರು. ಅವರ ದುರ್ವರ್ತನೆಯನ್ನು ಧೈರ್ಯದಿಂದ ವಿರೋಧಿಸುವ ನೈತಿಕ ಬಲ

ವುಳ್ಳ ಒಬ್ಬನೇ ಒಬ್ಬ ವ್ಯಕ್ತಿಯಾದರೂ ಶಿವಪುರ ಮಠದಲ್ಲಿರಲಿಲ್ಲ. ಎಲ್ಲರೂ ಶಿವಾನಂದರ ತಾಳಕ್ಕೆ ತಕ್ಕಂತೆ ಹೆಜ್ಜೆ ಹಾಕವವರು. ಅವರ ಅಧಿಕಾರ, ಅವರ ಧನದೌಲತ್ತು, ಅವರ ಆಸ್ತಿ, ಅವರ ಶಕ್ತಿಯಿಂದೆಲ್ಲಾ ಅವರ ಗೇನು ಮಾಡಲೂ ಸಾಧ್ಯವಿದೆ ನಾಳೆ ತಮ್ಮನ್ನು ಹೊರಹಾಕಿದರೆ ತಮ್ಮಪಾಡೇನು? ಅವರೇನು ಬೇಕಾದರೂ ಮಾಡಲಿ ತಮಗೇನು? ಎಂಬ ತಮ್ಮ ತಮ್ಮ ಸುರಕ್ಷಿತತೆಯ ಸ್ವಾರ್ಥಬಾವನೆಯು, ಅಭಿಮಾನ ಶೂನ್ಯ ತೆಯು, ಆತ್ಮಬಲದ ಅಭಾವವು ಸ್ವಲ್ಪ ಸ್ವಗೌರವವಿದ್ದ ಕೆಲವರನ್ನೂ ಪೌರುಷರಹಿತರನ್ನಾಗಿ ಮಾಡಿಬಿಟ್ಟದ್ದಿತು. ಅವರು ಯಂತ್ರದೋಪಾದಿ ತಮ್ಮ ನಿಯಮಿತ ಕೆಲಸಮಾಡಿ ಮಜೂರಿ ಪಡೆದು ಸುಮ್ಮನಿರುತಿದ್ದರು. ಸಮಾಜದ ಕಣ್ಣಿಗೆ ಮಣ್ಣುಹಾಕಲು ಮಠದಲ್ಲಿ ಪೂಜೆ ಪುನಸ್ಕಾರ, ಪಠನ ಪಾರಾಯಣ, ವಾಚನ, ಭಜನೆ, ಕೀರ್ತನೆ ಆರಾಧನೆ, ವ್ರತ ನಿಯಮ ನಿಷ್ಠೆ, ದಾನ ಧರ್ಮ ದಕ್ಷಿಣೆಯೆಲ್ಲಾ ಸಾಂಗವಾಗಿ ನಡೆಯುತ್ತಿದ್ದಿತು ಈ ಕಣ್ಣು ಕಟ್ಟೋಂದು ನಡೆದರೆ ಸರಿಯಷ್ಟೆ ಸಮಾಜಕ್ಕೆ! ಮತ್ತೇನು ಬೇಕು? ಹೊರಗಣ ವೇಷಭೂಷಣಗಳು ಸರಿಯಾಗಿದ್ದರಾಯಿತು ಒಳಗೆ ಎಂತಹ ಕೊಳಕಿದ್ದರೇನು?

ಶಿವಾನಂದರು, ಜನತೆಯ ದೌರ್ಬಲ್ಯ ಸಮಾಜದ ಅಸಡ್ಡೆ ಯಿಂದಾಗಿ ಚೆನ್ನಾಗಿ ಪಳಗಿದ ವಿಟಪುರುಷನಂತಾಗಿ ಬಿಟ್ಟರು. ನಾ ನಾಚಿಕೆ ಮಾನ ಮರ್ಯಾದೆಯು ಲವಲೇಶವೂ ಅವರಿಗಿಲ್ಲದಾಯಿತು ಅವರ ಕಾಮ ಲಾಲಸೆಯು ದಿನೇ ದಿನೇ ಅಧಿಕವಾಗಹತ್ತಿತು ಅವರು ಸಾಮಾನ್ಯ ವಿಟರಂತೆ ರಾತ್ರಿ ಮಠ ಬಿಟ್ಟು ಹೊರಹೋಗಲಾರಂಭಿಸಿದರು ಅದಕ್ಕಾಗಿ ಸೆಲೂನ್ ಕಾರೊಂದನ್ನು ತೆಗೆದುಕೊಂಡಿದ್ದರು. ನರಸಿಂಹನ ಕೆಲಸವು ಇಂದೀಗ ಬಹಳ ಸುಲಭವಾಗಿತ್ತು. ಹುಡುಗಿಯರನ್ನು ಗುಟ್ಟಿ ನಲ್ಲಿ ಮಠಕ್ಕೆ ಕರದೊಯ್ದು ಕೊಡುವ ಕಷ್ಟವು ಅವನಿಗೆ ತಪ್ಪಿತ್ತು. ಶಿವಾನಂದರು ಇಂದು ರಾತ್ರಿ ಕಾರಿನಲ್ಲಿ ಅಲ್ಲಿ ಹೋದರು, ಇಲ್ಲಿ ಹೋದರು ಎಂಬ ಉತ್ತೇಜಕ ಸುದ್ದಿಯು ದಿನದಿನ ಶಿವಪುರದಲ್ಲಿ ಹಬ್ಬು ತ್ತಿತ್ತು. ಸುದ್ದಿಯ ದೂತರು ಹೇಗಾದರೂ ಮಾಡಿ ಆ ರಹಸ್ಯವನ್ನು ಬಯಲಿಗೆಳೆದು ಬಿಡುತ್ತಿದ್ದರು ಶಿವಪುರಸ್ಥರಿಗೂ ಈ ಸುದ್ದಿಗಳ

ನಿತ್ಯಗಟ್ಲೆಯವುಗಳಾಗಿ ಬಿಟ್ಟುವು. ಕ್ಷಣಕಾಲದ ಉದ್ವೇಗವನ್ನಷ್ಟೇ ಉಂಟುಮಾಡಿ ಅವು ಆರಿಹೋಗುತ್ತಿದ್ದವು ಶಿವಾನಂದರ ವಿಷಯ ಲಾಲಸೆಯು, ಕಾಮಚೇಷ್ಟೆಯು ಅದಾವ ರೂಪದಲ್ಲೆಲ್ಲಾ ಆವಿಷ್ಕಾರ ವಾಗುತ್ತಿತ್ತೆಂಬುವುದನ್ನು ಬರೆಯುತ್ತಾ ಹೋದರೆ ಅದಕ್ಕಾಗಿಯೇ ಇನ್ನೊಂದು ಪುಸ್ತಕ ಬೇಕಾದೀತು ನಮ್ಮ ಲೇಖನಿಯು ಮುಟ್ಟದಷ್ಟು ಹೇಯವಾಗಿರುವ ಅವರ ಭೋಗವಿಲಾಸದ ಸಂಗತಿಗಳನ್ನು ನಾವಿಲ್ಲಿ ವಿವರಿಸಹೋಗದೆ ನಮ್ಮ ವಾಚಕರ ಕಲ್ಪನೆಗೇನೇ ಅದನ್ನು ಬಿಟ್ಟು ಬಿಡುವೆವು ಶಿವಾನಂದರು ಶೋಕು ಡ್ರೆಸ್ ಹಾಕಿಕೊಂಡು ಆ ಊರಿಗೆ ಹೋದರು, ಅಲ್ಲಿ ಹಾಗೆ ಮಾಡಿದರು, 'ಫುಲ್ ಸೂಟ್' ಹಾಕಿಕೊಂಡು ಆ ನಾಟಕ ನೋಡಹೋದರು, ಈ ಸರ್ಕಸ್ ನೋಡಿದರು, ಇಂದು ರಾತ್ರಿ ಅಲ್ಲಿ ಧಾವಿಸಿದರು, ಆ ಮನೆಗೆ ಪ್ರವೇಶಿಸಿದರು, ಎಂದೆಲ್ಲಾ ಸುದ್ದಿಗಳ ಮೇಲೆ ಸುದ್ದಿಗಳು ಶಿವಪುರದ ವಾತಾವರಣವನ್ನು ದಟ್ಟವಾಗಿ ಕವಿದು ಬಿಟ್ಟುವು ಕಾಕ-ಪೋಕರಿಗದು ದಿನ ನಿತ್ಯದ ಅತ್ಯಂತ ರುಚಿ ಕರ ಆಹಾರವಾಗಿದ್ದಿತು. ಅದಕ್ಕವರು ಬೇಕುಬೇಕಾದ ಬಣ್ಣಕೊಟ್ಟು ಕತೆಕಟ್ಟಿ ಹೇಳುತ್ತಿದ್ದರು ಆದರೂ ಶಿವಪುರದ ಪ್ರತಿಷ್ಠಿತ ಸಮಾಜದ ಹೃದಯವು ಅದರಿಂದ ಒಂದಿಷ್ಟು ಕಂಪಿಸಲಿಲ್ಲ ಶಿವಾನಂದರ ಸ್ಥಾನ-ಮಾನಕ್ಕೆ ಒಂದಿಷ್ಟೇನೂ ಧಕ್ಕೆಯುಂಟಾಗಲಿಲ್ಲ ಅದರ ಬದಲಿಗೆ, ಅವರು ಬಹಳ ಬುದ್ಧಿಶಾಲಿ, ಕಾರ್ಭಾರಿ, ಏನುಮಾಡುವುದಕ್ಕೂ ಶಕ್ತಿ ಯುಳ್ಳವರೆಂಬ ಖ್ಯಾತಿ ಮತ್ತು ಭೀತಿಯ ಭೂಷಣವೇ ಅವರಿಗೆ ದೊರೆಯ ಹತ್ತಿತು. ಇದೀಗ ಸಮಾಜದ ಇಂದಿನ ರೀತಿ.

ಶಿವಾನಂದರೊಂದುದಿನ,'ಏನೋ ನರಸಿಂಹ ಆ ಲಲಿತೆಗಿನ್ನೂ ಸೌಖ್ಯ ವಾಗಿಲ್ಲವೇ? ನಾಳೆ ರಾತ್ರಿ ನನಗಲ್ಲಿ ಹೋಗಲೇಬೇಕು'' ಎಂದು ಬಿಟ್ಟರು ನಿರ್ಧಾರ ಪೂರ್ವಕವಾಗಿ. ನರಸಿಂಹನು ಆಗ ಬೇರೇನು ಹೇಳುವುದಕ್ಕೂ ಹೆದರಿ, ''ಅಯ್ತು ಬುದ್ಧಿ'' ಎಂದು ಬಿಟ್ಟನು. ಕೈಯ ಪಕ್ಷಿಯು ಎಷ್ಟೊಂದು ಸುಂದರವಾಗಿದ್ದರೂ, ಕೈಗೆ ಸಿಗದೆ ದೂರದ ಮರದಲ್ಲಿ ಎಲೆ ಗಳ ಮರೆಯಲ್ಲಿ ಕುಳಿತಿರುವ ಪಕ್ಷಿಯ ಮೇಲೆ ಕಣ್ಣುಹಾಕಿ ಅದನ್ನು ಪಡೆಯಲು ಹಾತೊರೆಯುವುದು ಮಾನವನ ಸ್ವಾಭಾವಿಕವಾದೊಂದು

ಮನೋವೃತ್ತಿ. ಅಂತೆಯೇ ಶಿವಾನಂದರು ಎಲ್ಲೆಲ್ಲಿ ಹೋಗಿ ಎಷ್ಟು ಮಂದಿ ಸ್ತ್ರೀಯರನ್ನೆಲ್ಲಾ ಕಾಮಿಸಿ ರಮಿಸಿದರೂ ಲಲಿತೆಯ ಮೇಲಿನ ಅವರ ಕಾಮತೃಷೆಯು ಒಳಗೊಳಗೆ ಉರಿಯುತ್ತಿತ್ತು. ಆದರೆ, 'ಅವಳಿಗೆ ಇನ್ನೂ ಸೌಖ್ಯವಾಗಲಿಲ್ಲ, ಬಹಳ ಅಶಕ್ತಿಯಿದೆ, ಕೃಶವಾಗಿದ್ದಾಳೆಂ'ದು ನರಸಿಂಹನು ಲಲಿತೆಯನ್ನು ಆಗಾಗ ನೋಡಿ ಬಂದು ಹೇಳುತ್ತಿದ್ದುದರಿಂದ ಅದನ್ನವರು ನಿರ್ವಾಹವಿಲ್ಲದೆ ತಡೆದಿಟ್ಟುಕೊಳ್ಳುತ್ತಿದ್ದರು, ಆದರೆ ಅದು ತಡೆದಿಟ್ಟಷ್ಟು ಹೆಚ್ಚೆಚ್ಚು ಪ್ರಕೋಪಗೊಳ್ಳುತ್ತಿತ್ತು. ಕಡೆಗವರಿಗೆ ತಡಕೊಳ್ಳಲಾರದೆ ನರಸಿಂಹನೊಡನೆ ಮೇಲಿನ ಮಾತನ್ನು ಹೇಳಿದರು. ಅವನು ಮೊದಲು, "ಆಯ್ತು ಬುದ್ಧಿ" ಎಂದು ಸುಮ್ಮನಾದವನು, ಸ್ವಲ್ಪ ಸಮಯದ ಮೇಲೆ, "ಅಂದಿನಂತೆಯೇ ಆದರೆ? ಕೆಲವು ದಿನ ಹೋಗಲಿ ಪರಾಕೆ. ಇನ್ನೂ ಆವಳಿಗೆ ಸಂಪೂರ್ಣ ಸೌಖ್ಯವಾಗಲಿಲ್ಲ" ಎಂದನು. "ಯಾವಾಗ ಸೌಖ್ಯವಾಗುವುದೋ ಇನ್ನು?" ಎಂದು ನಿರಾಶೆಯ ಉದ್ಗಾರವೆತ್ತಿ ಸುಮ್ಮನಾದರು ಶಿವಾನಂದರು ಕಡೆಗೆ.

ದಿನಹೋದಂತೆ ಲಲಿತೆಯ ದುಃಖವು ಸ್ವಲ್ಪ ಸ್ವಲ್ಪ ಕಡಿಮೆಯಾಗುತ್ತಾ ಹೋದರೂ ದೇಹವು ಕೃಶವಾಗಿಯೇ ಇತ್ತು. ಜೀರ್ಣಶಕ್ತಿಯು ಹೆಚ್ಚಾಗಲಿಲ್ಲ "ಏನು ಮಾಡುವುದು? ಇನ್ನೇನು ಮಾಡುವುದು? ಎಂಬ ಚಿಂತೆಯಿಂದ ನಾಗಿಯೂ ಸೊರಗಿ ಹೋಗಿದ್ದಳು. ಸಿಕ್ಕಿದವರೊಡನೆಲ್ಲಾ ಅವಳು ಮಾತಾಡುವ ಮಾತೇ ಇದು. ಅವಳಿಗೆ ಅದೇ ಒಂದು ಹುಚ್ಚು ಹಿಡಿದಂತಾಗಿತ್ತು ಯಾರು ಏನು ಮದ್ದು ಹೇಳಿದರೂ ನಂಬಿ ಒಂದೊಮ್ಮೆ ಅತಿ ಉತ್ಸಾಹದಿಂದ ಲಲಿತೆಗದನ್ನು ಮಾಡುವಳು. ಆದರೆ ಅದು ನಿಷ್ಫಲವಾದಾಗ ವಾತ್ರಷ್ಟು ನಿರುತ್ಸಾಹ ಪಡುವಳು ಅವಳ ದಪ್ಪ ದೇಹದ ಮಾಂಸವು ಜಾರುತ್ತಿತ್ತು. ಗಟ್ಟಿ ಮೈಗಟ್ಟು ಸಡಿಲಾಯಿತು ಕಡೆಗೆ ಯಾರೋ ಅವಳಿಗೊಂದು ಗುಟ್ಟಿನ ಮದ್ದು ಹೇಳಿದರು "ಒಡನೆಯೇ ಅದು ಫಲವೆಂದು ತೋರಿತು ನಾಗಿಗೆ. ಗುಟ್ಟಾಗಿ ಆ ಮದ್ದನ್ನವಳು ತರಿಸಿಟ್ಟಳು ಅಂದು ರಾತ್ರಿ ಲಲಿತೆಯು ಮಲಗುವಾಗ ನಾಗಿಯು ಅತ್ಯಂತ ಮಮತೆಯಿಂದ ಕರೆದು "ಮಗು ಹೀಗಾದರೆ ಬದುಕುವುದು ಹೇಗೆ! ನಾನು ಇವತ್ತು ಬೆಳಗೆ

ಡಾಕ್ಟರ್ ಗಂಗಾಧರರಾಯರ ಬಳಿಗೆ ಹೋಗಿ ಹೊಸ ಔಷಧಿಯೊಂದನ್ನು ತಂದಿದ್ದೇನೆ. ಅದನ್ನು ತೆಗೆದುಕೊಂಡರೆ ಯಾರಿಗಾದರೂ ಜೀರ್ಣಶಕ್ತಿಯುಂಟಾಗುವದಂತೆ. ದೇಹ ಪುಷ್ಟಿಯಾಗುತ್ತದಂತೆ. ಅದನ್ನು ಸ್ವಲ್ಪ ಕೊಡಲೇ?" ಎಂದಳು ಬಹಳ ಸಂದೇಹಗೊಂಡು. "ನಾನಿನ್ನು ಬದುಕಿ ಫಲವೇನಮ್ಮಾ? ಬೇಗನೇ ಸತ್ತರೆ ಲೇಸಲ್ಲವೇ?" ಎಂದಳು ಲಲಿತೆ ತೀವ್ರ ವೈರಾಗ್ಯಗೊಂಡು. "ಹಾಗೆ ಹೇಳಬಾರದು ಮಗು, ಹೇಳಬಾರದು! ನಾನು ನಿನ್ನ ತಾಯಿಯಲ್ಲವೇ? ನನ್ನ ಮಾತನ್ನು ಕೇಳಲಾರೆಯಾ? ಇದೇ ರೀತಿ ನಡೆದರೆ ನಾನೂ ಬದುಕುವ ಹಾಗಿಲ್ಲ ಮಗು." ಎಂದು ನಾಗಿಯು ದುಃಖಿಸಲಾರಂಭಿಸಿದಳು. ಲಲಿತೆಯು ಬಹಳ ಹೊತ್ತು ಏನನ್ನೋ ಆಲೋಚಿಸುತ್ತಾ ಸುಮ್ಮನಿದ್ದಳು. ಅವಳ ದೃಷ್ಟಿಯು ಕೋಣೆಯ ಕಿಟಕಿಯಿಂದ ಅತಿ ದೂರದ ದಿಗಂತಕ್ಕೆ ಹರಿದಿತ್ತು. ಅವಳ ಜೀವನದ ದೃಶ್ಯಗಳೆಲ್ಲಾ ನಿಸ್ತೇಜ ಚಂದ್ರಪ್ರಕಾಶದಿಂದ ತುಂಬಿದ ವಾತವರಣದ ಪರದೆಯ ಮೇಲೆ ಒಂದರ ನಂತರ ಇನ್ನೊಂದು ಪ್ರದರ್ಶಿತವಾದಂತಾಯಿತು. ಅವಳು ನೋಡಿದಳು, ಅದನ್ನೇ ಮತ್ತೂ ನೋಡಿದಳು ಆ ಮೇಲೆ ದೀರ್ಘ ಶ್ವಾಸಬಿಟ್ಟು ಫಕ್ಕನೆ ದೃಷ್ಟಿತಿರುಗಿಸಿ ನಾಗಿಯನ್ನು ನೋಡಿದಳು. ನಾಗಿಯು ದುಃಖಿಸಿ ದುಃಖಿಸಿ ಅಳುತ್ತಾ ಕುಳಿತಿದ್ದಳು ಆ ಮೇಲೆ ಅದೇನೋ ಹೃದಯದ ದೊಡ್ಡ ವಿಪ್ಲವವನ್ನು ತಡೆಗಟ್ಟುವಂತೆ ಒಂದೊಪ್ಪ್ಮ ನಿಟ್ಟುಸಿರಿಟ್ಟಳು. ತೆರೆಯೇರಿ ಬೀಳುವಂತಾಯಿತು ಹೃದಯಪ್ರದೇಶ. "ಆಯಿತಮ್ಮಾ, ಇನ್ನು ನೀನು ಹೇಳಿದಂತೆಯೇ ಮಾಡುವೆನು" ಎಂದಳು. ಆಕ್ಷಣವೇ ಅಷ್ಟರವರೆಗೆ ಆರಿ . ಒಣಗಿಹೋಗಿದ್ದ ಅಶ್ರುಧಾರೆಯು ಒಂದೇ ಸವನೆ ಅವಳ ಕಂಗಳಿಂದ ಹರಿಯುತೊಡಗಿತು. ಅವಳು ಎಷ್ಟೊಂದು ತಡೆದುಕೊಂಡರೂ ಸಾಧ್ಯವಾಗದೆ ಬಿಕ್ಕಿ ಬಿಕ್ಕಿ ಅಳತೊಡಗಿದಳು, "ಅಳಬೇಡ ಮಗು ಅಳಬೇಡ. ಈ ಹೊಸ ಮದ್ದಿನಿಂದ ನಿನಗೆ ಜೀರ್ಣಶಕ್ತಿಯೆಲ್ಲಾ ಸರಿಯಾಗಿ ಸೌಖ್ಯವಾಗುವುದು" ಎಂದು ನಾಗಿಯು ಮೈದಡವಿ ಸಂತೈಸಿ ಆ ಮೇಲೆ ಬಹಳ ಮೃದುವಾಗಿ "ಮದ್ದು ಸ್ವಲ್ಪ ತರಲೇ?" ಎಂದಳು. "ಆಯ್ತು" ಎಂದಳು ಲಲಿತೆ ಬಹಳ ನಿಧಾನವಾಗಿ.

ಆಗ ನಾಗಿಯು ಅಡಿಗೆ ಕೋಣೆಗೆ ಹೋಗಿ ಕವಾಟೊಂದರ ಬೀಗ ತೆಗೆದು ಒಂದು ಗ್ಲಾಸಿನಲ್ಲಿ ಸುಮಾರು ಅರೆವಾಸಿಗಿಂತಲೂ ಹೆಚ್ಚು ಮದ್ದನ್ನು ಹಾಕಿತಂದು, "ಇದನ್ನು ಕುಡಿದರೆ ಎಲ್ಲ ಸೌಖ್ಯವಾಗುತ್ತದೆ ಮಂಗು ಸರಿ ನಿದ್ದೆಹಿಡಿದು ನಿನ್ನೀ ಚಿಂತೆಯೆಲ್ಲಾ ತೊಲಗಿ ಹೋಗುತ್ತದೆ. ಚೆನ್ನಾಗಿ ಜೀರ್ಣಶಕ್ತಿ ಬಂದು ದೇಹವು ಪುಷ್ಟಿಯಾಗುತ್ತದೆ. ಒಂದೇ ಸವನೆ ಕುಡಿದು ಬಿಡಬೇಕಂತೆ. ಸ್ವಲ್ಪ ಘಾಟಿರಬಹುದಂತೆ. ಡಾಕ್ಟರರು ಹೇಳಿರುವರು" ಎಂದಳು. ಗ್ಲಾಸುಹಿಡಿದ ನಾಗಿಯ ಕೈನಡುಗುತ್ತಿತ್ತು. ಅವಳು ಬಹಳವಾಗಿ ತಲ್ಲಣಗೊಂಡಿದ್ದಳು. ಲಲಿತೆಯು ಗ್ಲಾಸನ್ನು ನಾಗಿಯ ಕೈಯಿಂದ ತೆಗೆದುಕೊಂಡು ಅವಳು ಹೇಳಿದುದೆಲ್ಲಾ ಸತ್ಯವೆಂದು ನಂಬಿ ಒಂದೇ ಸವನೆ ಕುಡಿದುಬಿಟ್ಟಳು. ಕುಡಿದೊಡನೆಯೇ ಹೊಟ್ಟೆಯಲ್ಲಿ ಬೆಂಕಿಯೆದ್ದಂತಾಯಿತು ತಲೆ ತಿರುಗ ಹತ್ತಿತು, ಬಾಯಿಯೆಲ್ಲಾ ವಾಸನೆಯಿಂದ ತುಂಬಿತು. "ಅಮ್ಮಾ ನೀರು ಕೊಡು ನೀರು! ಎದೆಯೆಲ್ಲಾ ಸುಡುತ್ತಿದೆ!!" ಎಂದು ಕೂಗಿದಳು. ನಾಗಿಯು ಗಲಿಬಿಲಿಗೊಂಡು ಓಡಿ ಹೋಗಿ ಒಂದು ಲೋಟಿ ನೀರು ತಂದುಕೊಟ್ಟಳು. ಲಲಿತೆಯು ಒಂದೇ ಸವನೆ ಲೋಟಿಯ ನೀರನ್ನೆಲ್ಲಾ ಕುಡಿದಳು. "ಇನ್ನೊಂದು ಲೋಟಿ ತಾ. ಇನ್ನೂ ಇನ್ನೂ ಸುಡುತ್ತಿದೆ" ಎಂದು ಮೊರೆಯಿಟ್ಟಳು ಲಲಿತೆ. ನಾಗಿಯು ಮತ್ತೂ ಒಂದು ಲೋಟಿ ತಂದುಕೊಟ್ಟಳು ಲಲಿತೆಯ ಹೊಟ್ಟೆಯ ಉರಿಯು ಸ್ವಲ್ಪ ಶಾಂತವಾಯಿತು ಆದರೆ ತಲೆತಿರುಗಿ ಲೋಕವೇ ಮೇಲೆಕೆಳಗಾದಂತಾಯಿತು "ಶರಾಬು! ಶರಾಬು!! ಅಮ್ಮಾ ನನಗೆ ಶರಾಬು ಕೊಟ್ಟೆಯಾ?" ಎಂದು ಕೂಗಿ ಬೋಧತಪ್ಪಿ ಬಿದ್ದುಬಿಟ್ಟಳು.

ಅಧ್ಯಾಯ ೩

"ಅತಿಯಾಶೆಗೆ ಹೋಗಿ ಗಂಗೇಡು ಮಾಡಿಕೊಳ್ಳಬೇಡಮ್ಮಾ! ಸ್ವಾಮಿಃರಿಗೆ ನಿನ್ನ ಹಣಕೊಡಬೇಡ"

ಪರಿಸ್ಥಿತಿಯನ್ನು ಗೆದ್ದು ಅದರ ಮೇಲೆ ಸ್ವಾಮಿತ್ವವನ್ನು ಸ್ಥಾಪಿಸುವ ಪೌರುಷವುಳ್ಳ ಮಾನವರಾದರೂ ಎಷ್ಟು ಮಂದಿ! ಎಲ್ಲವರೂ, ತಾವು

ಹುಟ್ಟಿ ಬೆಳೆದ, ತಮ್ಮನ್ನು ಸುತ್ತುಮುತ್ತಲಿಂದಲೂ ಒತ್ತುತ್ತಿರುವ ವಿದ್ಯಮಾನಗಳ ಗುಲಾಮರು. ಪ್ರವಾಹದೊಂದಿಗೆ ಅನಾಯಾಸವಾಗಿ ತೇಲಿ ಸುಗಮವಾಗಿ ಜೀವನ ನಡಿಸುವ ಬದಲಿಗೆ ಅದಕ್ಕೆದೆಯೊಡ್ಡಿ ಅದರೆದುರಾಗಿ ತೇಲುವ ಪ್ರಯಾಸವಾದರೂ ಯಾರಿಗೆ ಬೇಕಾಗಿದೆ? ಆದುದರಿಂದ ಸರ್ವಸಾಮಾನ್ಯವಾಗಿ ಜನರು ತಮ್ಮ ಪೌರುಷವನ್ನು ಕಳಕೊಂಡಾದರೂ, ಎಂತಹ ಅಧೋಗತಿಗೀಡಾದರೂ ಪರಿಸ್ಥಿತಿಯ ಕೈಗೂಸಾಗಿ ಹೋಗುವರು. ಲೋಕ ರೂಢಿಯೇ ಹೀಗಿರುವಾಗ ಲಲಿತೆಯಂತಹ ಬಾಲಿಕೆಯಾದರೂ ಏನು ಮಾಡಿಯಾಳು! ಸುಮಿತ್ರಾಬಾಯಿಯ ನೀತಿಬೋಧೆಯ ಆಶ್ರಯವಿಲ್ಲದ ಅವಳ ಜೀವನವು ಚುಕ್ಕಾಣಿಯಿಲ್ಲದ ದೋಣಿಯಂತಾಯಿತು. ಏನುಮಾಡಿದರೂ ತಾನಿನ್ನು ಪತಿತೆ; ಸಮಾಜವು ತನ್ನ ಬೆನ್ನಿಗೆ ಆ ಕಳಂಕದ ಬರೆ ಹಾಕಿಬಿಟ್ಟಿರುವುದೆಂಬ ಚಿಂತಾಕೀಟವು ಅವಳ ಮನಸ್ಸನ್ನು ಕೊರೆ ಕೊರೆದು ದುರ್ಬಲಗೊಳಿಸಿತು ವಿಶೇಷವಾಗಿ ತಾಯಿಯು, ಒಬ್ಬಳೇ ಮಗಳಾದ ತನ್ನನ್ನು ಪ್ರಾಣಕ್ಕಿಂತಲೂ ಹೆಚ್ಚೆಂದು ಬಗೆದು ಲಾಲಿಸಿ ಪಾಲಿಸಿ, ತನಗಾಗಿ ಎಂತಹ ಕಷ್ಟವೂ ಹೆಚ್ಚಿನದಲ್ಲೆಂದು ಭಾವಿಸಿಕೊಂಡಿರುವ ಆ ಪ್ರಿಯ ಮಾತೆಯು ಪ್ರತಿದಿನವೂ, ಕ್ಷಣಕ್ಷಣವೂ ತನ್ನನ್ನು ಕಂಡು ಕಣ್ಣೀರಿಡುತ್ತಾ ಕೊರಗಿ ಕರಗುತ್ತಿರುವಾಗ ಅವಳನ್ನು ನಿರಾಶೆಪಡಿಸಿ ಅವಳ ಜೀವನವನ್ನು ಈ ಅಪರ ವಯಸ್ಸಿನಲ್ಲಿ ದುಃಖಮಯವಾಗಿ ಮಾಡಲು ಯಾವ ಮಗಳ ಮನಸ್ಸಾದರೂ ಒಪ್ಪೀತೆ? ಅದು ಹೊರತು ಲಲಿತೆಯ ಮುಂದಿನ ಗತಿಯಾದರೂ ಏನು? ಅವಳ ಜೀವನದ ಕೈದೀವಿಗೆಯಾಗಿದ್ದ ಸುಮಿತ್ರಾಬಾಯಿಯನ್ನವಳು ಪುನಃ ಆಶ್ರೈಸಲೀ? "ಛೆ! ಛೆ! ಈ ಕಳಂಕಿನಿಗಿನ್ನಾವಗತಿಯನ್ನವರು ತೋರಿಸುವುದು? ಅವರ ಮುಖವನ್ನಾದರೂ ಹೇಗೆ ನೋಡುವುದು?" ಎಂದು ಲಲಿತೆಯ ಮನಸ್ಸು ಹಿಂದೆಗೆಯುತ್ತಿತ್ತು.

ದಿನಹೋದಂತೆ ಲಲಿತೆಯ ಹಿಂದಿನ ಸ್ಮರಣೆಯು ಮಾಸಿಹೋಗಹತ್ತಿತು. ಶರಾಬು ಅವಳ ಶರೀರದ ಮೇಲೆ ಯಾವ 'ಟೋನಿಕೂ' ಮಾಡದ ಸತ್ಪರಿಣಾಮ ಮಾಡಿದಂತೆಯೇ ಮನಸ್ಸಿನ ಮೇಲೆ ದುಷ್ಪರಿ

ಣಾನು ಮಾಡಿತು. ನಾಗಿಗೀಗ ಸಂತೋಷವೇ ಸಂತೋಷ. ತನ್ನ ಮಗಳು ಸುಖ ವೈಭವದಲ್ಲಿ ಮೆರೆಯುವುದನ್ನು ಕಂಡು ಆನಂದಿಸುವ ಅವಳ ಅನುದಿನದ ಕಲ್ಪನೆಯು ಸ್ವರ್ಗವು ಇಂದೀಗ ಬಾಗಿಲಿಗೆ ಬಂದಿರುವುದೆಂದೇ ಭಾವಿಸಿ ಅವಳು ಉಬ್ಬಿ ನಲಿಯುತ್ತಿದ್ದಳು. ತನ್ನ ಜನ್ಮವಿನ್ನು ಸಾರ್ಥಕವಾಯಿತೆಂದು ಅವಳೆನಿಸಿಕೊಂಡಿದ್ದಳು. ಬಹಳ ಲಾವಣ್ಯವತಿಯಾಗಿಯೂ ಪುಷ್ಟಿಯಾಗಿಯೂ ಬೆಳೆದ ಲಲಿತೆಗೆ ಶಿವಾನಂದರು ಸಂಪೂರ್ಣವಾಗಿ ಒಲಿದುಹೋಗಿದ್ದರು ಅವಳಿಗೆ ಬೇಕು ಬೇಕಾದ ಚಿನ್ನಾಭರಣಗಳನ್ನೆಲ್ಲಾ ಮಾಡಿಸಿ ಹಾಕಿದ್ದರು ಇದಕ್ಕೆಲ್ಲಾ ನಾಗಿಯೇ ಕಾರಣ. ಈಗ ತನ್ನ ಮಾತಿನಂತೆ ಕೇಳುವ ಲಲಿತೆಯ ಶರೀರವನ್ನವಳು ಶಿವಾನಂದರಿಗೆ ವಿಕ್ರಯಿಸಿ ಆಗಾಗ ಅದಕ್ಕೆ ತಕ್ಕ ಬೆಲೆಪಡೆಯುತ್ತಿದ್ದಳು. ಶಿವಾನಂದರಿಗೆ ಲಲಿತೆಯೆಂದರೆ ಪ್ರಾಣ. ಒಂದು ರಾತ್ರೆಯಾದರೂ ಅವರಿಗೆ ಅವಳನ್ನು ಬಿಟ್ಟಿರಲು ಸಾಧ್ಯವೇ ಆಗುತ್ತಿದ್ದಿಲ್ಲ ಅವರೆಲ್ಲಿಯಾದರೂ ಊರುಬಿಟ್ಟು ಸಂಚಾರಕ್ಕೆ ಹೋದರೆಂದರೆ ರಾತ್ರಿ ಮೋಟರ್‌ಕಾರಿನಲ್ಲಿ ಲಲಿತೆಯು ಅವರ 'ಕ್ಯಾಂಪಿಗೆ' ಗುಪ್ತವಾಗಿ ಒಯ್ಯಲ್ಪಡಲೇಬೇಕು. ಶಿವಪುರ ಮಠದಲ್ಲಂತೂ ಕೆಲವು ವೇಳೆ ರಾತ್ರಿ ಹಗಲು ಶಿವಾನಂದ ಲಲಿತೆಯರ ಭೋಗವಿಲಾಸ ನಡೆಯುತ್ತಿತ್ತು. ಸ್ವಾಮಿಗಳು ಲಲಿತೆಯನ್ನು ಎರಡು ಮೂರು ದಿವಸ ಮನೆಗೆ ಕಳುಹಿಸದೆ ಮಠದಲ್ಲಿಯೇ ಇರಿಸಿಕೊಳ್ಳುವುದೂ ಇತ್ತು. ಆಗ ನಾಗಿಯೂ ಮನೆಗೆ ಬಾಗಿಲುಹಾಕಿ ಬಂದು ಮಗಳೊಂದಿಗೆ ಮಠದಲ್ಲಿಯೇ ಇದ್ದುಬಿಡುತಿದ್ದಳು. ಮಠದಲ್ಲಿದ್ದ ಹಲವರಿಗದು ಅಸಹನೀಯವಾಗುತ್ತಿತ್ತು. ಆದರೆ ಮಾಡುವುದೇನು? "ಶಿವಶಿವ! ಏನನಾಚಾರ ಇದು!" ಎಂದು ಗುಪ್ತವಾಗಿ ಕೆಲಮಂದಿ ಮುದುಕಿಯರು ಉದ್ಗಾರವೆತ್ತಿ ಸುಮ್ಮನಾಗುತ್ತಿದ್ದರಷ್ಟೆ ಶಿವಾನಂದರ ಭೋಗ ವಿಲಾಸವು ಮಠದೊಳಗೇನೇ ಅಪ್ರತಿಹತವಾಗಿ ನಡೆಯುತ್ತಿತ್ತು. ಶಿವಪೂಜೆಗೆ ಕೂಡ ಮಠದ ಪಾರುಪತ್ಯಗಾರರು ನರಸಿಂಹನ ಮುಖಾಂತರ ಮೂರು ಮೂರು ಸಲ ನೆನೆಪುಮಾಡಿಸಿ ಅವರನ್ನು ಬರುವಂತೆ ಮಾಡಬೇಕಾಗಿದ್ದಿತು ಶಿವಾನಂದರು ಕ್ಷಣಮಾತ್ರದಲ್ಲಿ ಪೂಜೆ ಮುಗಿಸಿ ಹೋಗಿಬಿಡುತ್ತಿದ್ದರು. ಒಂದಿ

ಷ್ಟೇನಾದರೂ ವಿಳಂಬವಾದರೆ ಉರಿದುಬೀಳುತ್ತಿದ್ದರು. ಪೂಜಾ ಸಾಹಿತ್ಯವನ್ನೊದಗಿಸಿ ಕೊಡುವ ಭಟ್ಟನಿಗೆ ಸಿಟ್ಟಿನ ಭರದಿಂದ ಹೊಡೆದುದೂ ಇದೆ.

ಶಿವಪುರದ ಪ್ರತಿಷ್ಠಿತ ಸಮಾಜವು ಶಿವಾನಂದರ ಭೋಗವಿಲಾಸದ ಕತೆಗಳನ್ನೆಲ್ಲಾ ರುಚಿಕರವಾಗಿ ಸವಿಸವಿದು ಜಡವಾಗಿ ಬಿದ್ದಿತಾದರೂ, ಹೆಚ್ಚೆಂದರೆ, "ಛೆ! ಛೆ!! ಮಠದೊಳಗೆನೇ ತಂದಿಟ್ಟುಕೊಂಡಿರುವರೇ? ಇನ್ನೇನೂ ಮಾಡಿಯಾರು ಅವರು!" ಎಂದಿಷ್ಟೇ ಛೀಕರಿಸಿ ತಣ್ಣಗಿದ್ದಿತಾದರೂ, ಕಾಕ ಪೋಕ ಕೂಟವು ಶಿವಾನಂದರನ್ನೇನೂ ಹಾಗೆಯೇ ಬಿಡಲಿಲ್ಲ. ಅದು ಶಿವಾನಂದರು ನೋಡ ಸಿಕ್ಕಿದಲ್ಲೆಲ್ಲಾ "ಲಲಿತೆ! ಲಲಿತೆ!!' ಯೆಂದು ಕೂಗಿಡುತಿತ್ತು. ಮಠ ಮತ್ತು ಶಿವಗುಡಿಯ ಗೋಡೆಗಳಲ್ಲೆಲ್ಲಾ ದೊಡ್ಡ ದೊಡ್ಡ ಕಪ್ಪು ಅಕ್ಷರಗಳಲ್ಲಿ 'ಶಿವಾನಂದ ಲಲಿತಾ ವಿಲಾಸ' ಎಂದು ಬರೆದಿಟ್ಟಿತು. ಎಲ್ಲಿಯಾದರೂ ಲಲಿತೆಯು ಸಿಕ್ಕಿದಳೆಂದರೆ ಅವಳ ಬೆನ್ನುಹತ್ತಿ, "ಶಿವಾನಂದ! ಶಿವಾನಂದ!!" ಎಂದು ಕೂಗಿಟ್ಟು ಕಾಡುತ್ತಿತ್ತು. ಇದರಿಂದಾಗಿ ಲಲಿತೆಗೆ ಸರಾಗವಾಗಿ ಹೊರಗೆ ಮುಖವೆತ್ತಿ ಹೋಗಲೂ ಇದ್ದಿಲ್ಲ. ಎಲ್ಲಿಯಾದರೂ ಅಪರೂಪವಾಗಿ ಶಿವಗುಡಿಗೆ ಹೋದಳೆಂದರೆ ಅಲ್ಲಿಯೂ ಅವಳಿಗೆ ಈ ತಲೆಹೋಕ ತರುಣರ ಕಾಟ ತಪ್ಪುತ್ತಿದ್ದಿಲ್ಲ.

ಇದೀಗ ತನ್ನ ಮನೋರಥವನ್ನು ಸಂಪೂರ್ಣವಾಗಿ ನೆರವೇರಿಸಿಕೊಳ್ಳುವ ಸಂದರ್ಭವೆಂದು ನಾಗಿಯು ಲಲಿತೆಯೊಡನೆ, ಇವತ್ತು ಸ್ವಾಮಿರೊಡನೆ ಆ ಚಿನ್ನವಾಗಬೇಕೆಂದು ಹೇಳು, ಈ ವಸ್ತ್ರ ತೆಗೆದುಕೊಡಹೇಳು ಒಂದು ಒಳ್ಳೇ ಮನೆ ಕಟ್ಟಿಸಿಕೊಡಲು ಒತ್ತಾಯುಮಾಡು ಎಂದೆಲ್ಲಾ ಪರಿಪರಿ ಹೇಳಿಕೊಟ್ಟರೂ ಲಲಿತೆಯು ಒಂದನ್ನೂ ಕೇಳದೆ ಶರಾಬು ಕುಡಿದು ತನ್ನ ದೇಹವನ್ನಷ್ಟೆ ಶಿವಾನಂದರ ಭೋಗಕ್ಕಾಗಿ ಒಪ್ಪಿಸಿ ಸುಮ್ಮನಿರುತ್ತಿದ್ದಳು. ನಾಗಿಯು ಬಹಳ ಒತ್ತಾಯುಮಾಡಿದರೆ, "ಅದೆಲ್ಲಾ ನನ್ನಿಂದಾಗದು ನೀನು ಬೇಕಾದರೆ ಕೇಳು" ಎಂದು ಬಿರುನುಡಿಯುತ್ತಿದ್ದಳು. ನಾಗಿಯು ಒಂದೊನ್ಮೆ ನಿರಾಶೆಗೊಂಡರೂ ಅಷ್ಟರಲ್ಲೇ ಬಿಡದೆ ತಾನೇ ಸ್ವತಃ ಆಗಾಗ ಸ್ವಾಮಿರ ಬಳಿಗೆ ಹೋಗಿ ಮೊದಲು

ಮಾತುಕೊಟ್ಟುದನ್ನು ನೆನಪು ಮಾಡುತ್ತಿದ್ದಳು "ಲಲಿತೆಗೊಂದ ಒಳ್ಳೇ ಮನೆ ಕಟ್ಟಿಸಿ ಹಾಕಬೇಕು ಪರಾಕೆ. ಜೀವನಕೆ ಬೇಕಷ್ಟು ಆಸ್ತಿಯನ್ನೂ ಮಾಡಿಕೊಡಬೇಕು ಅವಳಿಗೆ ಅದನ್ನೆಲ್ಲಾ ನಿಮ್ಮೊಡನೆ ಹೇಳಲು ನಾಚಿಕೆಯಾಗುತ್ತದಂತೆ." ಎಂದು ಕಾಡ ತ್ತಿದ್ದಳು. ಶಿವಾನಂದರು, "ಆಯ್ತು ಎಲ್ಲಾ ಮಾಡುವ. ಈಗ ಅವಸ ವೇನು? ಒಳ್ಳೇ ಆಸ್ತಿಯೊಂದನ್ನು ಹುಡುಕುತ್ತಿದ್ದೇನೆ. ಅದರಲ್ಲೆ ಮನೆಕಟ್ಟಿಸಿದರೆ ಒಳ್ಳೇದಲ್ಲವೇ" ಎಂಬ ಸವಿ ಮಾತುಗಳಿಂದ ನಾಗಿಯನ್ನು ಸಮಾಧಾನಪಡಿಸುತ್ತಿದ್ದರು.

ಶಿವಾನಂದರು ಯಾರ ತಲೆ ಬಡಿದಾದರೂ, ಯಾವ ಸಂಚ ವಂಚನೆ ಮಾಡಿಯಾದರೂ ತನ್ನ ವೆಚ್ಚಕ್ಕೆ ಬೇಕಷ್ಟು ಹಣ ಸಂಪಾದನ ಮಾಡಿಕೊಳ್ಳುತ್ತಿದ್ದರು. ಅದರಿಂದಾಗಿಯೇ ಸಮಾಜವು "ಬುದ್ಧಿವಂತ ಕಾರುಬಾರಿ" ಎಂಬ ಬಿರುದುಗಳ ಸನದನ್ನು ಅವರ ಕುತ್ತಿಗೆಗೆ ತೂ ಹಾಕಲು ಕಾರಣ. ಆದರೆ ಸ್ವಲ್ಪ ಸಮಯ ಎಲ್ಲವರನ್ನೂ ವಂಚಿ ಬಹುದು ಕೆಲವರನ್ನು ಎಲ್ಲಾ ಸಮಯ ವಂಚಿಸಬಹುದು ಎಲ್ಲ ರನ್ನೂ ಯಾವಾಗಲೂ ವಂಚಿಸಲು ಸಾಧ್ಯವೇ ಇಲ್ಲ ಶಿವಾನಂದರ ತನ್ನ ಸ್ಥಾನಮಾನದ ಬಲದಿಂದ ಕೆಲಸಮಯ ಹಲವರನ್ನು ತನ್ನ ಬಲೆಯೊಳಗೆ ಹಾಕಿ, ಮಂಕುಬೂದಿ ಬಳಿದು ಹಣ ಸಂಪಾದಿಸುತ್ತಿದ್ದರು ಅವರಿವರಿಂದ ನಾಳೆ ನಾಡದು ಕೊಡುತ್ತೇನೆಂದು ಕೈಕಡವಾಗಿಯೇ ಹಲವು ಸಹಸ್ರ ರೂಪಾಯಿ ಪಡೆದರು ಆಮೇಲೆ ಕೈಕಡ ಸಿಗಲಿಲ್ಲ ಮಠದ ಚಿನ್ನಾಭರಣಗಳು ಒಂದೊಂದಾಗಿ ಬೇಂಕಿಗೆ ಹೋದುವು ದೇವರ ಮೇಲಿನ ತಮ್ಮ ಭಕ್ತಿಯ ಸಂಕೇತವಾಗಿ, ತಮ್ಮ ತ್ಯಾಗ ಬುದ್ಧಿಯ ಹೆಗ್ಗುರುತಾಗಿ, ಮಠವು ಧರ್ಮಪ್ರಚಾರ ಸಮಾಜೋಪಕಾ ಸಂಸ್ಥೆಯೆಂಬ ವಿಶ್ವಾಸದಿಂದ ಭಜಕ ಜನರಿತ್ತಿದ್ದ ಉಂಬಳಿಯಾದ ಹೇರಳ ಆಸ್ತಿಯ ಉತ್ಪತ್ತಿಯು ದುರ್ವ್ಯಯವಾಗುವುದಂತಿರಲಿ; ಭಕ್ತ ಜನರ ದೇವಮೂರ್ತಿಯ ಮೇಲಿನ ತಮ್ಮ ನಿತಾಂತ ಭಕ್ತಿಯ ಬಾಹ್ಯ ಸ್ವರೂಪ ವಾಗಿ ಕಷ್ಟಾರ್ಜಿತ ದ್ರವ್ಯದಿಂದ ತಯಾರಿಸಿ ಸಮರ್ಪಿಸಿದ ಚಿನ್ನಾಭರಣ ಗಳೆಲ್ಲಾ ಬೇಂಕಿನ ತಿಜೋರಿಯೊಳಗೆ ಸೇರಿದುವು. ಅವಶ್ಯಕತೆಯು

ಯಾವ ವಿಧಿ ನಿಯಮವನ್ನಾದರೂ ಗಣಿಸುವುದೇ? ಶಿವಾನಂದರ ಭೋಗವಿಲಾಸವು ಹೆಚ್ಚಿದಂತೆ ವೆಚ್ಚವೂ ದಿನೇ ದಿನೇ ಬೆಳೆಯಿತು. ಹಣದ ಅಡಚಣೆಯು ಅವರ ಜೀವನವನ್ನೇ ತಿನ್ನಹತ್ತಿತು. ಒಮ್ಮೊಮ್ಮೆ ಅವರಿಗೆ ಐದು ಹತ್ತು ರೂಪಾಯಿಗಳ ಅಡಚಣೆಯೂ ಆಗಿ ಏನುಮಾಡು ವುದೆಂದು ತೋಚದೆ ತಳಮಳಿಸುತ್ತಿದ್ದರು.

ನಾಗಿಯು ಬಹಳ ಸೂಕ್ಷ್ಮದವಳು. ಜೀವನದಲ್ಲೊಂದು ಕ್ರಮ ವಿದ್ದವಳು. ಎಂದಿಗೂ ಕ್ರಮತಪ್ಪಿ ಹೋಗುತ್ತಿದ್ದೇ ಇಲ್ಲ ಪ್ರಾಯದ ಕಾಲದಲ್ಲಿ ಸಿಕ್ಕಾಬಟ್ಟೆಯಾಗಿ ಶರೀರವನ್ನು ವಿಕ್ರಯಿಸಿ ತುಚ್ಛ ಸುಖೋಪ ಭೋಗದಲ್ಲಿ ಮುಳುಗಿ ದ್ವಿಪಾದ ಪಶುವಿನಂತೆ ವರ್ತಿಸಲಿಲ್ಲ. ಪ್ರತಿಷ್ಠೆ ತರೆಸಿಸುವ ಕೆಲವೇ ಮಂದಿಯನ್ನು ಮಾತ್ರ ನಂಬಿಕೊಂಡಿದ್ದಳು. ಮತ್ತು ಅವರಿಗೆ ಬೇಕಾದ ರುಚಿಕರವಾದ ತಿಂಡಿತಿನಸನ್ನೋ ಊಟ ಉಪಚಾರ ವನ್ನೋ ಮಾಡಿಹಾಕಿ ಒಲಿಸಿಕೊಳ್ಳುತ್ತಿದ್ದಳು ಒಂದೇ ಮಾತಿನಲ್ಲಿ ಹೇಳುವುದಾದರೆ ನಾಗಿಯು ಮರ್ಯಾದೆಯ ಸೂಳೆಯಾಗಿದ್ದಳು. ಪ್ರಾಯ ಮೀರಿದ ಮೇಲೂ ತನ್ನ ಹಿಂದಿನ ಸ್ನೇಹಿತರಿಗೆ ಊಟಹಾಕುವು ದನ್ನು ನಿಲ್ಲಿಸಲಿಲ್ಲ ನಾಗಿಯ ಊಟದ ಸವಿಗಂಡ ಈ ಸದ್ಗೃಹಸ್ಥರು ಪೇಟೆಗೆ ಬಂದಾಗ ಊಟಕ್ಕೆ ಬೇರೆ ಎಲ್ಲಿಯೂ ಹೋಗುತ್ತಿದ್ದಿಲ್ಲ. ನಾಗಿಯೂ ತಾನು ಉತ್ತಮ ಜಾತಿಯವಳೆಂದು ಹೇಳಿಕೊಳ್ಳುತ್ತಿದ್ದಳು. ಅವಳು ಯಾವ ಜಾತಿಯವಳಾದರೂ ಸವಿ ತಿಂಡಿತಿನಿಸುಗಳಿಗೆ ಮರುಳಾ ಗದವರೇ ಅಪರೂಪವಲ್ಲವೆ? ನಾಲಿಗೆ ಸವಿಯಿಂದ ಮನಸ್ಸು ಅದೆಷ್ಟು ಬೇಗ ಸೂರೆಯಾಗಿ ಬಿಡುವುದು! ಹೀಗೆ ನಾಗಿಯ ಮನೆಗೆ ಆಗಾಗ ಊಟಕ್ಕೆ ಬರುತ್ತಿದ್ದ ಸದ್ಗೃಹಸ್ಥರು ಅವಳಿಗೇನಾದರೂ ಪ್ರತಿಫಲ ಕೊಟ್ಟು ಹೋಗುತ್ತಿದ್ದರು ಅದವಳ ಊಟಕ್ಕೆ ಬೆಲೆಯಲ್ಲ, ಅವಳ ಮೆಹನತ್ತಿಗೆ ಪ್ರತಿಫಲ. ಹಿಂದೆ ನಾಗಿಯ ಸವಿ ತಿನಸುಗಳನ್ನು ತಿಂದು ಅವಳೊಡನೆ ಸುಖಿಸಿದ ಕೆಲವರು ನಾಗಿಗೆ ತಮ್ಮ ತಮ್ಮ ಶಕ್ತ್ಯಾನುಸಾರ ಈಗಲೂ ಸಹಾಯಮಾಡುತ್ತಿದ್ದರು. ಹೀಗೆ ನಾಗಿಯು ಕೆಲವೇ ಜನರ ಮನಸ್ಸನ್ನೊಲಿಸಿಕೊಂಡು ಅವರು ಆತ್ಮಸಂತೋಷದಿಂದಲೇ ಕೊಡುವ ಹಣವನ್ನೆಲ್ಲಾ ಸ್ವಲ್ಪಸ್ವಲ್ಪವಾಗಿ ಉಳಿಸಿ ನಾಲ್ಕೈದು ಸಾವಿರ ರೂಪಾಯಿ

ಗಳನ್ನು ಬೇಂಕಿನಲ್ಲಿಟ್ಟಿದ್ದಳು. ಅದರ ಬಡ್ಡಿ ಕೂಡಾ ತೆಗೆದುಕೊಳ್ಳದೆ ಬೇಂಕಿನಲ್ಲಿದ್ದು ಹಾಗೆಯೇ ಬೆಳೆಯುತ್ತಿತ್ತು. ಇದು ಶಿವಾನಂದರಿಗೆ ತಿಳಿದಿತ್ತು. ಅಡಚಣೆಯ ಸಮಯದಲ್ಲಿ ಮನಸ್ಸು ಅದನ್ನು ನಿವಾರಿಸುವುದಕ್ಕಾಗಿ ಎಂತೆಂತಹ ತಂತ್ರಗಳನ್ನೆಲ್ಲಾ ಮಾಡುವುದೆಂದು ಹೇಳ ಬರುವುದಿಲ್ಲ. ಶಿವಾನಂದರು ಒಂದು ದಿನ ತನ್ನ ಬೈಠಕು ಖಾನೆಯಲ್ಲಿ ಗರ್ಜಿಯ ಸರಳಮಂಚದ ಮೇಲೆ ಪವಡಿಸಿ ಚಡಪಡಿಸುತ್ತಿದ್ದವರು ಜಗ್ಗನೆದ್ದು ನರಸಿಂಹನನ್ನು ಕರೆದು ಕೂಡಲೆ, ಕಾರು ಕೊಂಡು ಹೋಗಿ ನಾಗಿಯನ್ನು ಕರತರ ಹೇಳಿದರು. ಅವನು ಕೂಡಲೆ ಹೋಗಿ ಅವಳನ್ನು ಕರತಂದನು.

“ನಾಗಿ, ನೀನು ಯಾವಾಗಲೂ ‘ಆಸ್ತಿ, ಮನೆ’ ಎಂದು ಕಾಡುತ್ತಾ ಇರುವೆಯಲ್ಲ, ಅದಕ್ಕಾಗಿ ಈಗ ಒಳ್ಳೇ ಆಸ್ತಿಯೊಂದನ್ನು ತೆಗೆದುಕೊಂಡು ಅದರಲ್ಲೊಂದು ಭವ್ಯ ಮನೆ ಕಟ್ಟಿಸುವ ನಿರ್ಧಾರಮಾಡಿದ್ದೇನೆ. ಶಿವಪುರದಿಂದ 5 ಮೈಲು ದೂರದಲ್ಲಿದೆ ಅದು. ಬಹಳ ಒಳ್ಳೇ ಆಸ್ತಿ. ಬಹಳ ಅನುಕೂಲ. ಬಹಳ ಸಲೀಸಾಗಿಯೂ ಸಿಗುತ್ತದೆ. ಮತಕ್ಕಾದರೆ ಒಂದೆರಡು ಸಾವಿರ ಬಿಟ್ಟುಕೊಡಲಿಕ್ಕೂ ಆ ಆಸ್ತಿಯ ಮ್ಹಾಲಿಕ ಒಪ್ಪಿದ್ದಾನೆ. ಅವನೊಬ್ಬ ಬ್ರಾಹ್ಮಣ. ನಮ್ಮ ಪಾರುಪತ್ಯಗಾರರಿಗೂ ಅವನಿಗೂ ದೂರದ ಸಂಬಂಧವಿದೆ. ಅವನಿಗೀಗ ಜರೂರೊಂದು ಗರ್ಜಿಯಿದೆ ನಾಳೆಯೇ ಬೇಂಕಿಗೆ ಕಟ್ಟಲು ರೂ. 5000 ಬೇಕಂತೆ ಆಸ್ತಿಗೆ ಕಣ್ಣುಮುಚ್ಚಿ ರೂ 12,000 ಕೊಡಬೇಕು. ನಮಗೆ ಮತ್ತೂ ಕಡಿಮೆ ಮಾಡಿ ರೂ. 10,000ಕ್ಕೆ ಕೊಡುವೆನೆಂದು ಹೇಳಿದ್ದಾನೆ ಮನುಷ್ಯ ಒಳ್ಳೆಯವ. ಸಾಧುಪ್ರಾಣಿ. ನಮ್ಮ ಹತ್ತಿರ ಈಗ ನಾಳೆಗೇನೇ ಹಣ ಒದಗಿಸಲು ಸಾಧ್ಯವಿಲ್ಲ. ಒಂದು ವಾರದ ಮೇಲೆ ನಮಗೊಂದು ರೂ 10,000 ಬರುವುದಿದೆ. ಒಂದು ಆಸ್ತಿ ಅಡವಿನ ಮೇಲೆ ಹಾಕಿದುದು. ಆ ಆಸಾಮಿ ಬೊಂಬಾಯಿಯಲ್ಲಿ ಹೊಟೇಲಿಟ್ಟು ದುಡ್ಡು ಮಾಡಿದೆ. ಅಡವಿನ ಹಣ ಕಟ್ಟುತ್ತದಂತೆ. ಆದರೆ ಒಂದು ಹಪ್ತೆಯ ವರೆಗೆ ಆ ಬ್ರಾಹ್ಮಣನಿಗೆ ಕಾಯಲು ಸಾಧ್ಯವಿಲ್ಲ ಅವನಿಗೀಗ ರೂ. 5000 ನಾಳೆ ಆಗದೆ ನಿರ್ವಾಹವಿಲ್ಲವಂತೆ. ಏನು ಮಾಡುವುದೆಂದು

ನಿನ್ನೊಡನೆ ವಿಚಾರಿಸಲು ನಿನ್ನನ್ನೀಗ ಕರೆಸಿದುದು" ಎಂದರು ಶಿವಾ ನಂದರು ನಾಗಿಯೊಡನೆ ಬಹಳ ಉತ್ಸಾಹಪರ ಮುಖಮುದ್ರೆಯಿಂದ. "ನಾನೇನು ಮಾಡುವುದು ಬುದ್ಧಿ? ನನ್ನ ಹತ್ತಿರ ಹಣವಿದೆಯೋ?" ಎಂದಳು ನಾಗಿ ಮಂದಹಾಸದಿಂದ. "ಅದೆಲ್ಲಾ ಕಣ್ಣುಕಟ್ಟು ಬೇಡ. ಬೇಂಕಿನಲ್ಲಿ ನಿನ್ನದು ಐದಾರು ಸಾವಿರ ರೂಪಾಯಿ ಇದೆಯಂತೆ. ಅದ ರಲ್ಲೀಗ ಒಂದು 4000 ರೂಪಾಯಿ ತೆಗೆದುಕೊಡು ಬಾಕಿ ಒಂದು ಸಾವಿರ ನಾವು ಹೇಗಾದರೂ ಮಾಡಿ ಹಾಕುತ್ತೇವೆ. ಒಂದು ಹಪ್ತೆಯ ಮೇಲೆ ನಿನ್ನ ಹಣ ನಿನಗೆ ಹಿಂದೆ ಕೊಡುವ" ಎಂದರು ಸ್ವಾಮಿರು. ಮುಗುಳ್ನಗೆ ಬೀರುತ್ತ ಬೀರುತ್ತ. ತನ್ನ ಮಗಳಿಗೊಂದು ಆಸ್ತಿ ಮತ್ತು ಮನೆಯಾಗಬೇಕೆಂಬ ಹುಚ್ಚೇ ಹಿಡಿದ ನಾಗಿಯ ಆನಂದಕ್ಕೀಗ ಪಾರವೇ ಇಲ್ಲದಾಯಿತು. ಆ ಆನಂದೋತ್ಸಾಹದ ಪ್ರವಾಹದಲ್ಲಿ ಅವಳ ವಿಚಾರ ವಿವೇಕವೆಲ್ಲವೂ ಕೊಚ್ಚಿಹೋಯಿತು. ಅವಳು ಒಡನೆಯೇ, "ಆಯ್ತು ಪರಾಕೆ, ಈಗಿನ ಮಟ್ಟಿಗೆ ಹೇಗಾದರೂ ಮಾಡಿ ರೂ. ನಾಲ್ಕು ಸಾವಿರ ನಾನು ಕೊಡುತ್ತೇನೆ. ಒಂದು ಹಪ್ತೆಯ ನಂತರ ಮಾತ್ರ ಹಿಂದೆ ಕೊಡಬೇಕು. ತಪ್ಪಬಾರದು. ಆಸ್ತಿ ಮಾತ್ರವಲ್ಲ ಒಳ್ಳೆ ಮನೆ ಯೊಂದನ್ನೂ ಬೇಗನೆ ಕಟ್ಟಿಸಬೇಕು. ನಿಮಗೂ ಅದು ಅನುಕೂಲ ಪರಾಕೆ ಬಂದು ಹೋಗಲಿಕ್ಕೆ. ಈಗ ನಿಮಗೂ ತೊಂದರೆ ನಮಗೂ ತೊಂದರೆ ಈ ಊರೇ ಬಿಟ್ಟು ದೂರವಿದ್ದು ಬಿಟ್ಟರೆ ಬಹಳ ಒಳ್ಳೇದು ಬುದ್ಧಿ" ಎಂದಳು ಶಿವಾನಂದರು ಇಷ್ಟು ಸುಲಭವಾಗಿ ತನ್ನ ಕೆಲಸ ವಾಗುವುದೆಂದು ಎಣಿಸಿದ್ದಿಲ್ಲ. ಅವರಿಗೆ ಹೊಸ ಪ್ರಾಣವೇ ಬಂದಂತಾ ಯಿತು. ಅವರು "ನಿನಗೆ ಯಾವ ಸಂದೇಹವೂ ಬೇಡ. ನನ್ನ ಲಲಿತೆಯು ಸುಖವಾಗಿರುವಂತೆ ನೋಡುವುದು ನನ್ನ ಕರ್ತವ್ಯವಲ್ಲವೇ? ಸದಾ ಅದೇ ಯೋಚನೆಯಲ್ಲಿರುವ ನನಗೆ ನೀನು ಆ ವಿಷಯದಲ್ಲಿ ಹೇಳ ಬೇಕೇ? ನನಗೀಗ ಪೂಜೆಗೆ ಹೊತ್ತಾಯಿತು ನೀನು ಹೋಗಿ ಇಂದೇ ಹಣತೆಗೆದು ರಾತ್ರಿ ತಂದು ಕೊಡು" ಎಂದರು. "ಆಯ್ತು ಬುದ್ಧಿ ಆಯ್ತು" ಎಂದು ನಾಗಿಯು ಹೊರಟು ಹೋದಳು. ನರಸಿಂಹನು ಅವಳನ್ನು ಕಾರಿನಲ್ಲೇ ಅವಳ ಮನೆಗೊಯ್ದು ಬಿಟ್ಟನು. ಈಗ ಎಲ್ಲವೂ

ಬಹಿರಂಗವಾಗಿಯೇ ನಡೆಯುತ್ತಿತ್ತು. ನಾಗಿ ಲಲಿತೆಯರು ಶಿವಾನಂದರ ಪರಿವಾರಕ್ಕೆ ಸೇರಿಹೋಗಿದ್ದರು.

ಮನೆಗೆ ಹೋದೊಡನೆಯೇ ನಾಗಿಗೆ ಮತ್ತಷ್ಟು ಆನಂದವಾಯಿತು. ಆನಂದದುಬ್ಬಿನಲ್ಲಿ ಅವಳ ಶರೀರವು ವಿಶೇಷ ಗಾಳಿ ತುಂಬಿದ ಕಾಲ್ಚೆಂಡಿನಂತೆ ನಿಂತಲ್ಲಿ ನಿಲ್ಲದೆ ನಲಿಯುತ್ತಿತ್ತು. ಅವಳು ಎರಡೆರಡು ಸಲ ಒಳ ಹೋದವಳು ಹೊರಬಂದು ರಸ್ತೆಯ ಕಡೆ ಇಣಿಕಿ ನೋಡಿ ಒಳ ಹೋದಳು. ಆ ಮೇಲೆ, 'ಲಲಿತ! ಲಲಿತ!! ಎಲ್ಲಿರುವೆ?" ಎಂದು ಗಟ್ಟಿಯಾಗಿ ಕರೆದು ಲಲಿತೆಯ ಕೋಣೆಗೆ ಧಾವಿಸಿದಳು. ಕುರ್ಚಿಯ ಮೇಲೆ ಕುಳಿತು ಏನೋ ಪುಸ್ತಕವೊಂದನ್ನೋದುತ್ತಿದ್ದ ಲಲಿತೆಯನ್ನು ಥಕ್ಕನೆ ಬಿಗಿಹಿಡಿದು ಮುದ್ದಾಡಿ, "ಇನ್ನು ನಿನ್ನ ಭಾಗ್ಯೋದಯವಾಯಿತು ಮಗು! ನಿನಗೇನಿನ್ನು ಕಡಿಮೆಬರಲಿಕ್ಕಿಲ್ಲ. ನಾನಿನ್ನು ಸತ್ತರೂ ಚಿಂತೆಯಿಲ್ಲ" ಎಂದಳು. ನಾಗಿಯ ಹಠಾತ್ತಾದ ಈ ಉತ್ಸಾಹಕ್ಕೆ ಕಾರಣವೇನೆಂದು ತಿಳಿಯದೆ ಲಲಿತೆಯು ತುಸುಸಮಯ ವಿಸ್ಮಯಪಟ್ಟಳು ಆ ಮೇಲೆ, "ಏನಮ್ಮಾ? ಏನಾಯಿತು ಅಂತಹದೀಗ?" ಎಂದು ಪ್ರಶ್ನಿಸಿದಳು. "ಏನಾಯಿತೊ? ರೂಪಾಯಿ ಹತ್ತುಸಾವಿರದ ಆಸ್ತಿಯಾಯಿತು ಆ ಮೇಲೊಂದು ಒಳ್ಳೇ ಮನೆ ಸ್ವಾಮಿರು ಕಟ್ಟಿಸುವಾಗ ರೂಪಾಯಿ ಐದು ಸಾವಿರವಾದರೂ ಅದಕ್ಕೆ ಖರ್ಚುಮಾಡದಿರಲಿಕ್ಕಿಲ್ಲ ಇದು ಹೊರತು ನಾನು ಗಳಿಸಿಟ್ಟ ಹಣ ಐದು ಸಾವಿರ ಒಟ್ಟು ರೂಪಾಯಿ ಇಪ್ಪತ್ತು ಸಾವಿರವಾಯಿತು. ಇನ್ನೇನು ಬೇಕು?" ಎಂದಳು ನಾಗಿ. "ಏನಾಯಿತಮ್ಮಾ ಸರಿಯಾಗಿ ಹೇಳಬಾರದೇ? ನಿನ್ನನ್ನೇಕೆ ಸ್ವಾಮಿರು ಕರೆಸಿದುದು?" ಎಂದಳು ಲಲಿತೆ ನಾಗಿಯ ಉತ್ಸಾಹದಲ್ಲಿ ಭಾಗಿಯಾಗದೆ ತಣ್ಣಗಿದ್ದು. ಆಗ ನಾಗಿಯು ತನ್ನನ್ನು ಸ್ವಾಮಿರು ಕರೆಸಿ ಹೇಳಿದ ಸಂಗತಿಗಳನ್ನೆಲ್ಲಾ ಹೇಳಿದಳು ಅತುಲ ಸಂತೋಷವನ್ನು ವಾಕ್ಯ ವಾಕ್ಯದಲ್ಲಿಯೂ ಹೊರ ಸೂಸಿ. ಇದನ್ನು ಕೇಳಿ ಲಲಿತೆಯು "ಇಷ್ಟೆಯೋ? ನೀನೀಗ ನಿನ್ನ ಹಣವನ್ನು ಬೇಂಕಿನಿಂದ ತೆಗೆದುಕೊಡಬೇಕೇ? ಅದಕ್ಕಾಗಿಯೇ ನಿನ್ನನ್ನು ಮೋಟರ್ ಕಾರ್ ಕಳುಹಿಸಿ ಕರೆಸಿದುದೇ? ಅತಿಯಾಸೆಮಾಡಿ ಗತಿಗೇಡು ಮಾಡಿಕೊಳ್ಳಬೇಡಮ್ಮಾ. ನಿನ್ನ

ಹಣ ಸ್ವಾಮಿರಿಗೆ ಕೊಡಬೇಡ" ಎಂದಳು ಲಲಿತೆ ಸ್ವಾಭಾವಿಕವಾಗಿ ತನ್ನಲ್ಲಿ ಹುಟ್ಟಿದ ಸಂದೇಹದಿಂದ. ಆದರೆ ನಾಗಿಯು ಅದಕ್ಕೆ ಕಿವಿಗೊಡುವಳೇ? ಅವಳಿಗೇನು ಗೊತ್ತು ಶಿವಾನಂದರ ಆರ್ಥಿಕ ಪರಿಸ್ಥಿತಿ? "ಸಾಕು ಸಾಕು ನಿನ್ನ ಬುದ್ಧಿವಾದ! ನಿನಗೇನು ಗೊತ್ತು ಸ್ವಾಮಿಯರ ಸಂಗತಿ? ಅದಕ್ಕೆಲ್ಲಾ ನಾನು ಜವಾಬ್ದಾರಿ. ನೀನು ಸುಮ್ಮನಿರು" ಎಂದು ನಾಗಿಯು ತನ್ನ ಉಲ್ಲಾಸಕ್ಕೆ ಲಲಿತೆಯು ಇನ್ನೆಲ್ಲಿಯಾದರೂ ಭಂಗವನ್ನುಂಟು ಮಾಡುವಳೋ ಎಂಬ ಅಸಹಿಷ್ಣುತೆಯಿಂದ ಕೂಡಲೆ ಕೋಣೆಬಿಟ್ಟು ಹೊರ ನಡೆದುಬಿಟ್ಟಳು.

ಅಧ್ಯಾಯ ೭

"ಅಮ್ಮಾ! ಅಮ್ಮಾ!! ಮಗುವೆಲ್ಲಿ? ಮಗುವೆಲ್ಲಿ?"

ಶಿವಾನಂದರು ಊರುಬಿಟ್ಟು ದೊಡ್ಡ ಸಂಚಾರಕ್ಕೆ ಹೊರಟು ಮೈಸೂರು ಸಂಸ್ಥಾನದ ಮುಖ್ಯ ಮುಖ್ಯ ಸ್ಥಳಗಳಿಗೂ, ಉತ್ತರ ಕನ್ನಡದ ಕೆಲವು ಪಟ್ಟಣಗಳಿಗೂ ಹೋಗಿ ಸುಮಾರು ಒಂದು ವರ್ಷದ ಮೇಲೆ ಹಿಂತಿರುಗಿದರು. ಸಾಲಿಗರ ಕಾಟದಿಂದ ಊರಲ್ಲಿ ನಿಲ್ಲಲಾರದೇನೇ ಅವರು ಇಷ್ಟೊಂದು ದೀರ್ಘ ಸಮಯದ ಸಂಚಾರ ಕೈಕೊಂಡುದು. ಅಲ್ಲೆಲ್ಲಾ ತನ್ನ ಶಿಷ್ಯವರ್ಗದವರು ಬಹಳ ಶ್ರೀಮಂತರಿದ್ದಾರೆ; ತಾನು ಕಡಿಮೆಯೆಂದರೆ ಅರ್ಧ ಲಕ್ಷ ರೂಪಾಯಿಗಳನ್ನಾದರೂ ಒಟ್ಟುಗೂಡಿಸಿ ತರುತ್ತೇನೆಂದು ಸಾಲಿಗರಿಗೆಲ್ಲಾ ಅಭಯವಿತ್ತು ಸಂಚಾರ ವೆಚ್ಚಕ್ಕಾಗಿ ಮತ್ತಷ್ಟು ಹಣ ಸಾಲಮಾಡಿ ತೆರಳಿದ್ದರು. ಆಗಾಗ ಬಂದು ಕಣ್ಣೀರಿಳಿಸಿ ಕಾಡುತ್ತಿದ್ದ ನಾಗಿಗೆ, ಸಂಚಾರದಿಂದ ಹಿಂತಿರುಗಿ ಬಂದೊಡನೆಯೇ ಆಸ್ತಿ ಮಾಡದಿದ್ದರೆ ತಾನಿದ್ದೂ ಸತ್ತಂತೆಂದು ಭಾಷೆ ಕೊಟ್ಟಿದ್ದರು. ಅವಳೂ ಇದರಿಂದ ಸಂತೋಷದಿಂದಿದ್ದಳು. ಅವಳ ಸಂತೋಷಕ್ಕೆ ಇನ್ನೊಂದು ಕಾರಣವೂ ಇತ್ತು. ಲಲಿತೆಯು ಗರ್ಭಿಣಿಯಾಗಿದ್ದಳು. "ನನ್ನ ಲಲಿತೆಗೊಂದು ಗಂಡು ಕೂಸು ಹುಟ್ಟಬೇಕು; ಆ ಮೇಲೆ ನಾನು ಸತ್ತರೂ ಚಿಂತೆಯಿಲ್ಲ" ಎಂದು ಸದಾ ಪ್ರಾರ್ಥಿಸಿ

ಕೊಂಡಿದ್ದುದಲ್ಲದೆ ಅದನ್ನು ಮನೆಗೆ ಬಂದವರೊಡನೆ ಮತ್ತು ನೆರೆಕರೆ ಯವರಲ್ಲೆಲ್ಲಾ ಬಾಯ್ಬಿಟ್ಟು ಹೇಳುತ್ತಿದ್ದ ನಾಗಿಯು ಈಗ ಬಹಳ ಆನಂದಗೊಂಡಿದ್ದಳು. ಹುಟ್ಟುವುದು ಗಂಡು ಮಗುವೆಂದೇ ಅವಳು ನಿಶ್ಚಯಮಾಡಿಕೊಂಡಿದ್ದಳು. ಆದರೆ ಈ ಸಂಗತಿಯು ಶಿವಾನಂದರಿ ಗಾಗಲಿ ನರಸಿಂಹನಿಗಾಗಲಿ ತಿಳಿದಿಲ್ಲ. ಅವರು ಸಂಚಾರಕ್ಕೆ ಹೊರಡು ವಾಗಲೆ ಲಲಿತೆಯು ಮೂರು ತಿಂಗಳ ಗರ್ಭಿಣಿ.

ಶಿವಾನಂದರು ಜನರಿದಿರಲ್ಲಿ ತಾನು ಅರ್ಧ ಲಕ್ಷ ಹಣ ಸಂಗ್ರಹಿಸಿ ಕೊಂಡು ಬರುತ್ತೇನೆಂದು ಎದೆತಟ್ಟಿ ಹೇಳುತ್ತಿದ್ದರೂ ಕಡಿಮೆಯೆಂದರೆ ಇಪ್ಪತ್ತು ಮೂವತ್ತು ಸಾವಿರ ರೂಪಾಯಿಯನ್ನಾದರೂ ಸಂಪಾದಸಿ ತನ್ನ ಸಾಲವನ್ನೆಲ್ಲಾ ತೀರಿಸಿ ಮೈತೊಳೆದು ಸುಖವಾಗಿರಬಹುದೆಂದು ನೆನಸಿದ್ದರು. ಇನ್ನೆಲ್ಲಿಯಲ್ಲದಿದ್ದರೂ ಬೊಂಬಾಯಿ ಪಟ್ಟಣವೊಂದರಲ್ಲೇ ಹತ್ತಿಪ್ಪತ್ತು ಸಾವಿರ ರೂಪಾಯಿ ಸಂಗ್ರಹಿಸಬಹುದೆಂದು ಅವರಿಗೆ ಖಚಿತವಿತ್ತು. ಆದರೆ ಇದೆಲ್ಲಾ ಬಯಲಾಶೆಯಾಗಿ ಹೋಯಿತು. ಕೆಲ ವೆಡೆ ಅವರ ವೆಚ್ಚಕ್ಕೇನೇ ತಂತಿಕೊಟ್ಟು ಊರಿಂದ ಹಣತರಿಸಿಕೊಳ್ಳ ಬೇಕಾಯಿತು. ಎಲ್ಲಿ ಹೋದರೂ ನಿರಾಶೆಯೇ ಅವರನ್ನೆದುರುಗೊಳ್ಳ ನಿಂತಿತ್ತು. ಅವರ ಉತ್ಸಾಹ ಕುಂದಿಹೋಯಿತು. ದಿನೇದಿನೇ ಚಿಂತೆಯು ಅಧಿಕವಾಗಿ ಅವರ ದೃಢಕಾಯವನ್ನು ಒಳಗಿಂದೊಳಗೆ ಕೊರೆದು ಕುಗ್ಗಿಸಿ ಬಿಟ್ಟಿತು. ಮಾನವನು ಉತ್ಸಾಹ ಕುಂದಿದನೆಂದರೆ ಮತ್ತವನ ಕೈ ಯಿಂದೇನೂ ಸಾಗದು. ಎಂತಹ ವಿಪತ್ತಿನಿಂದಾದರೂ ಉತ್ಸಾಹ ಮತ್ತು ಸಾಹಸದಿಂದ ಪಾರಾಗಬಹುದು. ಉತ್ಸಾಹವೆಂಬುದು ಶರೀರದ ನರ ನಾಡಿಗಳೆಂಬ ತಂತಿಗಳ ವಿದ್ಯುಚ್ಛಕ್ತಿ. ಆ ಶಕ್ತಿಯೊಂದಿದ್ದರೆ ಎಂತಹ ವಿಸ್ಮಯಕರ ಕೆಲಸವನ್ನಾದರೂ ಮಾಡಬಹುದು. ಅದಿಲ್ಲದಿದ್ದರೆ ಮಾನವ ಶರೀರವೆಂಬುದು ಬರೇ ಒಂದು ಕೊರಡು. ಶಿವಾನಂದರು ನಿರುತ್ಸಾಹಗೊಂಡು ತಾನು ಯಾವಾಗ ಹಿಂದಿರುಗಲಿಲ್ಲೆಂಬ ಒಂದೇ ಚಿಂತೆಯಲ್ಲಿದ್ದರು. ಆಗಲೇ ಬೊಂಬಾಯಿಯಲ್ಲಿ ಹಿಂದು ಮುಸಲ್ಮಾನ ಹೊಡೆದಾಟ ನಡೆದಿದೆಯೆಂದು ಯಾರೋ ಅವರಿಗೆ ತಿಳಿಸಿದರು. ಎಲ್ಲಿಯೋ ಒಂದು ಗಲ್ಲಿಯ ಮೂಲೆಯಲ್ಲಿ ಕೆಲಮಂದಿ ಹಿಂದು ಮು

ಲ್ಮಾನರು ಹೊಡಕೊಂಡುದರ ಗೋಷ್ಟಿಯು ಬೊಂಬಾಯಿಯವರೆಗೇನೇ ಇರದಿದ್ದರೂ ಹೊರಗೆ ಅದು ಬಹಳ ದೊಡ್ಡ ಗಲಭೆಯಾಗಿ ಆ ಸುದ್ದಿಯು ಎಲ್ಲೆಲ್ಲಿಯೂ ಹಬ್ಬಿಬಿಟ್ಟಿತು. ಶಿವಾನಂದರು ಇದೇ ಸುಸಂದರ್ಭವೆಂದು ತನ್ನ ಬೊಂಬಾಯಿಯ ಸಂಚಾರವನ್ನು ನಿಲ್ಲಿಸಿ ಕೂಡಲೆ ಹಿಂದಿರುಗಿದರು. ನರಸಿಂಹನಿಗೊಮ್ಮೆ ಬೊಂಬಾಯಿ ನೋಡಬೇಕೆಂದು ಬಹಳ ಮನಸ್ಸಿತ್ತು. ಅವನು ಶಿವಾನಂದರೊಡನೆ "ಇಷ್ಟರವರೆಗೆ ಖರ್ಚೇ ಹೊರತು ಹುಟ್ಟೇನೂ ಇಲ್ಲ. ನಮಗೆ ಸಂಪಾದನೆಯಾಗುವ ಸ್ಥಳವೆಂದರೆ ಬೊಂಬಾಯಿ. ಅಲ್ಲಿಗೆನೇ ಹೋಗದೆ ಹಿಂತಿರುಗಿದರೆ ಸಾಲಗಾರರಿಗೇನು ಮಾಡುವುದು ಪರಾಕೆ?" ಎಂದು ಬಹಳವಾಗಿ ಹೇಳಿಕೊಂಡ. ಆದರೂ ಶಿವಾನಂದರು ಕಿವಿಕೊಡಲಿಲ್ಲ. ಅವರಿಗೆ ಬೇಸರ ಹಿಡಿದುಹೋಗಿತ್ತು. ಹೇಗಾದರೂ ಒಮ್ಮೆ ಊರಿಗೆ ಹೋಗಿ ಬಿದ್ದರೆ ಸಾಕೆನಿಸುತಿತ್ತು. "ಸಾಲಗಾರರಿದ್ದಾರೆಂದು ಪ್ರಾಣ ಕಳಕೊಳ್ಳಲಾಗುವುದೇ ನರಸಿಂಹ? ಇನ್ನೊಮ್ಮೆ ನೋಡುವ" ಎಂದರವರು. "ಹೌದು, ಇನ್ನೊಮ್ಮೆ! ಯಾರು ಸಾಯುತ್ತಾರೋ ಯಾರು ಬದುಕುತ್ತಾರೋ ಆಗ" ಎಂದ ನರಸಿಂಹ ತಲೆತುರಿಸಿಕೊಳ್ಳುತ್ತಾ ಬಹಳ ಖಿನ್ನನಾಗಿ. "ನಿನಗೇನು ಮಾಂಬರಲಿಕ್ಕಿಲ್ಲ ಇನ್ನೊಂದು ಇಪ್ಪತ್ತು ವರ್ಷ ಕಲ್ಲುಗುಂಡಿನ ಹಾಗಿದ್ದಿ. ದಿನ ಹೋದಂತೆ ಯೌವನ ತುಂಬಿ ಬರುತ್ತದೆ ನಿನಗೆ! ನಾನು ಬಾಲಕನಾಗಿದ್ದಾಗಲೂ ಹೀಗೇ ಇದ್ದಿ!" ಎಂದರು ಸ್ವಾಮಿರು ಕಳೆಗುಂದಿದ ಮುಖದಲ್ಲಿ ಮುಗುಳ್ನಗೆಯನ್ನೊಮ್ಮೆ ಬೆಳಗಿಸಿ. "ಅಯ್ಯಪ್ಪಾ, ನಮ್ಮ ಮಾತು ಯಾರು ಕೇಳುತ್ತಾರೆ ಬಡವರದು!" ಎಂದು ಭಗ್ನಮನೋರಥನಾಗಿ ಉದ್ಗರಿಸಿ ನರಸಿಂಹನು ಶಿವಾನಂದರ ಬಳಿಯಿಂದ ಹೊರಟುಹೋದ.

ಹಿಂದು ಮುಸಲ್ಮಾನ ಗಲಾಟೆಯ ನಿಮಿತ್ತ ಶಿವಾನಂದರು ಬೊಂಬಾಯಿಗೆ ಹೋಗದೇನೇ ಹಿಂತಿರುಗಿದ್ದಾರೆ; ಐವತ್ತು ಸಾವಿರ ಬಿಟ್ಟು ಐದು ಸಾವಿರ ರೂಪಾಯಿಯನ್ನೂ ಸಂಗ್ರಹಿಸದೆ ಮತ್ತಷ್ಟು ವೆಚ್ಚವನ್ನೇ ಮಾಡಿ ಬರಿಗೈಯಿಂದ ಹಿಂದಿರುಗಿದ್ದಾರೆಂಬುದು ಅವರ ಸಾಲಗರಿಗೆಲ್ಲಾ ಮೊದಲೇ ತಿಳಿದು ಅವರು ತಮ್ಮ ಹಣಕ್ಕೆ ಗತಿ

ಯೇನೆಂದು ಕಳವಳಿಸಹತ್ತಿದ್ದರು. ಈ ಕೆಲವೇ ಮಂದಿ ಸಾಲಿಗರನ್ನು ಬರಿಗೈಯಿಂದ ಇದಿರಿಸುವುದಕ್ಕಿಂತಲೂ ದೊಡ್ಡ ಸಮಸ್ಯೆಯೊಂದು ಶಿವಾನಂದರು ಶಿವಪುರಕ್ಕೆ ಮುಟ್ಟಿದೊಡನೆಯೇ ಅವರನ್ನು ಕಂಗೆಡಿಸಿಬಿಟ್ಟಿತು. ಅದನ್ನು ನಿವಾರಿಸುವ ಉಪಾಯಗಾಣದೆ ಅವರು ತಳಮಳಸುತ್ತಿದ್ದರು. ಎಂತಹ ಮುಗ್ಗಟ್ಟಿನಲ್ಲಾದರೂ ಧೃತಿಗೆಡದೆ ಅವರ ಸಹಾಯಕ್ಕೆ ಬರುತ್ತಿದ್ದ ನರಸಿಂಹನೂ ಈ ಸಂದರ್ಭದಲ್ಲಿ ಏನುಮಾಡುವದೆಂದು ತೋಚದೆ ಕುಗ್ಗಿ ತಣ್ಣಗಿದ್ದನು. ಶಿವಪುರಕ್ಕೆ ಹಿಂತಿರುಗಿದಂ ನೆಂದ ಶಿವಾನಂದರಿಗೆ ಅದೊಂದೇ ಚಿಂತೆ. ಆಹಾರ ನಿದ್ದೆಗಳ ಗೊಡ ಕೂಡಾ ಅವರಿಗಿದ್ದಿಲ್ಲ. ಅವರು ಬೈಠಕು ಕೋಣೆಯಲ್ಲಿ ಬಾಗಿಲ ಹಾಕಿ ಕುಳಿತು ಇಡೀ ದಿವಸ ಅದೊಂದೇ ಚಿಂತಾಮಗ್ನರಾಗಿದ್ದರು. ದೇವಸ್ಥಾನದ ಪೂಜೆಯಾದರೋ ಪಾರುಪತ್ಯಗಾರರು ಹೇಳಿ ಹೇ ಬೆಳಗ್ಗಿನದು ಸಂಜೆ, ಸಂಜೆದ್ದು ಮಧ್ಯರಾತ್ರಿಗೆ ಹೇಗಾದರೂ ಆಗುತಿತ್ತು. ಸಂಗತಿಯೇನೆಂದು ಶಿವಾನಂದರು ಬಾಯ್ಬಿಟ್ಟು ಪಾರುಪತ್ಯಗಾರರಿಗಾಗಲಿ ಇನ್ನಾರಿಗಾಗಲಿ ಹೇಳಲಾರರು. ಅವರು ಕೇಳಿಕೇಳಿ ಬೇಸತ್ತು ಕಡೆ ಸುಮ್ಮನಿದ್ದುಬಿಟ್ಟರು. ಕಡೆಗೆ ಒಂದು ರಾತ್ರಿ ಶಿವಾನಂದರು ನರಸಿಂಹನನ್ನು ಕೋಣೆಗೆ ಕರೆಸಿದರು. ಅವರೊಳಗೆ ಬಹಳ ಹೊತ್ತು ಮಾತುಕತೆ ನಡೆಯಿತು.

ಶಿವಾನಂದ—ಹೀಗೆಯೇ ಆದರೆ ನಾನಿನ್ನು ಹೆಚ್ಚು ಸಮಯ ಬದುಕುವ ಹಾಗಿಲ್ಲ ನರಸಿಂಹ. ಈಗಲೆ ನನಗೆ ಕೂತಲ್ಲಿಂದ ಏಳಲಾಗುವುದಿಲ್ಲ. ತಲೆ ಗಿರ್ರನೆ ತಿರುಗುವುದು. ಕೈಕಾಲು ಕಂಪಿಸುವುದು. ಇಲ್ಲಿಗೆ ಬಂದು ಈ ಅವಸ್ಥೆಗೊಳಗಾಗುವುದಕ್ಕಿಂತ ಬೊಂಬಾಯಿಗೆ ಹೋಗಿಯಾದರೂ ಸಾಯುವುದೊಳ್ಳೇದಿತ್ತು.

ನರಸಿಂಹ--ಯಾರಿಗೆ ಗೊತ್ತುಬುದ್ಧಿ ಈ ಸಂಗತಿ! ನಾವು ಹೋಗುವಾಗಲೇ ಮೂರು ನಾಲ್ಕು ತಿಂಗಳ ಗರ್ಭಿಣಿಯಂತೆ. ಆ ನಾಗಿ ರಂಗ ನಮಗಾವುದನ್ನೂ ತಿಳಿಸಲೇ ಇಲ್ಲ. ಮೊದಲಾದರೆ ಏನಾದರೂ ಮಾಡಬಹುದಿತ್ತು. ಈಗೇನು ಮಾಡುವುದು ಪರಾಕೆ ಮಗು ಹುಟ್ಟಿ ಐದಾರು ತಿಂಗಳಾದ ಮೇಲೆ?

ಶಿವಾನಂದ—ನೀನೇನಾದರೂ ಮಾಡದಿದ್ದರೆ ನನಗೆ ಪ್ರಾಣವಿಟ್ಟು ಕೊಂಡಿರಲು ಸಾಧ್ಯವಿಲ್ಲ ನರಸಿಂಹ! ಈ ಅವಸ್ಥೆಗಿಂತ ವಿಷತಿಂದು ಆತ್ಮಹತ್ಯೆ ಮಾಡಿಕೊಳ್ಳುವುದೇ ಲೇಸು ನನ್ನ ಪ್ರತಿಮೂರ್ತಿಯಂತೆ ಆ ಮಗು!

ನರಸಿಂಹ—ಅದೇ ಸುದ್ದಿ ಊರಲ್ಲೆಲ್ಲಾ ಎಲ್ಲಿ ಹೋದರೂ! ಆ ಮಗುವನ್ನು ನೋಡಿ ನಿಮ್ಮನ್ನು ನೋಡಬೇಕಾಗಿಲ್ಲ. ಪ್ರತ್ಯಕ್ಷ ನೀವೇ ನಾಗಿಯ ಸಂತೋಷವೇ ಸಂತೋಷ!

ಶಿವಾನಂದ - ಏನು ಮಾಡುವುದು ನರಸಿಂಹ! ಈ ಸುಟ್ಟ ಸನ್ಯಾಸ ವಲ್ಲದಿದ್ದರೆ ಮದುವೆಯಾಗಿ ಮಡದಿ ಮಕ್ಕಳ ಸುಖ ಪಡೆದು ಆನಂದ ದಿಂದಿರಬಹುದಿತ್ತು. ಒಮ್ಮೊಮ್ಮೆ ಆ ಮಗುವನ್ನೊಂದು ಸಲ ಕಾಣ ಬೇಕೆಂದು ನನಗೆಷ್ಟೊ ಆಶೆಯಾಗುವುದು. ಈ ಸನ್ಯಾಸಿ ಪಟ್ಟಕ್ಕೇನೇ ತಿಲಾಂಜಲಿಯಿತ್ತು ಲಲಿತೆಯೊಡನೆ ಸುಖವಾಗಿ ಸಂಸಾರ ನಡೆಸಿದ ರೇನೆಂದು ಯೋಚಿಸಿದುದೂ ಇದೆ ನರಸಿಂಹ!

ನರಸಿಂಹ—ಅದು ಸಹಜವಲ್ಲವೇ? ಎಷ್ಟಾದರೂ ತಮ್ಮ ವೀರ್ಯ ಕ್ಕನೇ ಹುಟ್ಟಿದ ಮಗುವಲ್ಲವೇ ಪರಾಕೆ? ಸ್ವಾಭಾವಿಕವಾದ ಆ ಮೋಹ ವಾದರೂ ಎಲ್ಲಿ ಹೋದೀತು? ಆದರೆ ನೀವು ಸನ್ಯಾಸಿಯಾಗಿ....

ಶಿವಾನಂದ—ಹುಂ, ನಾನೆಂತಹ ಸನ್ಯಾಸಿಯೆಂಬುದನ್ನು ನಿನ್ನಷ್ಟು ಚೆನ್ನಾಗಿ ಬಲ್ಲವರು ಇನ್ನಾರೂ ಇರಲಾರರು ನರಸಿಂಹ. ಆದರೇನು ಮಾಡಲಿ! ಸಮಾಜಕ್ಕಾಗಿ ನಾನೀ ಸೋಗನ್ನು ಹಾಕಿಕೊಳ್ಳಬೇಕಾಗಿದೆ. ನನ್ನೀ ಕಾಷಾಯ ವಸ್ತ್ರದೊಳಗಿನ ವೇಷವು ಏಂತಹದಿದ್ದರೂ ಅದರ ಗೊಡವೆ ಸಮಾಜಕ್ಕಿಲ್ಲ ಅದು ಕಾಷಾಯ ವಸ್ತ್ರವನ್ನಷ್ಟೆ ಮಾನಿಸು ವುದು. ಅದಕ್ಕೆ ಬೇಕಾದುದು ಹೊರಗಣ ಆಡಂಬರವಲ್ಲದೆ ಒಳಗಣ ಹೃದಯವಲ್ಲ. ಒಳಗಣ ಹೃದಯವೆಂತಹದೆಂಬುದರ ಗೊಡವೆಯು ಒಂದಿಷ್ಟಾದರೂ ಸಮಾಜಕ್ಕಿರುತ್ತಿದ್ದರೆ ಈ ಬಾಲಾಶ್ರಮದ ವಿಪರ್ಯಾ ಸವು ಎಂದೋ ಮಣ್ಣುಗೂಡುತ್ತಿತ್ತು.

ನರಸಿಂಹ— ಇದೇನು ಪರಾಕೆ, ಈ ರೀತಿ ಮಾತಾಡುತ್ತಿದ್ದೀರಿ?

ಶಿವಾನಂದ—ನನಗೂ ಮಾನವ ಸಹಜ ಹೃದಯವಿದೆ; ನನ್ನಲ್ಲೂ ವಿವೇಕವಿದೆ ನರಸಿಂಹ. ಆದರೇನುಮಾಡಲಿ!..........ಎನ್ನುತ್ತೆನ್ನುತ್ತ

ಆವೇಗದಿಂದ ಗದ್ಗದ ಕಂಠವಾಗಿ ತುಸು ಹೊತ್ತು ಸುಮ್ಮನಿದ್ದು ಆ ಮೇಲೆ ದೀರ್ಘ ಶ್ವಾಸಬಿಟ್ಟು ಸ್ವಾಮಿಗಳು ಮುಂದರಿಸಿದರು.

ಆದರೇನುಮಾಡಲಿ! ಪರಂಪರಾಗತವಾಗಿ ಬಂದಿರುವ, ಕೊಳತ ನಾರುವ ರೂಢಿಯ ಶವವನ್ನು ಮಹಾ ಪ್ರಸಾದವೆಂದು, ಅಮೂಲ್ಯ ಸೊತ್ತೆಂದು ಹೊತ್ತು ತಿರುಗಬೇಕಾಗಿದೆ. ನನಗೆ ಬೇಡವಾಗಿತ್ತು ನರ ಸಿಂಹ ಈ ಸನ್ಯಾಸಿಪಟ್ಟ. ನಾನು ಬೇಡ ಬೇಡವೆಂದು ಎಷ್ಟೊಂದು ಕೂಗಿದರೂ ಕೇಳದೆ ಬಲವಂತದಿಂದ ತಲೆ ಬೋಳುಮಾಡಿ ಕಾಷಾಯ ವಸ್ತ್ರ ಉಡಿಸಿ ನನ್ನನ್ನು ಸನ್ಯಾಸಿಯನ್ನಾಗಿ, ಧರ್ಮ ಗುರುವನ್ನಾಗಿ ಮಾಡಿದರು. ಜೀವನದ ಸಹಜ ದಾರಿಯು ತಡೆಗಟ್ಟಲ್ಪಟ್ಟಾಗ ಸ್ವಾಭಾ ವಿಕ ಪ್ರವೃತ್ತಿಯು ದಡಮೀರಿ ಹರಿದು ಹಾವಳಿಮಾಡಿತು. ಇನ್ನೇನು ಮಾಡಲಿ ನರಸಿಂಹ? ಇನ್ನೇನು ಮಾಡಲಿ? ನನ್ನನ್ನು ನನ್ನಷ್ಟಕ್ಕೇನೆ ಬಿಡುತ್ತಿದ್ದರೆ ನನ್ನ ಜೀವನದ ಗತಿಯೇಬೇರೆಯಿತ್ತು. ಈಗಲಾದರೂ ಸ್ವಾಭಾವಿಕ ಇಚ್ಛೆಯಂತೆ ನಾನು ನಡೆಯುವಂತಾಗುವುದಾದರೆ ನನ್ನ ಲಲಿತೆಯನ್ನು, ನಾನು ಅತ್ಯಾಚಾರಮಾಡಿ ಮಾನಗೆಡಿಸಿದ ಆ ನಿರ್ಭಾಗಿ ಬಾಲೆಯನ್ನು ಮದುವೆಯಾಗಿ......

ನರಸಿಂಹ—ಛೆ! ಛೆ!! ಏನಿದು ಪರಾಕೆ? ಏನು ಹೇಳುತ್ತಿರುವಿರಿ ನಿಮ್ಮ ಬುದ್ಧಿಯೇ ನಿಮ್ಮ ಸ್ವಾಧೀನವಿಲ್ಲದಂತಾಗಿದೆ ಈಗೀಗ ವಿಪರೀತ ಚಿಂತೆಯಿಂದ!

ಶಿವಾನಂದ—ಸಂಪೂರ್ಣ ವಿವೇಕದಿಂದಲೇ ನಾನೀ ಮಾತುಗಳ ನ್ನಾಡುವುದು ನರಸಿಂಹ ನೀನೇನೂ ಗಾಬರಿಪಡಬೇಡ. ನನ್ನ ಹೃದಯವನ್ನೊಮ್ಮೆ ನಿನ್ನ ಮುಂದೆ ಬಿಚ್ಚಿಟ್ಟುದು ಅದು ಕೂಡ ಕೇವಲ ನನ್ನ ಸಮಾಧಾನಕ್ಕಾಗಿ. ನನ್ನ ಅಂತರಂಗದ ಬೇಗೆಯನ್ನು ಒಂದಿಷ್ಟು ತಣಿಸುವುದಕ್ಕಾಗಿ ನಿನ್ನೊಡನೆ ನಾನು ಏನು ಹೇಳಿದರೇನು ನಮ್ಮ ಮಠದ ಆಚಾರ್ಯರೊಡನೆ ಶಿವಜ್ಞಾನ ಸಮಾಜದ ಸಮ್ಮುಖ ದಲ್ಲಿ, ಹಿಂದೂ ಸಮಾಜದ ಮುಂದೆ ಇದೇನನ್ನೂ ಹೇಳದೆ ದೊ

ನಟನೆನಡೆಸಿದರಾಯಿತು. ಮತ್ತೇನು? ನೀನೇನೂ ಬೆದರಬೇಕಾಗಿಲ್ಲ ನರಸಿಂಹ. ನಾನಿನ್ನು ಹೊಸ ಜೀವನವನ್ನೇನೂ ಆರಂಭಿಸುವ ಹಾಗಿಲ್ಲ. ಸಮಾಜಕ್ಕೆ ಈ ನಟನೆಯು ಜೀವನವೇ ಬೇಕಾಗಿರುವಾಗ, ಅದನ್ನದು ಸನ್ಮಾನಿಸುತ್ತಿರುವಾಗ, ನಾನೂ ಅದರಲ್ಲಿ ಇಷ್ಟೊಂದು ಮುಂದುವರಿದಿರುವಾಗ ಈಗ ಈ ಅಸ್ವಾಭಾವಿಕ ಜೀವನದ ಮುಸುಕನ್ನು ಹರಿದೊಗೆದು ಈ ಉಚ್ಚಸ್ಥಾನ ಮಾನವನ್ನೆಲ್ಲಾ ತೃಣೀಕರಿಸಿ, ಸಮಾಜದ ದೃಷ್ಟಿಯಲ್ಲಿ ಎಷ್ಟೊಂದು ತುಚ್ಛವಾದರೂ ಸ್ವಾಭಾವಿಕ ಜೀವನವನ್ನು ನಡೆಸುವ ಸಾಹಸಕ್ಕೆ ಕೈಯಿಕ್ಕುವಷ್ಟರ ನೈತಿಕ ಬಲವಾದರೂ ನನ್ನಲ್ಲಿಲ್ಲ ನರಸಿಂಹ. ಸಮಾಜಕ್ಕೆ ಬೇಕಾಗುವವರೆಗೆ ನಾನೀ ಕಣ್ಣು ಕಟ್ಟಿನ ಜೀವನವನ್ನೇ ಸಾಗಿಸುವೆನು. ಅದಕ್ಕೆ ಅದೇ ಬೇಕಾಗಿರುವಾಗ ನನಗೇನು?

ನರಸಿಂಹ– ಅದೆಲ್ಲಾ ಹಾಗಿರಲಿ ಪರಾಕೆ; ನನ್ನನ್ನೀ ಅಪರರಾತ್ರಿಯಲ್ಲಿ ಕರೆಸಿದುದೇಕೆ?

ಶಿವಾನಂದ—ನನಗೆ ನಿದ್ದೆ ಬರುವುದಿಲ್ಲೆಂದು ಮಾತಾಡುತ್ತಾ ಕುಳಿತುಕೊಳ್ಳಲಿಕ್ಕೆ.

ನರಸಿಂಹ—ಇನ್ನು ನಾನು ಹೋಗಲೆ?

ಶಿವಾನಂದ—ಎಲಿಗೆ? ನನಗಿನ್ನೂ ಮಾತಾಡಲಿದೆ?

ನರಸಿಂಹ—ಏನು ಪರಾಕೆ? ಇದೇ ಮಾತಲ್ಲವೇ?

ಶಿವಾನಂದ—ಅಲ್ಲ........ಅಲ್ಲ! ಇದೇ ಮಾತಲ್ಲ........

ನರಸಿಂಹ—ಏನು ಏನು ಪರಾಕೆ? ನಿಮ್ಮ ಮನಸ್ಸಿನಲ್ಲಿದ್ದುದನ್ನು ಸ್ಪಷ್ಟವಾಗಿ ಹೇಳಬಾರದೆ ನಿಮ್ಮಾ ಸೇವಕನೊಡನೆ?

ಶಿವಾನಂದ—ನಾನು ಹೇಳಿದರೆ ನೀನು ಆ ಪ್ರಕಾರ ಮಾಡುವೆಯಾ?

ನರಸಿಂಹ—ಅದಕ್ಕೇನಡ್ಡಿ ಪರಾಕೆ? ನಾನು ಇಷ್ಟರವರೆಗೆ ನಿಮ್ಮ ಮಾತಿನಂತೆ ನಡೆಯದುದಿದೆಯೇ? ನಿಮಗಾಗಿ ನಾನು ಏನು ಮಾಡುವುದಕ್ಕೂ ಸಿದ್ಧನಿರುವೆನು. ನಿಮಗೆ ಸುಖವಾಗುವುದಾದರೆ ಪ್ರಾಣ ಕೊಡಲೂ ಸಿದ್ಧನೇ ಸರಿ.

ಶಿವಾನಂದ—ಮತ್ತೆ ಹಿಂದೆಗೆಯಲಾರೆಯಲ್ಲ?

ನರಸಿಂಹ—ಛೆ! ಎಷ್ಟಕ್ಕೂ ಇಲ್ಲ ಪರಾಕೆ. ನಿಮಗೆ ಆ ಸಂದೇಹವೇ ಬೇಡ.

ಶಿವಾನಂದ—ಹಾಗಾದರೆ ಮನಬಿಚ್ಚಿ ಹೇಳಲಿ?

ನರಸಿಂಹ—ಅಡ್ಡಿಯಿಲ್ಲದೆ ಹೇಳಿ ಪರಾಕೆ.

ಶಿವಾನಂದ—ನನ್ನ ಪ್ರತಿರೂಪವೊಂದು ಈ ಶಿವಪುರದ ಜನರೆಲ್ಲ ಕಣ್ಣೆದುರಲ್ಲಿಯೇ ಬೆಳೆಯುತ್ತಿರುವಾಗ ನಾನು ಸನ್ಯಾಸಿಯಾಗಿರು ದಾದರೂ ಹೇಗೆ ನರಸಿಂಹ? ಪ್ರತ್ಯಕ್ಷವಾದ ರುಜುವಾತು ಮುಂದಿರ ವಾಗ ಸೋಗು ಹಾಕಿಕೊಳ್ಳುವುದಾದರೂ ಹೇಗೆ? ಒಂದೋ ನಾನ ನನ್ನೀ ಸೋಗನ್ನೇ ತೆಗೆದು ಹಾಕಿ ಶಿವಪುರವನ್ನೇ ಬಿಟ್ಟು ಎಲ್ಲಿಗಾದರೂ ಹೋಗಿಬಿಡಬೇಕು. ಇಲ್ಲವಾದರೆ........

ನರಸಿಂಹ—ಇಲ್ಲವಾದರೇನು ಪರಾಕೆ?

ಶಿವಾನಂದ—ಇಲ್ಲವಾದರೆ ನನ್ನೀ ಸೋಗನ್ನು ಅಲ್ಲಗಳೆಯು ಆ ಪ್ರತ್ಯಕ್ಷ ಸಿದ್ಧಾಂತವು ಇಲ್ಲದಂತಾಗಬೇಕು,

ನರಸಿಂಹ—ಅಂದರೆ?

ಶಿವಾನಂದ—ಅಂದರೇನೆಂದು ತಿಳಿಯದೆ ನರಸಿಂಹ? ಈ ನಟ ಯೆಲ್ಲ ಯಾಕೆ?

ನರಸಿಂಹ—ನಿಜವಾಗಿಯೂ ನಟನೆಯಲ್ಲ ಪರಾಕೆ ನಾನೇನ ಮಾಡಬೇಕೆಂದು ಸ್ಪಷ್ಟವಾಗಿ ಹೇಳಬಾರದೆ?

ಶಿವಾನಂದ—ಆಹ! ಇನ್ನೂ ಸ್ಪಷ್ಟವಾಗಿ ಹೇಳಬೇಕೆ ನರಸಿಂಹ ನಿಟ್ಟುಸಿರು ಬಿಟ್ಟು ಹೇಳಿದರು:

ನರಸಿಂಹ—ಯಾಕಿಷ್ಟು ಉದ್ವೇಗ ಬುದ್ಧಿ? ಸಂಗತಿಯೇನೆಂ ಮನಬಿಚ್ಚಿ ಹೇಳಲಾಗದೇ?

ಶಿವಾನಂದ—ಏನು ಹೇಳುವುದು ನರಸಿಂಹ! ಆಗಲಿ ನನ್ನ ಮನಸ್ಸನ್ನು ಕಲ್ಲುಮಾಡಿ, ಒಂದಿಷ್ಟು ಮಾನವತ್ವವಿಲ್ಲದ ದಾನವ ಆಗಿ ಹೇಳುವೆನು, ಸ್ಪಷ್ಟವಾಗಿ ಹೇಳುವೆನು. ನರಸಿಂಹ, ನೀನ ಮಗುವನ್ನು ಹೇಗಾದರೂ ಕೊಂದು ಹಾಕಬೇಕು.

ನರಸಿಂಹ—ಏನು, ಮಗುವನ್ನು ಕೊಲ್ಲುವುದೆ? ಪರಾಕೆ........ ದಂಗುಬಡೆದು ಅವಾಕ್ಕಾಗಿ ನಿಂತುಬಿಟ್ಟನು.

ಶಿವಾನಂದ—ಹೌದು. ನನಗಾಗಿಯಲ್ಲ. ಈ ಸನ್ಯಾಸಿ ಪಟ್ಟಕ್ಕಾಗಿ, ಅದರ ಸ್ಥಾನ ಮಾನಕ್ಕಾಗಿ ನೀನಾ ಪೈಶಾಚಿಕ ಕೃತ್ಯಮಾಡಲೇ ಬೇಕು.

ನರಸಿಂಹ—ಆಗದು, ಅದೊಂದು ಕೆಲಸ ನನ್ನಿಂದಾಗದು ಪರಾಕೆ! ನಾನಾ ಶಿಶುಹತ್ಯ ಮಾಡಲಾರೆ! ಕ್ಷಮಿಸಬೇಕು ಬುದ್ಧಿ ಕ್ಷಮಿಸಬೇಕು! ಈ ಸಲ ನನ್ನನ್ನು ಮಾಫಿಬಿಡಬೇಕು.

ಶಿವಾನಂದ—ಅದಾಗದು. ಈ ಕೆಲಸ ನಿನ್ನಿಂದಲ್ಲದೆ ಮತ್ತಾರಿಂದಲೂ ಸಾಧ್ಯವೇ ಇಲ್ಲ. ನೀನೀಗ ಕೊಟ್ಟ ಮಾತಿಗೆ ತಪ್ಪಬಾರದು. ಪರಿಣಾಮ ನೆಟ್ಟಗಾಗಲಿಕ್ಕಿಲ್ಲ, ನಿನ್ನ ಪ್ರಾಣಕ್ಕೆನೇ ಸಂಚಕಾರ ಬಂದೀತು!

ನರಸಿಂಹ—ಅಯ್ಯೋ ಪರಾಕೆ! ನಾನೇನು ಮಾಡಲಿ! ಆ ಕೂಸನ್ನು ಹೇಗೆ ಕೊಲ್ಲಲಿ!

ಶಿವಾನಂದ—ಆ ಉಪಾಯ ನಾನು ಹೇಳುವೆನು. ನಿನಗಾ ವಿಷಯದಲ್ಲಿ ಯಾವ ಭೀತಿಯೂ ಬೇಡ ಎಲ್ಲದಕ್ಕೂ ಹೊಣೆಗಾರ ನಾನು. ನೀನು ಕೇವಲ ನನ್ನ ಕೈಯ ಉಪಕರಣ ಮಾತ್ರ. ನಿನಗದರಲ್ಲಿ ಯಾವ ಪಾಪವೂ ಇಲ್ಲ.

ನರಸಿಂಹ—ಆಗಲಿ ಪರಾಕೆ ನೀವು ಹೇಳಿದಂತೆ ಮಾಡುವೆನು. ಮತ್ತೇನು ಮಾಡಲಿ!

ಎಂದು ಎಲ್ಲಾ ಪಾಪವನ್ನೂ ಸ್ವಾಮಿಯ ತಲೆಯಮೇಲೆ ಹಾಕಿಬಿಡುವಂತೆ ನರಸಿಂಹನು ದೀರ್ಘ ಶ್ವಾಸಬಿಟ್ಟು ಗೊಂಬೆಯಂತೆ ನಿಂತುಬಿಟ್ಟನು. ಏನೇನೆಲ್ಲಾ ಮಾಡಬೇಕೆಂದು ಶಿವಾನಂದರು ಅತಿ ರಹಸ್ಯವಾಗಿ ಅವನಿಗೆ ತಿಳಿಸಿದರು.

ಮರುದಿನ ಸುಮಾರು ಒಂಭತ್ತು ಘಂಟೆ ರಾತ್ರಿಯಿರಬಹುದು. ಲಲಿತೆಯು ಮಗುವಿಗೆ ನಿದ್ದೆ ಬರಲೆಂದು ಜೋಗುಳ ಹಾಡುತ್ತಾ ತೂಗುತ್ತಿದ್ದಳು. ಆದರೆ ಮಗುವು ಅಳುತ್ತಿದ್ದಿತು. ಮಗುವೆಲ್ಲಿಯಾದರೂ ಅತ್ತರೆ ನಾಗಿಗೆ ಸಹಿಸಿಕೊಳ್ಳಲು ಸಾಧ್ಯವೇ ಆಗುತ್ತಿದ್ದಿಲ್ಲ. ಅವಳು

ಅಡಿಗೆ ಮನೆಯಿಂದೋಡಿಬಂದು "ಯಾಕೆ ಲಲಿತ ಕೂಗಿಸುವುದು ಮಗುವನ್ನು? ಸ್ವಲ್ಪ ಮೊಲೆ ಕೊಡಬಾರದೆ?" ಎಂದು ಗದರಿಸಿದಳು. "ಮೊಲೆ ಕೊಟ್ಟು ಅರ್ಧ ಘಂಟೆಯಾಗಲಿಲ್ಲ; ನಿನ್ನ ಮಾತು ಕೇಳಿದರಾಯಿತು! ಲೇಡಿ ಡಾಕ್ಟರರು ಮೂರು ಘಂಟೆಗೊಮ್ಮೆ ಮೊಲೆಯಾಗಲಿ ಹಾಲಾಗಲಿ ಕೊಡಬೇಕೆಂದು ಹೇಳಿದ್ದಲ್ಲವೇ?" ಎಂದಳು. ಲಲಿತೆ "ನಿಮ್ಮ ಘಂಟೆಗಿಂಟೆಗೆ ಹೋದರೆ ಮಗುವನ್ನು ಕೊಲ್ಲಬೇಕಾದೀತು! ಈಗ ಕೊಡು ಮೊಲೆ. ಮೊಲೆ ಕೊಡದೆ ಅವ ಮಲಗಲಿಕ್ಕಿಲ್ಲ" ಎಂದು ನಾಗಿಯು ಮಗುವನ್ನೆತ್ತಿ ಮುದ್ದಾಡಿದಳು. ಒಂದು ಹತ್ತಿಪ್ಪತ್ತು ಸಲ ಚುಂಬಿಸಿದಳು. "ಹೂಂ ಕೊಡು ಮೊಲೆ" ಎಂದು ಒತ್ತಾಯಮಾಡಿ ಮಗುವನ್ನು ಲಲಿತೆಯ ಕೈಯ ಮೇಲಿಟ್ಟಳು. "ಮೊಲೆಯಲ್ಲೇನಿದೆ? ಈಗ ಕೊಟ್ಟದ್ದು" ಎಂದು ಲಲಿತೆಯು ತುಸು ಸಿಟ್ಟಿನಿಂದ ಮಗುವನ್ನು ಆಚೆ ಈಚೆ ಎಳೆದು ಮೊಲೆ ಕೊಡಲಾರಂಭಿಸಿದಳು. ಅಷ್ಟರಲ್ಲಿ ರಸ್ತೆಯ ಬಾಗಿಲು ಬಡಿದು ಯಾರೋ ಕರೆದ ಶಬ್ದವಾಯಿತು. "ಯಾರದು? ಬಂದೆ'' ಎಂದು ನಾಗಿಯು ಹೊರಹೋಗಿ ಬಾಗಿಲು ತೆರೆದು ನೋಡುವಾಗ ರಸ್ತೆಬದಿಯಲ್ಲಿ ಎರಡು ಕಾರುಗಳು ನಿಂತಿದ್ದುವು. ನರಸಿಂಹನು ನಾಗಿಯ ಮುಖ ಸಹ ನೋಡದೆ ಫಕ್ಕನೆ ಒಳನುಗ್ಗಿದನು. ನಾಗಿಯೂ ಅವನನ್ನೇ ಹಿಂಬಾಲಿಸಿ, "ಏನು ಸಮಾಚಾರ ನರಸಿಂಹ ಭಟ್ರೆ? ಎರಡು ಮೋಟರ್‌ಕಾರು ಯಾರದು?" ಎಂದು ಗಟ್ಟಿಯಾಗಿ ಪ್ರಶ್ನಿಸಿದಳು. "ಸ್ವಲ್ಪ ಮೆಲ್ಲಗೆ ಮಾತಾಡು. ಸ್ವಾಮಿರು ಬಂದಿದ್ದಾರೆ ಮಗು ನೋಡಲಿಕ್ಕೆ. ಎಲ್ಲಿದೆ ಮಗು? ಬೇಗ ಇಲ್ಲಿ ತಾ" ಎಂದ ನರಸಿಂಹ. ಇನ್ನೊಂದು ಕಾರಿನಲ್ಲಿ ಯಾರಿದ್ದಾರೆ?" ಎಂದು ಪುನಃ ಪ್ರಶ್ನಿಸಿದಳು. ನಾಗಿ ಬಹಳ ಉಲ್ಲಾಸಗೊಂಡು. "ಅದೆಲ್ಲಾ ಯಾಕೆ ನಿನಗೀಗ! ಬೇಗ ಮಗುವನ್ನಿಲ್ಲಿ ತಾ. ಸ್ವಾಮಿರಿಗೆ ಅದನ್ನೊಮ್ಮೆ ನೋಡದೆ ನಿದ್ದೆ ಬರುವುದಿಲ್ಲವಂತೆ" ಎಂದು ನರಸಿಂಹನು ನಾಗಿಯನ್ನೊಮ್ಮೆ ದಿಟ್ಟಿಸಿ ನೋಡಿದ. ಕೂಡಲೆ ನಾಗಿಯು ಒಳಗೋಡಿದಳು "ಲಲಿತ, ಲಲಿತ! ಸ್ವಾಮಿರು ಬಂದಿದ್ದಾರೆ ಮಗು ನೋಡಲಿಕ್ಕೆ, ಸ್ವಾಮಿರು ಬಂದಿದ್ದಾರೆ!" ಎಂದು ಲಲಿತೆಯ ಕೈಯಿಂದ ಮಗುವನ್ನು ಕಸಕೊಂಡು ಹೊರಗೋಡಿ ಬಂದು, "ನಾನೇ

ತೋರಿಸುತ್ತೇನೆ ಸ್ವಾಮಿರಿಗೆ ಅವರ ಪ್ರತಿ ಮೂರ್ತಿಯನ್ನು." ಎಂದು ನರಸಿಂಹನನ್ನು ಲಕ್ಷ್ಯಿಸದೇನೇ ಹೊರಗೆ ಹೋಗುವುದರಲ್ಲಿದ್ದಳು. ಆಗ ನರಸಿಂಹನು ತಡೆದು, "ನೀವಾರೂ ಹೊರಗೆ ಬರಕೂಡದಂತೆ. ನಾನೇ ಗುಟ್ಟಿನಲ್ಲಿ ತೋರಿಸಿ ಒಳಗೆ ತರುತ್ತೇನೆ" ಎಂದು ಮಗುವನ್ನು ನಾಗಿಯ ಕೈಯಿಂದ ತೆಗೆದುಕೊಂಡು ಅದರ ಮೇಲೆ ತಾನು ಹೊದೆದುಕೊಂಡಿದ್ದ ವಸ್ತ್ರ ಹಾಕಿ ಹೊರ ನಡೆದು ಮಗುವನ್ನು ಮೋಟರ್ ಕಾರಿನಲ್ಲಿರಿಸಿ ಹಿಂದೆ ಧಾವಿಸಿ ಬಂದು, "ನಾಗಿ, ನಾಗಿ, ನಾವು ಮುಂದೆ ಹೋಗುತ್ತೇವೆ. ಮಗುವನ್ನು ನಮ್ಮೊಂದಿಗೆ ಕೊಂಡೊಯ್ಯುತ್ತೇವೆ. ನೀನೂ ಲಲಿತೆಯೂ ಇನ್ನೊಂದು ಕಾರಿನಲ್ಲಿ ಬನ್ನಿರಿ" ಎಂದು ಹೇಳಿ ಪುನಃ ಮೋಟರ್ ಕಾರಿನ ಕಡೆಗೋಡಿ ದಡಕ್ಕನೆ ಬಾಗಿಲು ತೆರೆದು ಒಳಗೆ ಕೂತು,"ಹೂಂ ಹೋಗುವ ಎಂದನು. ಸ್ವಾಮಿರ ಸೆಲೂನ್ ಕಾರು ಕೂಡಲೇ ಅದೆಲ್ಲಿಗೋ ಓಡಿ ಹೋಯಿತು ನಾಗಿಯು ನರಸಿಂಹನ ಚಲನವಲನನ್ನು ಕಂಡು ವಿಸ್ಮಿತಳಾಗಿ ತುಸು ಹೊತ್ತು ನಿಂತಲ್ಲಿಯೇ ನಿಂತುಬಿಟ್ಟಳು. ಅವಳು ನೋಡುವಂತೆಯೇ ಸ್ವಾಮಿರ ಮೋಟರು ಧಾವಿಸಿತು. ಅವಳು ಕೂಡಲೆ ಒಳಗೋಡಿ, "ಲಲಿತ, ಲಲಿತ! ನಾವು ಮಠಕ್ಕೆ ಹೋಗಬೇಕಂತೆ, ಸ್ವಾಮಿರು ಹೇಳಿದರು. ನಮಗಾಗಿ ಇನ್ನೊಂದು ಕಾರು ಕಾದ; ನಿಂತಿದೆ. ನಡೆ ಬೇಗ ಸೀರೆ ಉಡು, ಹೋಗುವ" ಎಂದಳು. ಮತ್ತು ತಾನು ಅವಸರವಸರದಿಂದ ಸೀರೆ ಉಡುವ ಸನ್ನಾಹಮಾಡಿದಳು ಆಗ ಲಲಿತೆಯು ಅಮ್ಮಾ! ಅಮ್ಮಾ!! ಮಗುವೆಲ್ಲಿ? ಮಗುವೆಲ್ಲಿ?" ಎಂದು ಕೂಗಿಬಿಟ್ಟಳು. ಮಗುವನ್ನು ಕಾಣದೆ ತಲ್ಲಣಿಸುವ ಮಾತೃಹೃದಯದ ಕೂಗದು ನಾಗಿಯ ಹೃದಯವನ್ನು ಭೇದಿಸಿಬಿಟ್ಟಿತು. ಅವಳು, "ಮಗುವನ್ನು ಸ್ವಾಮಿರು ಮಠಕ್ಕೆ ಕೊಂಡೊಯ್ದರು ಮಗು, ಗಾಬರಿ ಪಡಬೇಡ. ನಾವೀಗಲೇ ಮಠಕ್ಕೆ ಹೋಗುವ" ಎಂದಳು "ಮಗುವನ್ನೇಕವರು ಮಠಕ್ಕೊಯ್ಯುವರಮ್ಮಾ? ಅದು ಸುಳ್ಳು ಅಮ್ಮಾ, ಮಗುವೆಲ್ಲಿದೆಯೆಂದು ಹೇಳಲಾರೆಯಾ? ಯಾರು ಕೊಂಡೊಯ್ದರು? ಯಾರಿಗೆ ಕೊಟ್ಟೆ ನೀನು? ಸ್ವಾಮಿರಿಗೆ ಬೇಕಾಗಿದ್ದರೆ ನಾವೇ ಕೊಂಡು ಹೋಗಬಾರದಿತ್ತೇ? ಅಮ್ಮಾ ಅದೆಲ್ಲಿರುವುದೋ? ಎಷ್ಟು ಕೂಗು

ವುದೋ? ಶೀರೆ ಶೃಂಗಾರಕ್ಕೆ ಬೆಂಕಿಹಾಕಲಿ! ನಡೆ, ಅಮ್ಮಾ ಹೋಗುವ. ನಾನು ನನ್ನ ಮಗುವನ್ನು ಒಂದು ಕ್ಷಣವೂ ಬಿಟ್ಟು ಇರಲಾರೆ. ಹೃದಯದ ಉದ್ವೇಗವನ್ನು ತಾಳಲಾರೆನಮ್ಮಾ ನನ್ನ ಪ್ರಾಣವೇ ಹಾರಿ ಹೋಗುವಂತಾಗುವುದು. ಹೋಗುವ ಅಮ್ಮಾ ಬೇಗ ಹೋಗುವ" ಎಂದು ನಾಗಿಯು ಹೊರಡುವ ವರೆಗೆ ಕಾಯದೆ ತಾನು ಹೊರಗೆ ಸರಿದಳು. ನಾಗಿಯೂ ಅವಳನ್ನು ಹಿಂಬಾಲಿಸಿದಳು. ಇಬ್ಬರೂ ಮೋಟರ್ ಕಾರುಹತ್ತಿ ಕುಳಿತುಕೊಂಡರು. ಡ್ರ್ಯಾವರನು ಅವರನ್ನು ಮಠಕ್ಕೆ ಕೊಂಡೊಯ್ದನು.

೮ನೇ ಅಧ್ಯಾಯ

"ಮಗುವನ್ನೇನು ಮಾಡಿದೆ? ಕೊಂದೆಯಾ ರಾಕ್ಷಸ?"

ಹೆಚ್ಚೆಂದರೆ ನಾಗಿಯ ಮನೆಯಿಂದ ಶಿವಪುರಮಠದ ಬಾಗಿಲಿಗಿರುವುದು ಒಂದು ಮೈಲು. ಐದಾರು ನಿಮಿಷಗಳಲ್ಲಿ ಟೇಕ್ಸಿಯು ಮಠದ ಬಾಗಿಲಿಗೆ ಬಂದು ನಿಂದಿರಬೇಕು. ಆದರೆ ನಾಗಿ ಲಲಿತೆಯರಿಗೆ ಕೆಲವು ಘಂಟೆ ತಾವು ಟೇಕ್ಸಿಯೊಳಗಿದ್ದಂತೆ ತೋರಿತು. ಮುಳ್ಳಿನ ಮೇಲಿದ್ದಂತಿದ್ದರವರು ಅದರೊಳಗೆ. ಟೇಕ್ಸಿಯು ಮಠದಬಾಗಿಲಿಗೆ ಮುಟ್ಟುತ್ತಿರುವಾಗಲೆ ಲಲಿತೆಯು ಅದರ ಬಾಗಿಲು ತೆರೆಯಲೆತ್ನಿಸಿದಳು. ಆದರೆ ಅವಳಿಂದದು ಸಾಧ್ಯವಾಗಲಿಲ್ಲ. ಬಹಳ ಅಸಹಿಷ್ಣುತೆಯಿಂದ 'ಶಿಕ್' ಎಂದು ಇನ್ನೊಂದು ಕಡೆಯ ಬಾಗಿಲು ತೆರೆಯಲು ಪ್ರಯತ್ನಿಸಿದಳು. ಅಷ್ಟರಲ್ಲಿ ಟೇಕ್ಸಿಯು ನಿಂತಿತು. ಲಲಿತೆಯು ಬಾಗಿಲು ತೆರೆಯಲು ಚಡಪಡಿಸುವುದನ್ನು ಡ್ರ್ಯಾವರನು ಕಂಡು. "ಏನಿಷ್ಟವಸರಪ್ಪ! ಸ್ವಾಮಿರೆಲ್ಲಿಯಾದರೂ ಓಡಿ ಹೋಗುವುದಿಲ್ಲ'' ಎಂದು ಬೆರಳುಗಳ ನಡುವೆಯಿದ್ದ ಬೀಡಿ ಕಡೆಯನ್ನೊಮ್ಮೆ 'ಹೂ' ಎಂದೆಳಯುವಷ್ಟರಲ್ಲಿ ನಾಗಿಯು, ''ಡ್ರ್ಯಾವರ್ರೇ! ಓ ಡ್ರ್ಯಾವರ್ರೇ!! ಸ್ವಲ್ಪ ಬಾಗಿಲು ತೆರೆಯಿರಪ್ಪ! ಮತ್ತೆ ಬೀಡಿ ಎಳೆಯಿರಿ! ನಿಮ್ಮ ಬಾಗಿಲೊಂದು ಎಂತಹದಪ್ಪ!" ಎಂದಳು. ಲಲಿತೆಯು ಎರಡೂ ಬಾಗಿಲನ್ನು ತೆರೆಯಲಾರದೆ 'ಶೂ' ಎಂದು ಸೀಟಿ

ಗೊರಗಿ ಬಿಟ್ಟಳು. ಡ್ರೈವರನು ಬೀಡಿಕಡೆ ಬಿಸಾಡಿ ಕ್ರೋಪನ್ನೊಮ್ಮೆ ಸರಿಮಾಡಿ ಮುಂಡನ್ನೆತ್ತಿ ತೊಡೆಗಳ ನಡುವೆ ಸಿಕ್ಕಿಸಿ ಬಂದು ಟಪ್ಪನೆ ಬಾಗಿಲು ತೆರೆದು ಲಲಿತೆಯನ್ನೇ ಕಣ್ಣಿಟ್ಟು ನೋಡುತ್ತಾ ನಿಂತನು. ಲಲಿತೆಯು ಕೂಡಲೆ ಹೊರಬಿದ್ದು ಮಠದೊಳಗೋಡಿದಳು. ನಾಗಿಯು ಅವಳನ್ನು ಹಿಂಬಾಲಿಸಿದಳು.

ಒಂದೇ ಒಂದು ಕ್ಷಣದಲ್ಲಿ ಲಲಿತೆಯು ಸ್ವಾಮಿಯ ಬೈಠಕುಖಾನೆಗೆ ಸರಿದಳು. ನಾಗಿಗೆ ಅವಳ ಬೆನ್ನು ಹಿಡಿದು ಹೋಗಲಾಗಲಿಲ್ಲ. ಒಳಗೆ ಸರಿದು ನೋಡುವಾಗ ಶಿವಾನಂದರೊಬ್ಬರೇ ಇದ್ದರು. ಮಗುವಿರಲಿಲ್ಲ. ಲಲಿತೆಯು ಒಂದು ಕ್ಷಣ ಸ್ತಂಭಿತಳಾಗಿ ನಿಂತುಬಿಟ್ಟಳು. ಅವಳ ಹೃದಯವು ತಪತಪನೆನ್ನುತ್ತಿತ್ತು. ಸರ್ವಾಂಗ ಬೆವರಿ ನೀರು ಹರಿಯುತ್ತಿತ್ತು. ಉತ್ತರಕ್ಷಣದಲ್ಲೇ ಮಂಚದ ಮೇಲೆ ಪದ್ಮಾಸನ ಹಾಕಿ ಕುಳಿತು ಚಿಂತಾನುಗ್ನರಾಗಿರುವ ಶಿವಾನಂದರ ಬಳಿಗೋಡಿ, ಅವರ ಕಾಲಿಗೆ ಬಿದ್ದು "ಮಗುವೆಲ್ಲಿ? ನನ್ನ ಮಗುವೆಲ್ಲಿ?" ಎಂದು ಕೂಗಿ ಬೋಧತಪ್ಪಿ ಬಿದ್ದು ಬಿಟ್ಟಳು. ಇಷ್ಟರಲ್ಲಿ ಶಿವಾನಂದರು ಮಗುವನ್ನು ಹಿಡಿದು ಮುದ್ದಾಡುತ್ತಿರಬೇಕೆಂದೇ ಕಲ್ಪಿಸಿ ಕೊಂಡು ಆ ಆನಂದದ ದೃಶ್ಯವನ್ನೊಮ್ಮೆ ನೋಡಬೇಕೆಂಬ ತವಕದಿಂದ ನಾಗಿಯು ಕೋಣೆಯೊಳಗೆ ಪ್ರವೇಶಿಸಿ ಮಗುವಿರದುದನ್ನು ಕಂಡು ತಬ್ಬಿಬ್ಬಾದಳು. "ಪರಾಕೆ, ಪರಾಕೆ! ಮಗುವೆಲ್ಲಿ? ಇದೇನು? ನನ್ನ ಲಲಿತೆಗೇನಾಯಿತು?" ಎಂದು ಓಡಿಹೋಗಿ ಲಲಿತೆಯನ್ನು ಹಿಡಿಯುವಷ್ಟರಲ್ಲಿ, ಶಿವಾನಂದರು ಕುತ್ತಿಗೆಯೊಳಗೆ ತಡೆಗಟ್ಟಲ್ಪಟ್ಟ ಮಾತುಗಳಿಂದ, "ನಾಗಿ, ನಾಗಿ! ಲಲಿತೆಗೇನೂ ಆಗಿಲ್ಲ. ಬೇಗ ಹೋಗಿ ಸ್ವಲ್ಪ ನೀರು ತಾ" ಎಂದರು. ನಾಗಿಯು ಗಡಿಬಿಡಿಯಿಂದ ಓಡಿಹೋಗಿ, ತುಂಗಮ್ಮ ಎಂಬ ಮಠದ ಅಜ್ಜಿಯೊಬ್ಬರು ಶುಭ್ರವಾಗಿ ತೊಳೆದು ನೀರು ತುಂಬಿಸಿಟ್ಟದ್ದ ತಂಬಿಗೆಯನ್ನು ಹೇಳದೆ ಕೇಳದೆ ಹಿಡಕೊಂಡು ಒಂದೇ ಉಸಿರಿನಿಂದ ಬೈಠಕು ಕೋಣೆಗೆ ಧಾವಿಸಿಬಂದಳು. "ಹೆ! ಹೆ!! ನನ್ನ ತಂಬಿಗೆ ಅದು; ಎಲ್ಲಿಗೊಯ್ಯುತ್ತಿ? ನನಗೀಗ ಬೇಕದು" ಎಂದು ತುಂಗಮ್ಮನು ಬಹಳ ಸಿಟ್ಟಿನಿಂದ ಬಾಗಿದ ಬೆನ್ನನೊಮ್ಮೆ ನೆಟ್ಟಗೆ ಮಾಡಿ ನಾಗಿಯನ್ನು ಮನಸೇಚ್ಛೆ ಬೈ

ಟ್ಟು! ಅವಳ ಬೆನ್ನು ಹಿಡಿದು ಸ್ವಾಮಿರ ಬೈಠಕು ಕೋಣೆಯ ಬಾಗಿಲವ
ರೆಗೂ ಹೋದಳು. ಆದರೆ ಒಳಪ್ರವೇಶಿಸಲು ಧೈರ್ಯ ಬರಲಿಲ್ಲ. "ಹೀಗೂ
ಉಂಟೆ ಪರಾಕೆ! ನಾನು ಮಡಿಕೊಂಡ ತಂದಿಟ್ಟೆ"....ಎನ್ನುವಷ್ಟರಲ್ಲಿ ಅವ
ಳ ಮುಖದ ಮೇಲೆಯೇ ಕೋಣೆಯ ಬಾಗಿಲು ಡಬ್ಬನೆ ಹಾಕಲ್ಪಟ್ಟಿತು.
"ಶಿವ! ಶಿವ!! ನನಗೇಕೆ ಸಾವು ಬರುವುದಿಲ್ಲಪ್ಪ!" ಎಂದು ತುಂಗಮ್ಮನು
ಹಣೆಗೆ ಬಡಕೊಂಡು ಬೈಠಕು ಕೋಣೆಯ ಬಾಗಿಲಿಂದ ದಡದಡನೆ ಇಳಿ
ದು ಹೋಗಿ ನಡೆದ ಸಂಗತಿಯನ್ನು ಸಿಕ್ಕಿ ಸಿಕ್ಕಿದವರೊಡನೆಲ್ಲಾ ಸಿಟ್ಟಿ
ನಿಂದ ಹೇಳಿ ನಾಗಿಯನ್ನು ಶಪಿಸಿದಳು.

ನಾಗಿಯು ಲಲಿತೆಯ ಮುಖದ ಮೇಲೆ ನೀರು ಚುಮುಕಿಸಿ ಸೆರ
ಗಿಂದೊರಸಿದಳು. ಶಿವಾನಂದರು ಹತ್ತಿರದಲ್ಲೇ ಲಲಿತೆಯನ್ನು ನೋಡುತ್ತಾ
ನಿಂತಿದ್ದರು. ನೋಡುತ್ತಿದ್ದಂತೆಯೇ ಅವರ ಕಣ್ಣಲ್ಲಿ ಅದೇಕೋ ನೀರು
ತುಂಬಿ ಬಂತು ಅದನ್ನವರು ಮುಖ ತಿರುಗಿಸಿ ಒರಸುವಷ್ಟರಲ್ಲಿ, "ಅದೋ
ಮಗು! ಮಗು!! ನನ್ನ ಮಗು!" ಎಂದು ಲಲಿತೆಯು ಎಚ್ಚತ್ತು,
"ಅಮ್ಮಾ, ಎಲ್ಲಿ? ನನ್ನ ಮಗುವೆಲ್ಲಿ? ಎಲ್ಲಿ ಹೋಯಿತು? ಯಾರು
ಕೊಂಡೊಯ್ದರು?" ಎಂದು ಜಗ್ಗನೆ ಎದ್ದುನಿಂತಳು. ಆಗ, "ಮಗುವೆ
ಲ್ಲಿದೆಯೆಂದು ದಯಮಾಡಿ ಹೇಳಬಾರದೆ ಪರಾಕೆ? ಯಾಕೆ ಸುಮ್ಮನಿರು
ವಿರಿ?" ಎಂದು ನಾಗಿಯು ಬೇಡಿಕೊಂಡಳು ಕಣ್ಣೀರಿಟ್ಟು. ಶಿವಾನಂದರು
ನಾಗಿ ಮತ್ತು ಲಲಿತೆಯರನ್ನೊಮ್ಮೆ ನೋಡಿದರು. ಆಮೇಲೆ ದೀರ್ಘ
ಶ್ವಾಸಬಿಟ್ಟು ಸುಮ್ಮನೆ ನಿಂತುಬಿಟ್ಟರು. ಅವರ ಕಣ್ಣುಗಳಲ್ಲಿಯೂ ಧಾರೆ
ಕಟ್ಟಿ ನೀರು ಹರಿಯತೊಡಗಿತು. ಎಷ್ಟೊಂದು ಕಟ್ಟಿಕೊಂಡರೂ ನಿಲ್ಲಲಾ
ರದದು. "ಪರಾಕೆ ಸತ್ಯ ಹೇಳಿ. ಮಗುವನ್ನು ನೀವಲ್ಲವೇ ತರಹೇಳಿದುದು
ಮೋಟಿರ್‌ಕಾರಿಗೆ' ಅದನ್ನಿಲ್ಲಿ ತರಲಿಲ್ಲವೆ? ನರಸಿಂಹಭಟ್ಟರೆಲ್ಲಿಹೋದರು?
ಮಗುವೇನಾಯಿತು? ಸಂಗತಿ ಏನೆಂದು ತಿಳಿಸಬಾರದೆ? ಯಾಕೆ ಕಣ್ಣೀ
ರಿಡುತ್ತಾ ನಿಂತಿರುವಿರಿ ಬುದ್ಧಿ?" ಎಂದು ನಾಗಿಯು ಪುನಃ ಕೇಳಿಕೊಂಡ
ಳು. ಶಿವಾನಂದರು ಮತ್ತೂ ಮೌನವನ್ನೇ ಧರಿಸಿದ್ದರು. ಇಷ್ಟರಲ್ಲಿ,
"ಪರಾಕೆ, ಪರಾಕೆ! ಬಾಗಿಲು ತೆರೆಯಿರಿ, ಕೆಲಸವೆಲ್ಲಾ ಸಾಂಗವಾಗಿ ನೆರ
ವೇರಿತು" ಎಂದು ನರಸಿಂಹನು ಬಾಗಿಲು ಬಡಿದನು." ನರಸಿಂಹನು

ಮಗುವನ್ನು ಹಿಡಕೊಂಡು ಬಂದನೆಂಬ ಉತ್ಸಾಹದಿಂದ ನಾಗಿಯು ಓಡಿ ಹೋಗಿ ಬಾಗಿಲು ತೆರೆದಳು. ಅವನು ಒಳಗೆ ಪ್ರವೇಶಿಸುವಾಗಲೆ, "ಶವ ಸಹ ಸಿಕ್ಕದಹಾಗೆ ಮಾಡಿದ್ದೇನೆ ಪರಾಕೆ" ಎಂದು ಹೇಳುವಷ್ಟರಲ್ಲಿ ನಾಗಿ ಲಲಿತೆಯರನ್ನು ಕಂಡು ಅವಕ್ಕಾದನು. "ಏನು? ಯಾವ ಶವ? ನನ್ನ ಕೂಸನ್ನು ಕೊಂದಿರೇ? ಅಯ್ಯೋ! ದೇವರೇ" ಎಂದು ನಾಗಿಯು ದೊಪ್ಪನೆ ನೆಲಕ್ಕೆ ಬಿದ್ದುಬಿಟ್ಟಳು. "ನರಸಿಂಹ, ಅದೋ ಅಲ್ಲಿ ನೀರಿದೆ ತಂಬಿಗೆಯಲ್ಲಿ ನಾಗಿಗೆ ಬೋಧಬರುವಂತೆ ಮಾಡು" ಎಂದು ಮಿಂಚುಬಡಿದಂತೆ ನಿಂತಿರುವ ಲಲಿತೆಯ ಬಳಿಗೆ ಸರಿಸು "ಲಲಿತ! ಲಲಿತ!" ಎಂದು ಗದ್ಗದ ಕಂಠದಿಂದ ಕರೆದು ಅವಳ ಕೈ ಹಿಡಿದರು. ಶಿವಾನಂದರ ಸ್ಪರ್ಶ ಮಾತ್ರದಿಂದ ಲಲಿತೆಯಲ್ಲಿ ಒಂದು ಕ್ಷಣ ನಿಂತುಹೋದಂತಿದ್ದ ರಕ್ತ ಚಲನೆಯು ಒಂದೇ ಸವನೆ ಪ್ರವಹಿಸಿದಂತಾಯಿತು. ಶಿವಾನಂದರು ಕಿರುಬೆರಳಿಂದ ದೂಡಿದರೆ ಬೀಳುವ ಅವಳು, ಅದಾವ ಶಕ್ತಿಯಿಂದಲೋ ಅವರು ಹಿಡಿದ ಕೈಬಿಡಿಸಿ ಅವರ ಕುತ್ತಿಗೆ ಹಿಡಿದೊತ್ತಿ "ನರಪಿಶಾಚಿ! ಎಲ್ಲಿ? ನನ್ನ ಮಗು ಎಲ್ಲಿ? ಹೇಳು ಬೇಗ ಹೇಳು! ಇಲ್ಲವಾದರೆ ಕತ್ತು ಹಿಸುಕಿ ಕೊಲ್ಲುವೆನು" ಎಂದು ಸಿಂಹಿಣಿಯಂತೆ ಗರ್ಜಿಸಿದಳು "ಹೆ-ಹೆ-ಹೇಳು-ಹೊ-ಹೊ" ಎಂದು ಸ್ವಾಮಿರು ಚೀರಿದರು. ಲಲಿತೆಯ ಹಿಡಿತಕ್ಕೆ ಸಿಕ್ಕಿ ಶಿವಾನಂದರು ಕಂಗೆಟ್ಟರು ದೊಡ್ಡಜಟ್ಟಿಯಂತಿಪ್ಪ ಅವರಿಗೆ ಲಲಿತೆಯಂತಹ ಅಬಲೆಯರು ತೃಣ ಸಮಾನ. ಆದರೆ ಈ ಸಂದರ್ಭದಲ್ಲಿ ಅದಾವ ವಿಚಿತ್ರ ಶಕ್ತಿಯಿಂದಲೋ ಲಲಿತೆಯು ಅವರನ್ನು ಉಸಿರಾಡದಂತೆ ಮಾಡಿಬಿಟ್ಟಳು. ಅಷ್ಟರಲ್ಲಿ ನರಸಿಂಹನು, "ಪರಾಕೆ ಏನಾಯಿತು! ಏನಾಯಿತು!!" ಎಂದು ಓಡಿ ಬಂದು ಲಲಿತೆಯು ಶಿವಾನಂದರ ಕುತ್ತಿಗೆಯನ್ನು ಬಿಗಿಹಿಡಿದುದನ್ನು ನೋಡಿ ಒಂದೇ ಸವನೆ ಅವಳ ಮೇಲೆ ಹಾರಿ ಕೈಬಿಡಿಸಲೆತ್ನಿಸಿದನು. ಆಗ ಮಗುವನ್ನು ಕೊಂದವನು ನರಸಿಂಹನೆಂದು ಲಲಿತೆಗೆ ಫಕ್ಕನೆ ಹೊಳೆದು ಅವಳ ಸಿಟ್ಟೆಲ್ಲಾ ಅವನಮೇಲೆ ಕೇಂದ್ರೀಕೃತವಾಯಿತು. ಅವಳು ಶಿವಾನಂದರ ಕುತ್ತಿಗೆಬಿಟ್ಟು "ಮಗುವನ್ನೇನು ಮಾಡಿದೆ? ಕೊಂದು ಹಾಕಿದೆಯಾ ರಾಕ್ಷಸ?" ಎಂದು ನರಸಿಂಹನ ಕುತ್ತಿಗೆ ಹಿಡಿದು ದೂಡಿಬಿಟ್ಟಳು. ಅವನು ಡಬ್ಬನೆ ನೆಲಕ್ಕೆ ಬಿದ್ದು ತಲೆ ಗೋಡೆಗೆ ತಾಗಿ

ತಲೆತಿರುಗಿ ಬಿದ್ದುಬಿಟ್ಟನು. ಆಗ ಲಲಿತೆಯ ದೃಷ್ಟಿಯು ಬೋಧತಪ್ಪಿ ಬಿದ್ದಿರುವ ನಾಗಿಯ ಮೇಲೆ ಬಿತ್ತು. ಆವಳು ಕೂಡಲೆ ನಾಗಿಯ ಬಳಿಗೆ ಸರಿದು ಅವಳ ಕೈಗಳನ್ನು ಹಿಡಿದು ಭರದಿಂದ ಕುಲುಕಿಸಿ, "ಅಮ್ಮಾ! ಅಮ್ಮಾ!! ಅಮ್ಮಾ!!!" ಎಂದು ಕೂಗಿ ಕರೆದಳು. ಆಗ ನಾಗಿಗೂ ಎಚ್ಚರವಾಗಿ ಅವಳು ಎದ್ದು ಆವೇಗದಿಂದ ಲಲಿತೆಯನ್ನು ಬಿಗಿದಪ್ಪಿ, "ಮಗೂ ಲಲಿತ, ನೀನು ಮೊದಲೇ 'ನನ್ನನ್ನಾನರಕಕ್ಕೆಳೆಯ ಬೇಡೆಂ'ದು ಬಗೆಬಗೆಯಿಂದ ಬೇಡಿಕೊಂಡೆ. 'ಅತಿ ಆಶೆ ಗತಿಗೇಡು ಮಾಡಿಕೊಳ್ಳಬೇಡಮ್ಮಾ!' ಎಂದು ಎಚ್ಚರಿಸಿದೆ. ಆದರೆ ಮಗು, ನಿನ್ನ ಮಾತಿಗೆ ನಾನು ಒಂದಿಷ್ಟು ಗಮನವೀಯದೆ ನನ್ನಿಚ್ಛಾನುಸಾರ ನಡೆದು ನಿನ್ನ ಜೀವನ ಸುಖವನ್ನು ಮಣ್ಣುಗೂಡಿಸಿದೆ. ನಾನು ನಿನ್ನ ಮಾತೆ ಯಲ್ಲ, ಘಾತಕಿ. ಆಹ, ಆ ಎಳೆ ಕೂಸನ್ನು ಕೊಲ್ಲಲು ನರಸಿಂಹಭಟ್ಟರಿಗೆ ಮನಸ್ಸಾದರೂ ಹೇಗೆ ಬಂತಪ್ಪ! ಎಷ್ಟೊಂದು ಚಂದವಾಗಿದ್ದಿತು ಕೂಸು! ಆಹಹ......." ಎಂದು ಮುಂದೆ ಮಾತಾಡಲಾರದೆ ಗೋಳಿಟ್ಟಳು. ಆಗ ಲಲಿತೆಯು ಗಟ್ಟಿ ಮನಸ್ಸುಮಾಡಿ, "ನಾವು ಮಾಡಿದ ಕರ್ಮಕ್ಕೆ ಅನ್ಯರನ್ನು ದೂರಿ ಫಲವೇನಮ್ಮಾ? ನಡೆ ! ಇಲ್ಲಿಂದೊಮ್ಮೆ ತೊಲಗುವ" ಎಂದು ಇಬ್ಬರೂ ಹೊರಡಲುದ್ಯುಕ್ತರಾದರು. ಅಷ್ಟರವರೆಗೂ ಗೊಂಬೆ ಯಂತೆ ನಿಂತಿದ್ದ ಶಿವಾನಂದರು, "ನಿಲ್ಲಿರಿ, ಮೋಟಾರ್‌ಕಾರಿನಲ್ಲಿ ಹೋಗಿರಿ" ಎಂದರು. "ನೀವು ನಮಗೆ ಈವರೆಗೆ ಮಾಡಿದ ಉಪಕಾರವೇ ಸಾಕು ಪರಾಕೆ! ನಮಗೆ ಮೋಟಾರ್ ಕಾರೇಕೆ? ನಡೆದೇ ಹೋಗುತ್ತೇವೆ." ಎಂದಳು ನಾಗಿ. ಆಗ ಶಿವಾನಂದರು "ನಿಲ್ಲಿರಿ, ನಾನು ಹೇಳುವು ದನ್ನೆಲ್ಲಾ ಕೇಳಿ ಮತ್ತೆ ಹೋಗಿರಿ." ಎಂದರು. ನಾಗಿ ಲಲಿತೆಯರು ಮಾತಾಡದೆ ಸುಮ್ಮನೆ ನಿಂತರು. ಶಿವಾನಂದರ ಕಂಗಳಲ್ಲಿ ಪುನಃ ನೀರು ತುಂಬಿಬಂತು. ಅವರು "ನಾಗಿ, ಎಲ್ಲವನ್ನೂ ಮಾಡಿದವನು ನಾನು" ಹೃದಯವನ್ನು ಕಲ್ಲುಮಾಡಿ ಲಲಿತೆಯ ಮಗುವನ್ನು ಕೊಲ್ಲಿಸಿದವನು ನಾನು! ನರಸಿಂಹನು ಕೇವಲ ನನ್ನ ಹಸ್ತಕ ಈ ಪಾಪ ಕೃತ್ಯಗಳ ಹೊಣೆಗಾರಿಕೆಯೆಲ್ಲಾ ನನ್ನದು. ನಾಗಿ, ನಾನೂ ಮಾನವನು. ನನಗೂ ಹೃದಯವಿದೆ; ಕರುಣೆಯು ಕರುಳಿದೆ. ನನ್ನ ವೀರ್ಯಕ್ಕೇನೆ

ಹುಟ್ಟಿ ನನ್ನ ಪ್ರತಿ ಮೂರ್ತಿಯಾದ ಹಸುಗೂಸನ್ನು ಕೊಲೆಮಾಡಿಸು ವಾಗ ನನ್ನ ಹೃದಯವು ಅದೆಷ್ಟು ವೇದನೆಗೊಳಗಾಗಿದ್ದಿತೆಂಬುದನ್ನು ನನ್ನ ಹೊರತು ಇನ್ನಾರೂ ಅರಿಯಲಾರರು. ಆದರೆ ನನ್ನೀ ನಾಟಕವನ್ನು ಇಷ್ಟರವರೆಗೆ ನಡಿಸಿ, ಈ ಅಧಿಕಾರ ಸ್ಥಾನ—ಮಾನದ ಸವಿಯುಂಡು ಕೊಬ್ಬಿ ಇನ್ನು ಅನ್ಯರೀತಿಯ ಜೀವನವಾರಂಭಿಸುವುದಾದರೂ ಹೇಗೆ? ನಾನು ದೀರ್ಘಕಾಲ ಯೋಚಿಸಿ, ಹಲವು ದಿನಗಳ ತೀವ್ರ ವೇದನೆಯನ್ನ ನುಭವಿಸಿ, ಏನೇ ಆಗಲಿ ಇದೇ ನಾಟಕವನ್ನು ಕೊನೆಯಂಕದವರೆಗೆ ನಡೆಸುವ ನಿರ್ಧಾರ ಮಾಡಿರುವೆನು. ಅದಕ್ಕೆ ಅಡ್ಡಿ ಬಂದಿರುವ ಲಲಿತೆಯ ಕೂಸನ್ನು ಕೊಲ್ಲಿಸುವ ಕಟುಕ ಹೃದಯವುಳ್ಳವನಾದೆನು. ನನ್ನೀ ನಾಟಕದಲ್ಲಿ ನೀವೂ ಭಾಗಿಗಳಾಗಿ ನನ್ನೊಂದಿಗೆ ಬಹಳ ಮುಂದು ವರಿದಿರುವಿರಿ. ಇನ್ನು ನನ್ನನ್ನು ಕೈಬಿಡುವುದರಿಂದ ಫಲವಿಲ್ಲ. ನಾಗಿ, ನನ್ನ ಪ್ಲೇನೆಲ್ಲಾ ಆಕಾಶ ಕುಸುಮವಾಗಿರುವುದು. ಆದುದರಿಂದ ನಿನಗೆ ಕೊಟ್ಟ ಮಾತನ್ನು ನಡೆಸಲು ಸಾಧ್ಯವಾಗಿರುವುದಿಲ್ಲ. ಇನ್ನಾದರೂ ನನ್ನಿಂದ ಸಾಧ್ಯವಾದ ಸಹಾಯ ಮಾಡುವೆನು. ನೀವು ಈ ಸಂಗತಿ ಯನ್ನೆಲ್ಲಾ ನೀವು ರಹಸ್ಯವಾಗಿರಿಸಬೇಕು" ಎನ್ನುವಷ್ಟರಲ್ಲಿ "ಹಾ....!" ಎಂದು ಆಕಳಿಸಿ ನರಸಿಂಹನು ಮೈಕೊಡಹಿ ಎದ್ದು ನಿಂತನು. "ನರಸಿಂಹ, ಇವರನ್ನು ಮೋಟರ್ ಕಾರಿನಲ್ಲಿ ಅವರ ಮನೆಯಲ್ಲಿ ಬಿಟ್ಟು ಬಾ" ಎಂದರು ಶಿವಾನಂದರು. ನರಸಿಂಹನು ಚಕಿತನಾಗಿ ಒಂದು ಕ್ಷಣ ನಾಗಿ ಲಲಿತೆಯರನ್ನು ಕಣ್ಬಿಟ್ಟು ನೋಡುತ್ತಾ ನಿಂತು ಆ ಮೇಲೆ. "ಬನ್ನಿ ನಾಗಿ ಹೋಗುವ" ಎಂದು ಮುಂದಾಗಿ ಹೊರಟನು. ಅವನ ಹಿಂದೆ ನಾಗಿ ಲಲಿತೆಯರು ಹೊರಟುಹೋದರು.

ಅಧ್ಯಾಯ ೯

"ಮಗು, ಲಲಿತ! ನಾನಿನ್ನು ಬದುಕುವ ಆಶೆಯಿಲ್ಲ ನಿನ್ನ ಗತಿಯೇನು?"

ನಾಗಿ ಲಲಿತೆಯರನ್ನು ಮಠಕ್ಕೆ ಬರಹೇಳಿ ನರಸಿಂಹನು ಮೋಟರ್ ಕಾರಿಗೆ ಧಾವಿಸುನಷ್ಟರಲ್ಲಿ ಮಗುವು ಅಳಲಾರಂಭಿಸಿತ್ತು. ಅವನು ವಸ್ತ್ರದಿಂದ ಅದರ ಬಾಯಿ ಒತ್ತಿಟ್ಟು ಮೋಟರ್ ಕಾರನ್ನು ಶಿವಪುರದಿಂದ ದಕ್ಷಿಣಕ್ಕೋಡಿಸ ಹೇಳಿದನು. ಮಗುವು ಒದ್ದಾಡಲಾರಂಭಿಸಿತು. ನರಸಿಂಹನು ಅದರ ಮೂಗನ್ನೂ ಬಾಯಿಯನ್ನೂ ವಸ್ತ್ರದಿಂದ ಮತ್ತಷ್ಟು ಬಲವಾಗಿ ಒತ್ತಿಟ್ಟನು. ಈ ಪೈಶಾಚಿಕ ಒತ್ತಾಟದೆಡೆಯಿಂದ ಮಗುವಿನ ಕೂಗು ಒಂದೆರಡು ಸಲ ಹೊರ ನುಸುಳಿ ತೀವ್ರ ವೇಗದಿಂದೋಡುವ ಮೋಟರ್ ಕಾರಿನ ಶಬ್ದದೊಂದಿಗೆ ಸೇರಿಹೋಯಿತು. ಆಗ ನರಸಿಂಹನು ತನ್ನ ಒತ್ತಾಟವನ್ನು ಮತ್ತಷ್ಟು ಬಲಪಡಿಸಿದನು. ಶಿವಪುರಗಿಂದ ಸುಮಾರು ನಾಲ್ಕು ಮೈಲು ದಕ್ಷಿಣದ ಹೊಳೆಯನ್ನು ಸಮೀಪಿಸುತ್ತಲೇ ನರಸಿಂಹನು ಮೋಟರ್ ಕಾರನ್ನು ನಿಲ್ಲಿಸ ಹೇಳಿದನು. ಅಷ್ಟರಲ್ಲಿ ಮಗುವಿನ ಪ್ರಾಣವು ಹಾರಿಹೋಗಿತ್ತು. ನರಸಿಂಹನು ಮೆಲ್ಲಮೆಲ್ಲಗೆ ತನ್ನ ಒತ್ತಾಟವನ್ನು ಸಡಿಲುಮಾಡಿ ಅದನ್ನು ದೃಢಪಡಿಸಿಕೊಂಡಿದ್ದನು. ಮೋಟರ್ ನಿಂತೊಡನೆಯೇ ಅವನು ಮಗುವನ್ನು ವಸ್ತ್ರದ ಹೊದಿಕೆಯೊಳಗೆ ಹಿಡಿದುಕೊಂಡು, "ಈಗ ಬರುತ್ತೇನೆ. ಈ ಮಗುವನ್ನು ಓ ಆ ಮನೆಗೆ ಕೊಟ್ಟುಬರುತ್ತೇನೆ" ಎಂದು ಹೇಳಿ ಸುತ್ತಲೂ ಎಚ್ಚರದಿಂದ ನೋಡುತ್ತಾ ರಸ್ತೆ ಬದಿಯ ತೆಂಗಿನ ತೋಪಿನೊಳಗೆ ಪ್ರವೇಶಿಸಿದನು. ಡ್ರೈವರನು ಕಣ್ಮರೆಯಾದೊಡನೆಯೇ ಒಂದೇ ಸವನೆ ನದಿಯ ಕಡೆಗೆ ಧಾವಿಸಿ ಮಗುವಿನ ಶವವನ್ನು ಹೊಳೆಗೆ ಬಿಸಾಡಿ ಒಂದು ಕ್ಷಣವೂ ನಿಲ್ಲದೆ ಹಿಂತಿರುಗಿದನು. ಹಿಂತಿರುಗಿದಾಗ ಅವನ ಶರೀರವು ಕಂಪಿಸುತ್ತಿತ್ತು. ಶಕ್ತಿಯು ಕುಂದಿಹೋಗಿತ್ತು. ಅವನು ಬಹಳ ಪ್ರಯತ್ನಪಟ್ಟು ಹೆಜ್ಜೆ ಹಾಕಿಕೊಂಡು ಮುನ್ನಡೆದನು. ಇಡೀ ಶರೀರವು ಬೆವರಿ ನೀರಿಳಿದು ಹೋಗಿತ್ತು. ಅವನು, ತಾನು ಮಾಡಿದ ಘೋರ ಪಾಪ ಪ್ರೇತವು

ತನ್ನ ಬೆಂಬತ್ತಿಬರುವುದೊ ಎಂದು ಭೀತಿಗೊಂಡವನಂತೆ ನದಿಯು ಕಣ್ಮರೆಯಾಗುವ ವರೆಗೆ ಹಿಂದೆ ನೋಡುತ್ತ ನೋಡುತ್ತ ಸರಿಯುತ್ತಿದ್ದನು. ಆ ಮೇಲೆ ಒಂದಿಷ್ಟು ಧೈರ್ಯಗೊಂಡು ತೋಟದಲ್ಲೊಂದೆಡೆ ನಿಂತು, ಎಗೆ, ಪಣೆ, ಕುತ್ತಿಗೆಗಳ ಬೆವರನ್ನೆಲ್ಲಾ ಒರಸಿ ಇನ್ನೇನೂ ಗಾಬರಿಯಿಲ್ಲೆಂಬ ಸಮಾಧಾನದಿಂದ ಮೋಟರ್ ಕಾರಿನ ಬಳಿಗೆ ನಡೆದು ಬಾಗಿಲು ತೆರೆದು ಕೂತು "ಹೂಂ, ಹೋಗುವ" ಎಂದನು. ಆಗ ಡ್ರ್ಯಾವರನು, "ಮಗುವನ್ನೇನು ಮಾಡಿದಿರಿ? ಹ್ಯೊಗೆಯಲ್ಲಿ ಹೂಳಿದಿರೋ, ಹೊಳೆಗೆ ಬಿಸಾಡಿದಿರೋ?" ಎಂದು ಪ್ರಶ್ನಿಸಲು ನರಸಿಂಹನು ಅವಕ್ಕಾಗಿಜೋದನು. ತಾನು ಯಾರಿಗೂ ತಿಳಿಯದಂತೆ ಮಾಡಿದ ಕೆಲಸ ಈ ಡ್ರ್ಯಾವರಿಗೆ ತಿಳಿದಬಗೆ ಹೇಗೆಂದು ಅವನು ವಿಸ್ಮಯಗೊಂಡು ಯೋಚಿಸಹತ್ತಿದನು. ಆಗ, ಪುನಃ ಡ್ರ್ಯಾವರನು, "ಹೊಳೆಗೆ ಬಿಸಾಡಿದಿರೆಂದು ಕಾಣುತ್ತದೆ ಅಲ್ಲವಾದರೆ ಇಷ್ಟು ಬೇಗ ಬರುವುದು ಹೇಗೆ?" ಎಂದು ಹೇಳಿ ಭರ್ರನೆ ಮೋಟರ್ ಚಾಲುಮಾಡಿದನು. ನರಸಿಂಹನು ಚಿಂತಾಮುಗ್ನನಾಗಿ ಸುಮ್ಮನೆ ಕುಳಿತುಬಿಟ್ಟನು.

ಜೀವನದ ಮೂಲಾಧಾರವೇ ಆಶೆ. ಆದುದರಿಂದಲೇ ಪ್ರಾಣ ಹೋಗುವುದು ಮೊದಲು, ಆಶೆ ಅನಂತರವೆಂದು ಹೇಳುವುದು. ಈ ಆಶಾ ಬಲದಿಂದಲೇ ಎಷ್ಟೊಂದು ಜೀವಿಗಳು ಜೀವನ್ಮೃತಾವಸ್ಥೆಯಲ್ಲಿ ನರಳಿಕೊಂಡಿರುವುದಿಲ್ಲ! ಆ ಆಧಾರವೊಂದು ತಪ್ಪಿತೆಂದರೆ ಎಂತಹ ಸುಖ ವೈಭವದ ಜೀವನವಾದರೂ ಕುಸಿದುಬೀಳುವುದಿಲ್ಲ! ಯಾವುದಾನ ರೊಂದು ವಿಷಯದಲ್ಲಿ ವಿಪರೀತ ಆಶೆಕಟ್ಟಿಕೊಂಡಿದ್ದವರಿಗೆ ಒಮ್ಮೆಯೇ ನಿರಾಶೆಯುಂಟಾಗುವುದೆಂದರೆ ಸಂಪೂರ್ಣ ಶಕ್ತಿಯಿಂದೋಡುವ ಇಂಜಿನನ್ನು ಹಠಾತ್ತಾಗಿ ನಿಲ್ಲಿಸಿಬಿಟ್ಟಂತೆ. ಇಂಜಿನು ನಿಂತುಹೋಗುವುದಲ್ಲದೆ ಅದರ ಸೂಕ್ಷ್ಮಾಂಗಗಳೆಲ್ಲಾ ಮುರಿದು ಹೋಗುವವು. ನಾಗಿಗೆ ಇದೇ ರೀತಿಯಾಗಿ ಹೋಯಿತು. ಶಿವಾನಂದರು ಮನೆ ಮತ್ತು ಆಸ್ತಿ ಮಾಡಿಕೊಡುವುದಂತಿರಲಿ, ತನ್ನ ಹಣವನ್ನೇ ಉಪಾಯದಿಂದ ಅಪಹರಿಸಿದಾಗಲೇ ಅವಳ ಜೀವನವೃಕ್ಷದ ತಾಯಿಬೇರು ಮುರಿದಿತ್ತು. ಆ ಮೇಲೆ ಲಲಿತೆಯ ಮಗುವನ್ನು ಕೊಲ್ಲಿಸಿದಾಗ ಅವಳ ಜೀವನವನ್ನು

ಸಂಪೂರ್ಣವಾಗಿ ಕಾರ್ಮುಗಿಲು ಆವರಿಸಿತು. ತುಸು ಬೆಳಕನ್ನೀಯುತ್ತಿದ್ದ ಆ ಆಶಾ ಕಿರಣವೂ ಅದೃಶ್ಯವಾಗಿಬಿಟ್ಟಿತು ಅವಳು ಜೀವನಕ್ಕಿಂತ ಸಾವು ಮೇಲೆಂದು ಬಗೆದು ಕೊರಗಿ ಕರಗಹತ್ತಿದಳು. ಅವಳ ಶಕ್ತಿಯೆಲ್ಲಾ ಸಂಪೂರ್ಣ ಕುಂದಿಹೋಯಿತು, ಆದರೆ ಲಲಿತೆಯ ಎದುರಲ್ಲಿ ಅವಳು ತನ್ನ ಕೊರಗನ್ನೊಂದಿಷ್ಟೂ ತೋರಿಸದೆ ಸಮಾಧಾನ ಚಿತ್ತಳಂತೆ ನಟಿಸುತ್ತಿದ್ದಳು. ಲಲಿತೆಯಾದರೋ ಹೃದಯರಹಿತ ಯಂತ್ರದಂತೆ ನಡೆಯುತ್ತಿದ್ದಳು. ಯಾವುದರ ಗೊಡವೆಯೂ ಅವಳಿಗಿರಲಿಲ್ಲ. ಅವಳ ಚಿಂತೆಯು ಅಷ್ಟೊಂದು ಮಿತಿಮೀರಿದ್ದಿತು. ಅವಳ ಹೃದಯವನ್ನೇ ಕಲ್ಲುಮಾಡಿದ್ದಿತದು. ಅವಳ ಬುದ್ಧಿಯನ್ನು ಮಂದಗೊಳಿಸಿತ್ತು. ಕೂತಲ್ಲಿಂದ ಏಳಲು ನಾಗಿಯು ಒಂದು ಹತ್ತುಸಲ ಕರೆಯಬೇಕಿತ್ತು. ಒಂದೆಡೆ ನೋಡುತ್ತಾ ನಿಂತುಬಿಟ್ಟರೆ ನಾಗಿಯು ಮೈ ಕುಲುಕಿಸಿ ಕೈ ಹಿಡಿದು ಊಟಕ್ಕೋ ಮಲಗಲಿಕ್ಕೋ ಕರೆದೊಯ್ಯಬೇಕಿತ್ತು. ಮಲಗಿದವಳನ್ನು ಎಬ್ಬಿಸಲು ನಾಗಿಗೆ ಬಹಳ ಪ್ರಯಾಸವಾಗುತ್ತಿತ್ತು. ಇಂತಹ ಪರಿಸ್ಥಿತಿಯಲ್ಲಿಯೂ ಲಲಿತೆಯನ್ನು ಶಿವಾನಂದರು ಆಗಾಗ ಮೋಟಾರ್‌ಕಾರು ಕಳುಹಿಸಿ ಮಠಕ್ಕೆ ಕರೆಸುವುದನ್ನು ನಿಲ್ಲಿಸುತ್ತಿರಲಿಲ್ಲ. ನಾಗಿಯು. ಅವಳಿಗೆ ಸೌಖ್ಯವಿಲ್ಲ, ಕೊಡದೆಂದರೆ ಕೇಳುವವರಾರು? ಕಾಮೋದ್ರಿಕ್ತ ಮಾನವನು ಪ್ರತ್ಯಕ್ಷ ಪಿಶಾಚಿಯು. ಎಂತಹ ಅತ್ಯಾಚಾರಕ್ಕೂ, ಘೋರ ಕೃತ್ಯಕ್ಕೂ ಒಂದಿಷ್ಟು ಹೇಸನವನು, ಕಾಮದ ಹುಚ್ಚಿಗಿಂತ ಘೋರವಾದುದಿನ್ನಾವುದೂ ಇರಲಾರದು ಅಂತೆಯೇ ಶಿವಾನಂದರು ತನ್ನ ಪಾಶವಿಕ ಕಾಮತೃಪ್ತಿಯ ಕೇವಲ ಒಂದು ಯಂತ್ರದಂತೆ ಲಲಿತೆಯನ್ನು ಉಪಯೋಗಿಸುತ್ತಿದ್ದರು.

ನಾಗಿಯು ತನ್ನ ದಾರುಣ ದುಃಖವನ್ನೆಲ್ಲಾ ಒಳಗೊಳಗೇನೇ ನುಂಗಿ ಸೊರಗುತ್ತಿದ್ದಳು. ಚಿಂತಾಕೀಟವು ಅವಳ ಹೃಯವನ್ನು ಕೊರೆಕೊರೆದು ತಿಂದು ಬರಿದು ಮಾಡಿತು ಬೇಗನೆ ತನ್ನ ಸಾವು ನಿಶ್ಚಯವೆಂದವಳು ನಿರ್ಧರಿಸಿಕೊಂಡಳು. ಅವಳಿಗೆ ಕೂತರೆ ಥಕ್ಕನೆ ಏಳಲಾಗುತ್ತಿದ್ದಿಲ್ಲ. ಎದ್ದಾಗ ಗಿರ್ರನೆ ತಲೆತಿರುಗುತ್ತಿತ್ತು. ಜೀವ ಸಂಕಟವಾಗುತ್ತಿತ್ತು, ಕೈಕಾಲು ನಡುಗುತ್ತಿತ್ತು. ತಾನು ಸತ್ತರೆ

ಲಲಿತೆಗೆ ಗತಿಯಿಲ್ಲೆಂಬ ತಳಮಳದಿಂದ ಅವಳು ಆದಷ್ಟು ದಿನದೂಡುವ ನಿರ್ಧಾರದಿಂದಿದ್ದಳು. ಆದರೆ ಅವಳ ಈ ತಲ್ಲಣವು ಎಷ್ಟೊಂದು ಹೆಚ್ಚಿತೋ ಅಷ್ಟು ವೇಗವಾಗಿ ಅವಳ ಶಕ್ತಿಯು ಕ್ಷಯಿಸಹತ್ತಿತ್ತು. ಕಡೆಗೆ ಅವಳು ಜ್ವರಪೀಡಿತಳಾಗಿ ಹಾಸಿಗೆ ಹಿಡಿದಳು.

ನಾಗಿಗೆ ಜ್ವರವು ವಿಶೇಷವಾಯಿತು. ಶಿವಾನಂದರು ಡಾಕ್ಟರ್ ಗಂಗಾಧರ ರಾಯರನ್ನು ಚಿಕಿತ್ಸೆಗಾಗಿ ಕಳುಹಿಸಿದರು. ಅವರು ಪರೀಕ್ಷಿಸಿ ಪ್ರಯೋಜನವಿಲ್ಲೆಂದು ಹೇಳಿದರು. ಲಲಿತೆಯು ರಾತ್ರಿಹಗಲು ತಾಯಿಯ ಕಾಲ ಬಳಿಯಲ್ಲಿಯೇ ಮೌನವಾಗಿ ಕುಳಿತು ಕಾಲಕಳೆಯುತ್ತಿದ್ದಳು. ಪಿಟ್ಟೆಂದು ಮಾತಾಡದೆ ಡಾಕ್ಟರ್ ಹೇಳಿದಂತೆ ಔಷಧಿಯನ್ನೂ ಬಾಯಾರಿಕೆಗೆ ಬಿಸಿನೀರನ್ನೂ ಕೊಡುತ್ತಿದ್ದಳು. ನಾಗಿಯನ್ನು ಉಪಚರಿಸಲು ಶಿವಾನಂದರು ಮಠದಿಂದೊಂದು ಹೆಂಗಸನ್ನು ಕಳುಹಿಸಿದ್ದರೂ ಆ ಹೆಂಗಸು, ನಾಗಿ ಲಲಿತೆಯರ ಕೆಲಸಮಾಡುವುದೇ ತನಗೆ ಅಪಮಾನವೆಂಬ ಮನೋವೃತ್ತಿಯಿಂದ ಸ್ವಾಮಿರು ಕಳುಹಿಸಿದುದಕ್ಕಾಗಿ ಕೆಲಸ ಮಾಡುವವಳಂತೆ ಮಾತ್ರ ನಟಿಸುತ್ತಿದ್ದಳು, ರಾತ್ರಿ ಎಂಟು ಘಂಟೆಗೆ ಮಲಗಿದರೆ ಏಳುವುದು ಬೆಳಿಗ್ಗೆ 7 ಘಂಟೆಗೆ ಹೀಗಾಗಿ ನಾಗಿಯ ಔಷಧೋಪಚಾರದ ಜವಾಬ್ದಾರಿಯೆಲ್ಲಾ ಲಲಿತೆಯ ಮೇಲೆಯೇ ಬಿದ್ದಿತು. ಅದನ್ನವಳು ಯಾಂತ್ರಿಕವಾಗಿ ಮಾಡುತ್ತಿದ್ದಳು.

ಸುಮಾರು 11 ಘಂಟೆ ರಾತ್ರಿಯಾಗಿರಬಹುದು, ನಾಗಿಯು ಕಾಲಬುಡದಲ್ಲಿ ಕುಳಿತಿದ್ದ ಲಲಿತೆಯನ್ನು ಕಣ್ಣುಕಣ್ಣು ನೋಡಹತ್ತಿದಳು. ನೋಡುತ್ತಿದ್ದಂತೆಯೇ ಕಡೆ ಕಣ್ಣಲ್ಲಿ ನೀರುಹರಿಯತೊಡಗಿತು "ಮಗು ಲಲಿತ ಹೋಗು ಮಲಗು" ಎಂದಳು ಕ್ಷೀಣ ಸ್ವರದಿಂದ ಲಲಿತೆಯು ಕಣ್ಣೆತ್ತಿ ನಾಗಿಯ ಮುಖ ನೋಡಿದಳು. ಅವಳು ಕಣ್ಣೀರಿಳಿಸುವುದನ್ನು ಕಂಡು ಒಣಗಿ ಗಟ್ಟಿಕಟ್ಟಿ ಹೋಗಿದ್ದ ಅವಳ ಹೃದಯವು ಒಮ್ಮೆಯೇ ಕರಗಿ ಹೋಯಿತು. ಅವಳು ಆವೇಗದಿಂದ ನಾಗಿಯ ತಲೆಯ ಕಡೆಗೆ ಸರಿದು ಸೆರಗಿಂದ ಅವಳ ಕಣ್ಣೀರೊರಸಿ, "ಬೇಡಮ್ಮಾ ದುಃಖಿಸಬೇಡ! ಕಾಯಿಲೆ ಮತ್ತಷ್ಟು ಹೆಚ್ಚಾದೀತು!'' ಎಂದು ಗದ್ಗದಿತಕಂಠದಿಂದ ಬೇಡಿಕೊಂಡಳು ಆಗ ನಾಗಿಯ ದುಃಖವು ಇಮ್ಮಡಿಯಾಯಿತು. ಅವಳು

'ಮಗು ಲಲಿತ! ನಾನಿನ್ನು ಬದುಕುವ ಆಶೆಯಿಲ್ಲ. ನಿನ್ನ ಗತಿಯೇನು"? ಎಂದು ಹೇಳಿ ಬಾಯ್ಬಿಟ್ಟು ಅತ್ತುಬಿಟ್ಟಳು. ಲಲಿತೆಯೂ ನಾಗಿಯ ಮುಖಕ್ಕೆ ಮುಖವಿಟ್ಟು ಅತ್ತಳು ತಾಯಿಮಗಳಿಬ್ಬರೂ ಹೀಗೆ ತುಸ ಹೊತ್ತು ಅತ್ತ ಮೇಲೆ ನಾಗಿಯು, "ಮಗು, ಜೀವಸಂಕಟವಾಗುತ್ತದೆ ಸ್ವಲ್ಪ ನೀರುಕೊಡು" ಎಂದಳು ಲಲಿತೆಯು ಅವಸರದಿಂದ ಓಡಿ ಹೋಗಿ ಆರಿದ ಬಿಸಿನೀರು ತಂದು ಚಮ್ಚದಿಂದ ನಾಗಿಯ ಬಾಯಿಗೆ ಬಿಡಲಾರಂಭಿಸಿದಳು. ಒಂದೆರಡು ಚಮ್ಚ ತೆಗೆದುಕೊಳ್ಳು ವಷ್ಟರಲ್ಲೇ ನಾಗಿಯ ಹೃದಯದಲ್ಲಿ ಗರ್ಕೆಂಬ ಶಬ್ದವಾಯಿತು ಅವಳ ಪ್ರಾಣವು ಹಾರಿಹೋಯಿತು. ಆದರೆ ಲಲಿತೆಯು ಪಾಪ ಮತ್ತೂ ನೀರುಬಿಡಲೆತ್ನಿಸಿದಳು. ನೀರು ಒಳಗೆ ಹೋಗಲಿಲ್ಲ. ಕಣ್ಣುಗಳು ಅರೆ ಮುಚ್ಚಿಹೋಗಿದ್ದುವು. ಆಗ ಗಾಬರಿಗೊಂಡು ಕೈಯಲ್ಲಿದ್ದ ಚಮ್ಚ ಮತ್ತು ಲೋಟೆಯನ್ನೊಂದೆಡೆ ಬಿಸಾಡಿ, "ಅಮ್ಮಾ! ಅಮ್ಮಾ!!" ಎಂದು ತೋಳು ಹಿಡಿದು ಕುಲುಕಿದಳು. ಪುನಃ ಪುನಃ ಕುಲುಕಿದಳು "ಅಮ್ಮಾ! ಅಮ್ಮಾ!! ಅಮ್ಮಾ!!! ಎಂದು ಹತ್ತಿಪ್ಪತ್ತು ಸಲ ಕರೆದಳು. ಕಡೆಗೆ ಅವಳಿಗೆ ಅಮ್ಮನು ಮೃತಪಟ್ಟಿರುವಳೆಂದು ತಿಳಿಯಿತು. "ಅಯ್ಯೋ! ಅಮ್ಮಾ!!" ಎಂದು ದೊಪ್ಪನೆ ನೆಲಕ್ಕೆ ಬಿದ್ದು ಬೋಧಗೆಟ್ಟಳು

ಅಧ್ಯಾಯ ೧೦

"ಒಳ್ಳೇ ಮಾತಿನಿಂದ ಕೈನೊಹರು ಕೊಟ್ಟರೆ ಆಯಿತು! ಇಲ್ಲವಾದರೆ ಬಲಾತ್ಕಾರದಿಂದ ತೆಗೆದುಕೊಳ್ಳುವೆವು!"

ಮೊದಲೇ ಕಂದಿಹೋಗಿದ್ದ ಲಲಿತೆಯ ಜೀವನದ ಬೆಳಕು, ನಾಗಿಯು ಮೃತಳಾದ ಮೇಲೆ ಸಂಪೂರ್ಣವಾಗಿ ನೊಂದಿಹೋಯಿತು. ಅವಳ ಹೃದಯವು ಕಲ್ಲಾಗಿಬಿಟ್ಟಿತು. ಬುದ್ಧಿಯು ಸಂಪೂರ್ಣ ಮಂದವಾ ಯಿತು ಅವಳು ತಾನಾಗಿ ಯಾವುದನ್ನೂ ಮಾಡುತ್ತಿದ್ದಿಲ್ಲ. ಒಂದೆಡೆ ಕೂತರೆ ಯಾರಾದರೂ ನೆರೆಯವರು ಬಂದು ಕೈಹಿಡಿದೆಳೆಯಬೇಕು, ಪುನಃ ಏಳಲಿಕ್ಕೆ. ದಿನಕ್ಕೊಂದು ಊಟಮಾಡಿದರೆ ದೊಡ್ಡದು ಅದು

ಕೂಡಾ ಯಾರಾದರೂ ನೆರೆಯ ಹೆಂಗಸರು ಕನಿಕರಗೊಂಡು ಅಡಿಗೆ ಮಾಡಿ ಬಡಿಸಿದರೆ, ನೆರೆಯವರು ಯಾವಾಗಲೂ ಬಂದು ಎಷ್ಟೊಂದು, "ಲಲಿತ ಊಟಮಾಡು, ಲಲಿತ ಸ್ನಾನ ಮಾಡು, ಲಲಿತ ಅದು ಮಾಡು ಇದು ಮಾಡೆ"ಂದು ಹೇಳಿಯಾರು?

ಶಿವಾನಂದರು ಲಲಿತೆಯ ಅವಸ್ಥೆಯನ್ನು ತಿಳಿದು ಮಠದಿಂದ ಕೆಲ ಮಂದಿ ಹೆಂಗಸರನ್ನು ಅವಳ ಕೆಲಸಕ್ಕಾಗಿ ಕಳುಹಿಸಿದರು. ಆದರೆ ಅವ ರೆಲ್ಲರೂ ಒಂದೆರಡು ದಿನ ಲಲಿತೆಯೊಂದಿಗಿದ್ದು ಹಿಂದೆ ಹೋಗಿ "ಅವಳಿಗೆ ಹುಚ್ಚು, ಬುದ್ಧಿಗೆಟ್ಟದೆ. ನಮಗೆ ಅವಳೊಂದಿಗಿರಲು ಸಾಧ್ಯವಿಲ್ಲ"ಂದು ಹೇಳುತ್ತಿದ್ದರು. ಹೀಗಾಗಿ ಕಡೆಗೆ ಮನೆಯಲ್ಲಿ ಲಲಿತೆಯೊಬ್ಬಳೇ ಇರ ಬೇಕಾಯಿತು. ಇದ್ದು ಸತ್ತಂತಿದ್ದಳವಳು.

ಅಡಚಣೆಯು ಮಾನವನನ್ನು ಎಂತಹ ಹೇಯ ಕೆಲಸಕ್ಕೆಲ್ಲಾ ಪ್ರೇ ರೇಪಿಸುವುದೆಂಬುದನ್ನು ಕಲ್ಪಿಸಲು ಸಾಧ್ಯವಿಲ್ಲ ಅದಕ್ಕೊಳಗಾದವನಿಗೆ ಯಾವ ನೀತಿ ನಿಯಮವಾಗಲಿ ನಗೆ ನಾಚಿಕೆಯಾಗಲಿ ಇರಲಾರದು ಹೇಗಾದರೂ ಅಡಚಣೆಯಿಂದೊಮ್ಮೆ ಪಾರಾಗಬೇಕೆಂಬೊಂದೇ ಯೋ ಚನೆ ಅವನಿಗೆ ಶಿವಾನಂದರ ಹಣದ ಅಡಚಣೆಯನ್ನಾದರೂ ಹೇಳಿತೀ ರದು. ಸಂಪೂರ್ಣವಾಗಿ ಅವರ ಕೈಕಟ್ಟಿಹೋಗಿತ್ತು. ಒಬ್ಬರಾದರೂ ಅವರನ್ನು ನಂಬುವವರಿದ್ದಿಲ್ಲ. ಮಠದ ಚಿನ್ನವೆಲ್ಲಾ ಬರಿದಾಗಿತ್ತು ಮಾತ್ರವಲ್ಲದೆ ಲಲಿತೆಯ ಮೈಯಲ್ಲಿ ಕರಿಮಣಿಯೊಂದನ್ನು ಮಾತ್ರ ಬಿಟ್ಟ ದ್ದರು. ಲಲಿತೆಗೆ ಅದೂ ಬೇಕಾಗಿದ್ದಿಲ್ಲ. ಬಿಟ್ಟ ತಲೆಗೂದಲನ್ನು ಕಟ್ಟುವ ಉಟ್ಟ ಸೀರೆಯನ್ನು ಬದಲಾಯಿಸುವ ಗೊಡವೆಯೂ ಇಲ್ಲದ ಅವಳಿಗೆ ಕರಿಮಣಿಯಾದರೂ ಯಾಕೆ? ಶಿವಾನಂದರು ನರಸಿಂಹನನ್ನು ಕಳುಹಿಸಿ ನಾಗಿಯ ಚಿನ್ನದ ಪೆಟ್ಟಿಗೆಯನ್ನು ಕೂಡಾ ತರಿಸಿ ಅದರೊಳಗಣ ಆಭರ ಣಗಳನ್ನೆಲ್ಲಾ ಮಾರಿಬಿಟ್ಟರು. ಎಷ್ಟು ಹಣ ಸಿಕ್ಕಿದರೂ ಶಿವಾನಂದರಿಗೆ ಸಾಕಾಗುತ್ತಿದ್ದಿಲ್ಲ. ಒಂದು ಕ್ಷಣದಲ್ಲಿ ಅವರ ಕೈ ಬರಿದಾಗುತ್ತಿದ್ದಿತು. ಅವರು ಹಣ ಪಡೆಯುವ ಬೇರೆಬೇರೆ ಉಪಾಯಗಳನ್ನು ಕ್ಷಣ ಕ್ಷಣ ಕಂಡುಕೊಳ್ಳಬೇಕಾಗಿತ್ತು. ಒಂದು ದಿನ ಅವರು ಯಾವ ಉಪಾಯವೂ ತೋರದೆ ಬಹಳ ಚಿಂತಾಮಗ್ನರಾಗಿದ್ದಾಗ ಫಕ್ಕನೆ ಒಂದು ಯೋಚನೆ

ಹೊಳೆದು ಹೊಸ ಜೀವವೇ ಬಂದಂತಾಗಿ ನರಸಿಂಹನನ್ನು ಕರೆದು ಗುಟ್ಟಿನಿಂದೊಂದು ಸಂಗತಿ ತಿಳಿಸಿದರು. ನಾಗಿಯ ಹೆಸರಲ್ಲಿ ಬೇಂಕಿನಲ್ಲಿ ಎರಡು ಸಾವಿರ ರೂಪಾಯಿಗಳ ವರೆಗುಂಟೆಂಬುದು ಅವರಿಗೆ ತಿಳಿದಿತ್ತು. ಏನು ಮಾಡಿದರೂ ಬೇಂಕಿನವರು ಶಿವಾನಂದರಿಗದನ್ನು ಕೊಡಲೊಪ್ಪಲಿಲ್ಲ. ಆಗ ಅವರು ಅದನ್ನು ಪಡೆಯಲು ಬೇರೇನಾದರೂ ಉಪಾಯ ಮಾಡಬೇಕಾಯಿತು ಆ ಕುರಿತಾಗಿಯೇ ಅವರು ಬಹಳವಾಗಿ ಯೋಚಿಸಿ ಕಡೆಗೊಂದು ಉಪಾಯ ಹೊಳೆದು ನರಸಿಂಹನೊಡನೆ ಗುಟ್ಟಿನಿಂದ ಹೇಳಿದುದದನ್ನು

ಸುಮಾರು ಹತ್ತು ಹನ್ನೊಂದು ಘಂಟೆ ರಾತ್ರಿಯಾಗಿರಬಹುದು. ಲಲಿತೆಯು ರಸ್ತೆಬದಿಯ ಬಾಗಿಲು ಕೂಡಾ ಹಾಕದೆ ಚಾವಡಿಯಲ್ಲಿ ಸುಮ್ಮಗೆ ಕುಳಿತಿದ್ದಳು ಅಂದು ನೆರೆಯುವರಾರಾದರೂ ಲಲಿತೆಯ ಮನೆಗೆ ಬಂದು ದೀಪ ಹಚ್ಚಿ, "ಲಲಿತ, ಇಲ್ಲೇಕೆ ಕೂತಿರುವೆ? ಬಾ, ಊಟಮಾಡೆಂದು" ಒತ್ತಾಯಮಾಡಿ ಬಡಿಸಿ ಮಲಗಿಸಿ ಹೋಗಿರಲಿಲ್ಲ. ಮನೆಯಲ್ಲೆಲ್ಲಾ ಕತ್ತಲೆಯು ಕವಿದಿತ್ತು. ನರಸಿಂಹನೂ ಇನ್ನೊಂದು ಧಾಂಡಿಗ ವ್ಯಕ್ತಿಯೂ ಮನೆಯೊಳಗೆ ಪ್ರವೇಶಿಸಿದರು. ನರಸಿಂಹನು ಟೋರ್ಚ್ ಲೈಟನ್ನು ಚಮುಕಿಸಿ ನೋಡಿದಾಗ ಲಲಿತೆಯು ಚಾವಡಿಯ ಒಂದು ಮೂಲೆಯಲ್ಲಿ ಗೋಡೆಗೊರಗಿ ಕಾಲು ನೀಡಿ ಕುಳಿತಿದ್ದುದು ತೋರಿಬಂತು. ನರಸಿಂಹನು ಕಿಸೆಯಿಂದ · ಬೆಂಕಿಪೆಟ್ಟಿಗೆಯ ಕಡ್ಡಿ ತೆಗೆದು ಕೀರಿ ಚಾವಡಿಯ ಗೋಡೆಯಲ್ಲಿದ್ದ ಚಿಮುಣಿಯೊಂದಕ್ಕೆ ದೀಪ ಹಚ್ಚಿದನು. ಲಲಿತೆಯು ಗೊಂಬೆಯಂತೆ ಕುಳಿತಿದ್ದಳು, ದೃಷ್ಟಿ ಕೂಡಾ ಅತ್ತಿತ್ತ ಚಲಿಸಲಿಲ್ಲ. ನರಸಿಂಹನು ಆಶ್ಚರ್ಯಗೊಂಡು ಲಲಿತೆಯನ್ನೇ ತುಸು ಹೊತ್ತು ನೋಡುತ್ತಾನಿಂತನು. ಅವಳ ಕಂಗಳು ಕಳೆಗುಂದಿ ಹೂತುಹೋಗಿದ್ದುವು. ಶವದ ಮುಖದಂತಾಗಿದ್ದಿತು ಮುಖ. ಅವನ ಪೈಶಾಚಿಕ ಹೃದಯವೂ ಒಂದೊಮ್ಮೆ ಕರಗಿ ನೀರಾಯಿತು. ಮಾನವ ಸಹಜ ಅನುಕಂಪನವುಂಟಾಯಿತು ಆತನ ಅಂತರಾಳದಲ್ಲೊಮ್ಮೆ. ಅವನು ಲಲಿತೆಯನ್ನು ಮತ್ತೂ ನೋಡುತ್ತಾ ನಿಂತನು. ತಾನು ಈ ನಿರ್ದೋಷ ಬಾಲೆಯ ಕುರಿತು ಮಾಡಿದ ದುಷ್ಕೃತ್ಯಗಳೆಲ್ಲಾ ಒಮ್ಮೆಯೇ

ಅವನ ಹೃದಯುವನ್ನು ಸವರಹತ್ತಿದುವು ಅಷ್ಟರಲ್ಲಿ ದೇಜುವು "ಭಟ್ರೇ, ಕಣ್ಣು ಕಣ್ಣು ನೋಡುತ್ತಾ ನಿಂತು ಆಲೋಚಿಸುತ್ತಿರುವುದೇನನ್ನು? ಶೀಘ್ರವಾಗಿ ನಮ್ಮ ಕೆಲಸ ಮುಗಿಸಿಕೊಂಡು ಹೋಗುವ" ಎಂದನು ನರಸಿಂಹನು ಕನಸಿನಿಂದೆಚ್ಚತ್ತವನಂತೆ, "ಆಯ್ತಾಯ್ತು ಮಾಡುವ" ಎಂದು ಮತ್ತೂ ಸುಮ್ಮನೆ ನಿಂತನು. ಆಗ ದೇಜುವು, "ಕೈ ಮೊಹರ ತೆಗೆದುಕೊಳ್ಳಿ ಭಟ್ರೆ, ತಡವಾಗುತ್ತದೆ ನಮಗೆ" ಎಂದು ಪುನಃ ಎಚ್ಚರಿಸಿದನು ಆಗ ನರಸಿಂಹನು, "ಲಲಿತ" ಶಿವಾನಂದರು ನಿನ್ನ ಕೈಮೊಹರು ಪಡೆಯಲು ನಮ್ಮನ್ನು ಕಳುಹಿಸಿದುದು. ಅವರಿಗೇಕೋ ನಿನ್ನ ಕೈಮೊಹರು ಬೇಕಾಗಿದೆಯಂತೆ; ಬೇಗ ಕೊಡು, ನಾವು ಹೋಗುತ್ತೇವೆ" ಎಂದನು ಲಲಿತೆಯು ಮಾತಾಡಲಿಲ್ಲ, ಮುಖವೆತ್ತಿ ನೋಡಲಿಲ್ಲ. "ಈ ಎರಡು ಕಾಗದಗಳಿಗೆ ಕೈಮೊಹರುಕೊಡು. ಲಲಿತ. ನಿನಗೇನಾದರೂ ಆದರಿಂದ ಬಾಧಕವಿಲ್ಲ. ಸ್ವಾಮಿರಿಗೇಕೋ ಬೇಕಾಗಿದೆಯಂತೆ" ಎಂದು ನರಸಿಂಹನು ಕೈಮುದ್ರೆ ತೆಗೆಯುವ ಶಾಯಿಯ ಕರಡಿಗೆಯೊಂದರ ಬಾಯಿತೆರೆದು ಲಲಿತೆಯ ಬಳಿಯಿಟ್ಟು, "ಇಗೋ ಇಲ್ಲಿ ಕೈಮೊಹರು ಹಾಕು" ಎಂದು ಕಾಗದ ಬಿಡಿಸಿ ತೋರಿಸಿದನು. ಆದರೆ ಲಲಿತೆಯು ಯಥಾಪ್ರಕಾರ ಮೌನವಾಗಿದ್ದಳು ಅವಳಿಗೆ ನರಸಿಂಹನು ಹೇಳುವುದೆಲ್ಲಾ ಕೇಳುವುದೇ ಇಲ್ಲೆಂಬಂತೆ ತೋರುತ್ತಿತ್ತು. ಕಡೆಗೆ ನರಸಿಂಹನು, "ಕೊಡು ಲಲಿತ, ಕೈಮೊಹರು ಕೊಡು ನಿನಗೇನೂ ಆದರಲ್ಲಿ ಅಪಾಯವಿಲ್ಲ. ಅದಕ್ಕೆ ನಾನು ಜವಾಬ್ದಾರಿ" ಎಂದು ಬೆನ್ನು ತಟ್ಟಿದನು ಆದರೆ ಲಲಿತೆಯು ಮೌನವಾಗಿಯೇ ಇದ್ದಳು. ನರಸಿಂಹನ್ನು ಮೃದುಮಾತುಗಳಿಂದಲೇ ಲಲಿತೆಯನ್ನೊಲಿಸಿಕೊಂಡು ಕೆಲಸಮಾಡಬೇಕೆಂದು ಬಗೆದಿದ್ದ. ಯಾಕಂದರೆ ಲಲಿತೆಯನ್ನು ಕಂಡು ಆತನ ಮನಸ್ಸು ಇಂದು ಅದೇಕೋ ಕರಗಿಹೋಗಿತ್ತು

ಅಷ್ಟರಲ್ಲಿ ದೇಜುವು, "ನಿಮ್ಮ ಸಮಾಧಾನದ ಮಾತನ್ನೆಲ್ಲಾ ಅವಳು ಕೇಳುವ ಹಾಗಿಲ್ಲ. ಭಟ್ರೆ, ನಾವು ಎಷ್ಟು ಹೊತ್ತು ಕಾಯುವುದಿಲ್ಲಿ? ಮಧ್ಯ ರಾತ್ರಿಯಾಗುತ್ತಾ ಬಂತು. ನಾವೇ ಕೈ ಹಿಡಿದು ಮೊಹರು ತೆಗೆದುಕೊಳ್ಳುವ" ಎಂದನು. "ನಿನಗೆ ಅವಸರವಾಗುತ್ತ

ದಾದರೆ ನೀನೇ ತೆಗೆದುಕೋ ಬಲಾತ್ಕಾರದಿಂದ. ನನ್ನೊಡನೇನು ಹೇಳುವುದು?" ಎಂದ ನರಸಿಂಹ ಸಿಟ್ಟಿನಿಂದ. ದೇಜುವು ಉದ್ಧಟ ಮನೋವೃತ್ತಿಯವ. ಇದು ಹೊರತು ಮಠದಲ್ಲಿ ಶಿವಾನಂದರ ಹೊರತು ಮತ್ತಾರಿಗೂ ಹೆದರುತ್ತಿದ್ದಿಲ್ಲ. ಮತ್ತಾರ ಮಾತೂ ಕೇಳುತ್ತಿದ್ದಿಲ್ಲ, ತನಗಿಷ್ಟಬಂದ ಕೆಲಸ ಮಾಡಿಕೊಂಡು ಶಿವಾನಂದರ ಅಂಗರಕ್ಷಕ ನಂತಿದ್ದವ ನರಸಿಂಹನು ಹಂಗಿಸಿ ಮಾತಾಡಿದೊಡನೆಯೇ ಅವನಿಗೆ ಕೋಪವು ತಲೆಗೇರಿಬಿಟ್ಟಿತು. ಅವನು "ನೀವೇನು ಇಷ್ಟೊಂದು ಹಂಗಿಸಿ ಮಾತಾಡುವುದು? ನನಗೊಂದು ಕೈಮೊಹರು ತೆಗೆದುಕೊಳ್ಳಲಿಕ್ಕೂ ಸಾಧ್ಯವಿಲ್ಲವೇ? ನೋಡುವ ಹಾಗಾದರೆ?" ಎಂದು ಒರಟುತನದಿಂದ ಲಲಿತೆಯ ಕೈ ಹಿಡಿದೆಳೆದನು. ಅವಳದನ್ನು ಹಿಂದಕ್ಕೆಳೆದುಕೊಂಡಳು. ಆಗ ದೇಜುವು, "ಒಳ್ಳೇ ಮಾತಿನಿಂದ ಕೈಮೊಹರು ಕೊಟ್ಟೆಯಾಯಿತು! ಇಲ್ಲ ವಾದರೆ ಬಲಾತ್ಕಾರದಿಂದ ತೆಗೆದುಕೊಳ್ಳುವೆವು" ಎಂದು ಗದರಿಸಿದನು. ಲಲಿತೆಯು ಮಾತಾಡಲಿಲ್ಲ ಆಗ ದೇಜುವು ಪುನಃ ಲಲಿತೆಯ ಕೈಯನ್ನು ಬಲವಾಗಿ ಹಿಡಿದು, "ನೀವೇನು ನೋಡುತ್ತ ಕುಳಿತಿರುವುದು ಭಟ್ರೆ? ತನ್ನಿಲ್ಲಿ ಶಾಯಿ ಕರಡಿಗೆ ಮತ್ತು ಕಾಗದ! ಕೈಮೊಹರು ಕೊಡದೆ ಎಲ್ಲಿ ಹೋಗುತ್ತಾಳೆ ನೋಡುವ ಇವಳು?'' ಎಂದನು. ಆಗ ಲಲಿತೆಗೆ ಅದೆಲ್ಲಿಂದ ಶಕ್ತಿ ಬಂದಿತೋ ಏನೋ! ಅವಳು ಥಟ್ಟನೆ ಕೈಯನ್ನೆಳೆದು ದೇಜುವಿನ ಬಲವಾದ ಹಿಡಿತದಿಂದ ಬಿಡಿಸಿಕೊಂಡಳು. ದೇಜುವು ಪುನಃ ಅವಳ ಕೈ ಹಿಡಿಯಲೆತ್ನಿಸಿದ ಬಹಳ ಸಿಟ್ಟುಗೊಂಡು. ಆಗ ಲಲಿತೆಯ ಮುಖವು ವಿಕಾರಗೊಂಡಿತು. ಅವಳು, ದೇಜುವು ಕೈಯನ್ನು ಹಿಡಿಯು ವಷ್ಟರಲ್ಲಿ ಅವನ ಕೈಯನ್ನು ಬಲವಾಗಿ ಕಚ್ಚಿದಳು. ಕಚ್ಚಿ ಹಿಡಿದವಳು ಬಿಡಲೇ ಇಲ್ಲ. ದೇಜುವು ಅವಳ ಬಾಯಿಯಿಂದ ಕೈ ಬಿಡಿಸಿಕೊಳ್ಳಲು ಮಾಡಿದ ಪ್ರಯತ್ನವೆಲ್ಲಾ ನಿಷ್ಫಲವಾಯಿತು. ಮುಂಗೈಯಿಂದ ರಕ್ತವು ಹರಿಯಲಾರಂಭಿಸಿತು ಅಸಹನೀಯ ನೋವುಂಟಾಯಿತು. ಅವನು ಲಲಿತೆಯ ಜುಟ್ಟು ಹಿಡಿದೆಳೆದ, ಕುತ್ತಿಗೆ ಒತ್ತಿ ಹಿಡಿದ, ಏನು ಮಾಡಿ ದರೂ ಅವಳು ಕಚ್ಚಿ ಹಿಡಿದ ಕೈ ಬಿಡಲಿಲ್ಲ. ಧಾಂಡಿಗ ದೇಜುವು ತಬ್ಬಿಬ್ಬಾದ! ಅವನ ಮೈಯೆಲ್ಲಾ ಬೆವರಿತು ತಲೆ ತಿರುಗಿತು.

ಅವನು, "ಭಟ್ರೇ ನೀವೇನು ಚಂದ ನೋಡುತ್ತಿರುವುದೇ? ಬಿಡಿಸ ಬಾರದೆ? ಎಂದ. ನರಸಿಂಹ ಬೆದರಿಹೋಗಿದ್ದನು ತನ್ನ ಮೇಲೆಲ್ಲಿ ಯಾದರೂ ಬಿದ್ದರೆ ಮಾಡುವುದೇನೆಂದು ಅವನು ಹತ್ತಿರ ಬಾರದೆ ದೂರವೇ ನಿಂತಿದ್ದನು. ಆಗ ದೇಜುವು ಬಾಯ್ಬಿಟ್ಟು ಕೂಗಿದನು "ಭಟ್ರೇ ಅಷ್ಟು ಮಾಡಿ ಸ್ವಾಮಿ! ಒಂದೊಮ್ಮೆ ಬಿಡಿಸಿ!" ಎಂದು ಬೇಡಿ ಕೊಂಡನು ಆಗ ನರಸಿಂಹನಿಗೆ ಸುಮ್ಮನಿರಲು ಸಾಧ್ಯವಿಲ್ಲದಾಯಿತು. ಆದರೆ ಅವನನ್ನು ಬಿಟ್ಟು ತನ್ನ ಮೇಲೆ ಬಿದ್ದರೆ ಗತಿಯೇನೆಂಬ ಭೀತಿಯೂ ಪೀಡಿಸ ಹತ್ತಿತು ಕಟ್ಟಕಡೆಗೆ ನಿರ್ವಾಹವಿಲ್ಲದೆ ಆದುದಾಗಲೆಂದು ಲಲಿತೆಯ ತಲೆಕೂದಲನ್ನು ಎರಡು ಕೈಗಳಿಂದಲೂ ಬಲವಾಗಿ ಹಿಡಿದು ನಿರ್ದಯವಾಗಿ ಭರದಿಂದ ಹಿಂದಕ್ಕೆಳೆದನು ದೇಜುವಿನ ಮುಂಗೈಯು ಲಲಿತೆಯ ಬಾಯಿಯಿಂದ ತಪ್ಪಿತು ಆದರೆ ಅಷ್ಟು ಭಾಗದ ಮಾಂಸ ಕೂಡಾ ಹೋಗಿತ್ತು. ಲಲಿತೆಯ ಬಾಯಿ ಮತ್ತು ತುಟಿಯೆಲ್ಲಾ ರಕ್ತ ಮಯವಾಗಿತ್ತು ಕಣ್ಣುಗಳು ಕೆಂಪಡರಿ ಹೋಗಿದ್ದುವು. ಅವಳ ಸ್ವರೂಪವು ಉಗ್ರವಾಗಿತ್ತು. ಅವಳು ಹಿಂತಿರುಗುವಷ್ಟರಲ್ಲೇ ನರ ಸಿಂಹನು ಪಲಾಯನ ಮಾಡಿದನು. ಅವನ ಹಿಂದೆಯೇ ದೇಜುವೂ ಓಡಿದನು. ಇವರಿಬ್ಬರ ಬೆನ್ನಲ್ಲಿಯೇ ಲಲಿತೆಯೂ ಮನೆಯಿಂದ ಹೊರ ಬಿದ್ದಳು.

ಅಧ್ಯಾಯ ೧೧

"ಭಿಕಾರಿಣಿ ಬಂದಳು ಭಿಕಾರಿಣಿ! ಇದೋ ಭಿಕಾರಿಣಿಗೆ ಕೊಡುತ್ತೇನೆ ನಿನ್ನನ್ನು ನೋಡು!"

ನಿಶಾದೇವಿಯು ತನ್ನ ಸಂಪೂರ್ಣ ಸಾಮ್ರಾಜ್ಯ ಸ್ಥಾಪಿಸಿರುವ ಕರಾಳ ರಾತ್ರಿ. ಆ ವಿಕಟ ಅಟ್ಟಹಾಸದ ಭೀಕರತೆಯು ಎಲ್ಲೆಲ್ಲಿಯೂ ನೆಲೆಗೊಂಡಿತ್ತು. ಇಂತಹ ರಾತ್ರಿಯಲ್ಲಿ ಮನೆಯಿಂದ ಹೊರಬಿದ್ದ ಲಲಿತೆಯು ಒಂದೇ ಸವನೆ ರಸ್ತೆ ಹಿಡಿದೋಡಿದಳು. ಯಾವ ದಿಕ್ಕಿಗೆ, ಎಲ್ಲಿಗೆ, ಏತಕ್ಕಾಗಿ ಓಡುವುದೆಂಬುದೊಂದನ್ನೂ ಅವಳರಿಯಳು.

ಅಷ್ಟೊಂದು ಅವಳ ಬುದ್ಧಿಯು ಕೆಟ್ಟುಹೋಗಿತ್ತು ಓಡಿದಳು, ಮತ್ತೂ ಓಡಿದಳು. ಓಡಿ ಓಡಿ ರಸ್ತೆಯ ಬದಿಯ ಹೊಂಡವೊಂದಕ್ಕೆ ಕಾಲು ಬಿದ್ದು ದೊಪ್ಪನೆ ಬಿದ್ದುಬಿಟ್ಟಳು. ಚೆನ್ನಾಗಿ ಪೆಟ್ಟಾದುದರಿಂದ ಥಕ್ಕನೆ ಏಳಲಾಗಲಿಲ್ಲ.

ಬಹಳವಾಗಿ ಹೋರಾಡಿ ರಕ್ತಸುರಿಸಿ ರಾತ್ರಿಯ ಕರಾಳ ಧಾಳಿಯನ್ನೋಡಿಸಿ ದಿನವು ತನ್ನ ವಿಜಯ ಧ್ವಜವನ್ನು ಮೂಡುದಿಕ್ಕಿನ ಕೋಲುಗಲ್ಲ ಮೇಲೇರಿಸುವಷ್ಟರಲ್ಲೇ ಕೆಲಮಂದಿ ಕೂಲಿಕಾರ ಹೆಂಗಸರು ರಸ್ತೆ ಬದಿಯ ಸಾಲುಮರಗಳಿಂದ ಬೀಳುವ ದರಳೆ ಹೆಕ್ಕಲು ಹೊರಬಿದ್ದಿದ್ದರು. ಅಡಿಗೆಗಾಗಿ ದರಳೆ ಹೆಕ್ಕಿ ಕೊಂಡೊಯ್ದು ಆಮೇಲೆ ಈ ಬಡ ಹೆಂಗಸರು ಒಡಲಪಾಡಿಗಾಗಿ ಗೇಯಲು ಬೇರೆ ಬೇರೆ ಕೆಲಸಗಳಿಗೆ ಹೋಗಬೇಕಾದುದರಿಂದ ಅವರು ಮುಂಬೆಳಕು ಹರಿಯುವಷ್ಟರಲ್ಲೇ ಮನೆಯಿಂದ ಹೊರಬೀಳಲೇ ಬೇಕಾಗಿತ್ತು. ಎಲ್ಲಿಯಾದರೂ ಒಬ್ಬಳು ಏಳುವಾಗ ಸ್ವಲ್ಪ ತಡವಾದರೆ ಅವಳ ತಳಮಳವೆಂದರೆ ಅಷ್ಟಿಷ್ಟಲ್ಲ. ಆದುದರಿಂದ ಈ ಬಡ ಹೆಂಗಸರ ಹೊಟ್ಟೆಪಾಡಿನ ಚಿಂತೆಯೇ ಅವರನ್ನು 'ಎಲಾರ್ಮ್' ಗಡಿಯಾರದಂತೆ ಹೊತ್ತಿಗೆ ಸರಿಯಾಗಿ ಎಬ್ಬಿಸಿ ಹೊರಗಟ್ಟುತ್ತಿತ್ತು. ಆದರೆ ಶ್ರೀಮಂತ ವರ್ಗವು ಇನ್ನೂ ಗಾಢ ನಿದ್ರಾಸಕ್ತವಾಗಿ ಹಾಸಿಗೆಯ ಮೇಲೆ ಬಿದ್ದಿತ್ತು. ಉದರಪೋಷಣೆಯ ಗೊಡವೆಯೊಂದಿಲ್ಲವಾಗ ಯಾವಾಗ ಎದ್ದರೇನು? ಅವರಿಗೇನಾದರೂ ಈ ಬಡ ಹೆಂಗಸರಂತೆ ದಿನ ಇಡೀ ದುಡಿಯಲಿದೆಯೇ? ಇಂದು ಮುಂಜಾನೆಯೆದ್ದು ದರಳೆ ಹೆಕ್ಕದಿದ್ದರೆ ನಾಳೆ ಬೆಳಿಗ್ಗೆ ಮನೆಯಲ್ಲಿ ಹೊಗೆಯೇ ಏಳಲಾರದೆಂಬ ಚಿಂತೆಯಿದೆಯೇ?

ಶಿವಪುರದ ಬಡ ಮಜೂರ ಹೆಂಗಸರು, ಏನೇನೆಲ್ಲಾ ಊರಿನ ಸಂಗತಿಗಳನ್ನು ಮಾತಾಡುತ್ತಾ ಒಂದೊಂದಾಗಿ ಬಿದ್ದಿರುವ ಒಣ ಎಲೆಗಳನ್ನು ಬಗ್ಗಿ ಬಗ್ಗಿ ಹೆಕ್ಕುತ್ತಾ ಮುಂದುವರಿಯುತ್ತಿದ್ದರು. ಒಬ್ಬೊಬ್ಬರಿಗೆ ಸಿಕ್ಕಿದುದನ್ನು ಹೆಕ್ಕಿ ತೊಟ್ಟೆಯೊಳಗೆ ಹಾಕುತ್ತಿದ್ದರೇ ಹೊರತು ಎಲ್ಲವನ್ನೂ ಒಬ್ಬಳೇ ಪಡೆಯಬೇಕು; ಬೇರೆಯವರಿಗೆ ಏನೂ ಸಿಕ್ಕಬಾರದೆಂಬ ಮೇಲಾಟ, ಮತ್ಸರಗಳು ಅವರಲ್ಲಿರಲಿಲ್ಲ. ಪ್ರತಿಯೊ

ಬ್ಬಳೂ ಸ್ವಲ್ಪ ಹೆಚ್ಚು ಕಡಿಮೆ ಆಯಾ ದಿನದ ಅಡಿಗೆಗೆ ಬೇಕಾಗುವಷ್ಟರ ದರಳೆಯಿಂದ ತೃಪ್ತಳಾಗುತ್ತಿದ್ದಳು, ಒಬ್ಬಳು ಸ್ವಲ್ಪ ಹೆಚ್ಚು ಹೆಕ್ಕಿದರೆ, ಇನ್ನೊಬ್ಬಳು ತನಗೇನೂ ಸಾಲದೆಂದು ಹೇಳಿದರೆ ಹೆಚ್ಚಿಗೆಯಿದ್ದವಳು ಕಡಿಮೆಯಾದವಳಿಗೆ ಕೊಡುವಷ್ಟರ ನ್ಯಾಯ ಹಾಗೂ ಉದಾರ ಬುದ್ಧಿಯು ಈ ಬಡ ಹೆಂಗಸರಲ್ಲಿದ್ದಿತು. ಆದುದರಿಂದ ಅವರು ದರಳೆಗಾಗಿ ಒಬ್ಬರೊಬ್ಬರೊಡನೆ ಮೇಲಾಟ ಮಾಡಿಕೊಂಡು ಓಡಾಡದೆ, ಕಚ್ಚಾಡದೆ, ಬಂಧುಭಾವದಿಂದ ಒಟ್ಟಾಗಿ ನಡೆಯುತ್ತಿದ್ದರು. ಹೀಗೆ ಶಿವಪುರದ ಆದೊಂದು ರಸ್ತೆಯ ಬಡ ಹೆಂಗಸರೆಲ್ಲಾ ದರಳೆ ಹೆಕ್ಕಿಕೊಂಡು ಮುಂದುವರಿಯುವಾಗ ರಸ್ತೆ ಬದಿಯಲ್ಲಿ ಲಲಿತೆಯು ಬಿದ್ದಿರುವುದನ್ನು ಕಂಡು, "ಯಾರೋ ಹೆಂಗುಸು ಸತ್ತು ಬಿದ್ದಿರುವಳು. ಯಾರೋ ಕೊಂದು ಹಾಕಿರುವರು" ಎಂದು ದಿಗಿಲುಗೊಂಡು ಕೆಲವರು, "ಹೋಗುವ ಹಿಂದೆ, ನಮಗದರ ಗೊಡವೆ ಬೇಡ ಬಡವರಿಗೆ" ಎಂದರು ಇನ್ನು ಕೆಲವರು, "ಛೆ! ಛೆ!! ನಮಗೇನು ಹೆದರಿಕೆ? ನೋಡುವ ಸಂಗತಿಯೇನೆಂದು" ಎಂದು ಧೈರ್ಯದಿಂದ ಲಲಿತೆಯ ಬಳಿಗೆ ಶಂಕಿಸುತ್ತಾ ಹೋಗಿ ಪರೀಕ್ಷಿಸುವಾಗ ಶ್ವಾಸ ಸಂಚಾರವಾಗುವುದನ್ನು ಕಂಡು ಬಹಳ ಕನಿಕರಗೊಂಡು, "ಛೆ! ಪಾಪ! ಯಾರು ಹೊಡೆದು ಹಾಕಿದುದೋ ಏನೋ! ಎಷ್ಟು ಎಳೆ ಪ್ರಾಯದ ಹುಡುಗಿ! ಎಷ್ಟು ರೂಪವತಿ! ಯಾರಪ್ಪ ಕರುಣೆಯು ಕರುಳಿಲ್ಲದವರು ಇವಳನ್ನು ಈ ಅವಸ್ಥೆಗೀಡುಮಾಡಿಪುದು!" ಎಂದು ಹೆಂಗಸರೆಲ್ಲಾ ಬಹಳ ಚಿಂತೆಗೊಂಡು ಲಲಿತೆಯ ಮೈಮೇಲೆಲ್ಲಿಯಾದರೂ ಪೆಟ್ಟಾದುದಾಗಲಿ ಗಾಯವಾಗಲಿ ಇರುವುದೋ ಎಂದು ಕಾಲು, ಕೈ ಮತ್ತು ಶರೀರವನ್ನೆಲ್ಲಾ ಹುಡುಕಿದರು. ಪೆಟ್ಟು, ಗಾಯಗಳೇನೂ ಇರಲಿಲ್ಲ ಶೀರೆಗೆಲ್ಲಾ ಧೂಳು ಹಿಡಿದಿತ್ತು ಉದ್ದ ಕೂದಲು ಬಿಚ್ಚಿಹೋಗಿ ಕೆದರಿ ಬಿದ್ದಿತ್ತು. ಕಣ್ಣು ಮುಚ್ಚಿ ಹೋಗಿತ್ತು. ಶರೀರವು ಸಂಪೂರ್ಣವಾಗಿ ಹೀರಿಬಿಟ್ಟಂತೆ ಬಹಳ ಸೊರಗಿಹೋಗಿತ್ತು. ಮುಖದ ಸ್ವಾಭಾವಿಕ ಕಾಂತಿಯು ಮಾಯವಾಗಿ ಅದೊಂದು ಬಗೆಯ ವಿಕಟತೆಯು ನೆಲೆಗೊಂಡಿತ್ತು. "ಪಾಪ, ಎಲ್ಲಿಯೋ ರಸ್ತೆಯಲ್ಲಿ ರಾತ್ರಿ ಹೋಗುವಾಗ ಬಿದ್ದು ಬೋಧ ತಪ್ಪಿರಬೇಕೆ"ಂದರು ಕೆಲವು ಹೆಂಗಸರು. "ಯಾರೋ ಮರ್ಮಸ್ಥಾನಕ್ಕೆ ಪೆಟ್ಟುಕೊಟ್ಟು ಸತ್ತಳೆಂದು ಬಿಟ್ಟುಹೋ

ಗಿರಬೇಕು" ಎಂದರು ಇನ್ನು ಕೆಲವರು. ಹೀಗೆ ನಾನಾ ರೀತಿ ಅಭಿಪ್ರಾಯವುಂಟಾಯಿತು ಹೆಂಗುಸರಲ್ಲಿ. ಕೆಲವರು, ನಾವು ಹೋಗುವ ನಮಗೇಕೆ ಇದರ ಗೊಡವೆ? ಎಲ್ಲಿಯಾದರೂ ಪೋಲೀಸರು ನೋಡಿದರೆ ನಮ್ಮ ಮೇಲೆ ಬಂದೀತು ಮತ್ತೆ!" ಎಂದರು. "ಛೆ! ಎಷ್ಟಾದರೂ ಹೆಣ್ಣು ಸಂಸಾರದಲ್ಲಿ ಹುಟ್ಟಿಲ್ಲವೇ ನೀವು? ಪೋಲೀಸರು ಬಂದರೆ ನಮ್ಮನ್ನೇನು ಮಾಡುವರು? ಸ್ವಲ್ಪ ಉಪಚಾರಮಾಡಿ ಬೋಧ ಬರುವುದೋ ನೋಡುವ" ಎಂದರು ಇನ್ನು ಕೆಲವರು. ಕೆಲವರು ಲಲಿತೆಯ ವಸ್ತ್ರದ ಧೂಳು ಹಾರಿಸಲಾರಂಭಿಸಿದರು ಕೆಲವರು ತಲೆಕೂದಲು ಸರಿಮಾಡಿ ಸೆರಗಿಂದ ಮುಖ ಒರಸಿದರು. ಒಬ್ಬಿಬ್ಬರು ಹತ್ತಿರದ ಮನೆಗಳಿಗೆ ನೀರು ತರಲೋಡಿದರು

ಕಟುಕ ಸಮಾಜದ, ರಾಕ್ಷಸೀ ಮಾನವನ ಅತ್ಯಾಚಾರಕ್ಕೊಳಗಾಗಿ ಮತಿಗೆಟ್ಟು ಅನಾಥೆಯಾಗಿ ರಸ್ತೆಯ ಮೇಲೆ ಬಿದ್ದಿರುವ ನಿರ್ದೋಷಿ ಬಾಲೆಯೊಬ್ಬಳ ಪಾಡನ್ನು ಕಂಡು ಮರುಗಿ ಮುಂದಡಿಯಿಡಲು ಮನಸ್ಸು ಒಡಂಬಡುವುದಿಲ್ಲವೋ ಎಂಬಂತೆ ಮಂದಾನಿಲನು ಮಂದಮಂದನಾಗಿ ಬೀಸಿದ ಕಾರಣ ಆ ತಂಪಿನಿಂದ ಲಲಿತೆಗೆ ಮೆಲ್ಲಮೆಲ್ಲಗೆ ಭೋಧೆಯುಂಟಾಯಿತು ಅವಳು ಕಣ್ಣು ತೆರೆದಳು. ಸುತ್ತಲೂ ಕೂತು ನಿಂತು ನೋಡುತ್ತಿರುವ ಸ್ತ್ರೀಯರನ್ನು ನೋಡಿದಳು ಅನಂತರ ಮೆಲ್ಲಗೆ ಕಣ್ಣು ಮುಚ್ಚಿದಳು. ಕಣ್ಣುಗಳು ಸಂಪೂರ್ಣವಾಗಿ ಪ್ರಕಾಶರಹಿತವಾಗಿದ್ದವು. ಅಷ್ಟರಲ್ಲಿ ನೀರು ತರಹೋಗಿದ ಒಬ್ಬ ಹೆಂಗಸು ಹಿಂತಿರುಗಿ ಬಂದು "ಎಂತಹ ಜನರಪ್ಪ ಇವರು! ಪ್ರಾಣಿ ಹೋಗುವಾಗ ಒಂದು ಗುಟುಕು ನೀರು ಕೊಡುವವರಲ್ಲ! ರಸ್ತೆಯಲ್ಲೊಂದು ಹೆಂಗಸು ಬೋಧ ತಪ್ಪಿಬಿದ್ದಿದೆ ಪಾಪ! ಅದಕ್ಕೆ ಮುಖಕ್ಕೆ ಹಾಕಲು ಸ್ವಲ್ಪ ನೀರುಬೇಕಾಗಿದೆ. ಸ್ವಲ್ಪ ತಂಬಿಗೆ ಕೊಡಿ. ಈಗ ಕೊಡುತ್ತೇನೆ" ಎಂದರೆ, "ಹೋಗೋಗು! ತಂಬಿಗೆ ಕೊಡಲಿಕ್ಕಾಗುವುದಿಲ್ಲ ಯಾರು ನೀನು? ತಂಬಿಗೆ ವಾಪಾಸು ತರದಿದ್ದರೆ?" ಎಂದರು ಆ ಉಪ್ಪರಿಗೆ ಮನೆಯ ವಿಧವೆ ಹೆಂಗುಸೊಬ್ಬರು. ಅವರ ಮನೆ ಕೆಲಸದವನಾದರೂ ಕೊಡುವುದರಲ್ಲಿದ್ದ, ಅಮ್ಮ ಕೊಡಲು ಬಿಡಲಿಲ್ಲ. ಕಡೆಗೆ ನಾನು ಕೆಲಸದವನೊಡನೆ ಸೆರಗಿಗೆ ಸ್ವಲ್ಪ ನೀರು ಹಾಕ ಹೇಳಿ ಒದ್ದೆ

ಮಾಡಿ ತಂದೆ" ಎಂದು ಸೆರಗಿಂದ ಲಲಿತೆಯು ಮುಖವನ್ನೊರಸು ವಷ್ಟರಲ್ಲಿ ಇನ್ನೊಬ್ಬ ಹೆಂಗಸು ಒಂದು ತಂಬಿಗೆ ನೀರು ಹಿಡಕೊಂಡು ಮತ್ತೊಬ್ಬಳೊಂದಿಗೆ ಬಂದು "ಇದೋ ನೀರುಂಟು ಇಲ್ಲಿ, ನೀರು ಹಾಕುವ ಮುಖಕ್ಕೆ" ಎಂದು ಲಲಿತೆಯ ಮುಖಕ್ಕೆ ನೀರುಹಾಕಿ ಸೆರಗಿಂದ ಸರಿಯಾಗಿ ಒರಸಿದಳು. ಅವಳೊಂದಿಗೆ ಬಂದವಳು ನೆರೆಯ ಬಡ ಮಜೂರ ಸ್ತ್ರೀಯೊಬ್ಬಳಾಗಿದ್ದಳು. ಅವಳು ಅವಸರವಸರದಿಂದ ತಂಬಿಗೆ ಮತ್ತು ನೀರು ಕೊಟ್ಟುದಲ್ಲದೆ ಸಂಗತಿಯೇನೆಂದು ನೋಡಲು ತಾನಾಗಿ ಬಂದಿದ್ದಳು.

ಇಷ್ಟರಲ್ಲಿ ಲಲಿತೆಯು ಜಗ್ಗನೆದ್ದಳು. ಸುತ್ತು ಮುತ್ತಲಿರುವ ಸ್ತ್ರೀಯರನ್ನೆಲ್ಲಾ ಒಮ್ಮೆ ದಿಟ್ಟಿಸಿ ನೋಡಿದಳು. ಬಿಚ್ಚಿಹೋದ ತಲೆಗೂ ದಲನ್ನು ಕಟ್ಟುವ, ಸೀರೆ ರವಕೆಗಳನ್ನು ಸರಿಮಾಡುವ ಗೊಡವೆಗೇನೇ ಹೋಗದೆ ಕೂಡಲೆ ಅಲ್ಲಿಂದ ನಡೆದುಬಿಟ್ಟಳು. ಒಮ್ಮೆಯಾದರೂ ಹಿಂತಿರುಗಿ ಕೂಡಾ ನೋಡಲಿಲ್ಲ ಸ್ತ್ರೀಯರೆಲ್ಲಾ ಅವಳನ್ನೇ ಕಣ್ಣು ಕಣ್ಣು ನೋಡುತ್ತಾ ನಿಂತರು ಅವಳು ಕಣ್ಮರೆಯಾಗುವವರೆಗೂ ವಿಸ್ಮಯಗೊಂಡು ನೋಡಿದರು ಆ ಮೇಲೆ, "ಅವಳು ಹುಚ್ಚಿ" ಎಂದರು ಕೆಲವರು "ಹುಚ್ಚಿಯೆಂದು ಹೇಳುವವರಿಗೆ ಹುಚ್ಚು. ಅವಳಿಗೆ ನಾಚಿಕೆಯಾಯಿತು" ಎಂದರು ಇನ್ನು ಕೆಲವರು. "ಎಲ್ಲೋ ತಲೆ ತುಂಬ ಕುಡಿದು ಬಿದ್ದಿರಬೇಕು. ಸೂಳೆಯಿರಬೇಕೆ"ಂದರು ಮತ್ತೆ ಕೆಲವರು. ಹೀಗೆಲ್ಲಾ ನಾನಾರೀತಿ ಮಾತಾಡಿಕೊಳ್ಳುತ್ತಾ ಅವರು ತಮ್ಮ ಕೆಲಸಕ್ಕೆ ತೊಡಗಿದರು.

ಶಿವಪುರವೆಲ್ಲಾ ಎಚ್ಚತ್ತು ತನ್ನ ಅನುನಿತ್ಯದ ಕೆಲಸಕ್ಕಾರಂಭಿಸಿ ದಾಗ, ಶಿವಾನಂದರ ಸೂಳೆಯಾಗಿ ಬಹಳ ಸುಖವೈಭವದಿಂದಿರುವವಳೆನಿ ಸಿಕೊಂಡಿದ್ದ ಲಲಿತೆಯು ಬೀದಿಭಿಕಾರಿಣಿಯಾಗಿ ಅಡ್ಡಾಡುತ್ತಿದ್ದಳು. ನಿಂತಲ್ಲಿ ನಿಲ್ಲದೆ, ಕೂತಲ್ಲಿ ಕೂತುಕೊಳ್ಳದೆ ರಸ್ತೆ ರಸ್ತೆ, ಗಲ್ಲಿಗಲ್ಲಿ ಅಲೆ ದಾಡುತ್ತಿದ್ದಳು. ಬಾಯಾರಿಕೆ, ಹಸಿವು, ವಿಶ್ರಾಂತಿ, ನಿದ್ದೆಗಳ ಗೊಡ ವೆಯೇ ಅವಳಿಗಿದ್ದಿಲ್ಲ. ಹೆಚ್ಚಿನ ಜನರು ಭಿಕಾರಿಣಿ ಲಲಿತೆಯನ್ನು ಕಂಡು ಅತ್ಯಂತ ಕನಿಕರಪಡುತ್ತಿದ್ದರು. ವಿಶೇಷವಾಗಿ ಹೆಂಗಸರ ಹೃದಯ ಕರಗಿ ನೀರಾಗಿ ಹೋಗುತ್ತಿದ್ದಿತು. ಅವರು ಲಲಿತೆಯನ್ನು

ಮನೆಗೆ ಕರೆದು ಒತ್ತಾಯಮಾಡಿ ಕುಳ್ಳಿರಿಸಿಕೊಂಡು ಮಾತಾಡಿಸಲೆತ್ನಿ ಸುತ್ತಿದ್ದರು. ಬಾಯಾರಿಕೆಯಾಗುವುದಾದರೆ ಕುಡಿಯಲು ಮಜ್ಜಿಗೆಯೋ ಹಾಲೋ ಕೊಡುತ್ತಿದ್ದರು. ತಲೆಗೆ ಎಣ್ಣೆಹಾಕಿ ಬಾಚಿಕೊಳ್ಳ ಹೇಳು ತ್ತಿದ್ದರು. ಹಣೆಗೆ ಹಾಕಲು ಕುಂಕುಮ ಮತ್ತು ಮುಡಿಯಲು ಹೂಕೊಡುತ್ತಿದ್ದರು. ಆದರೆ ಕೆಲಮಂದಿ ಗಂಡಸರು, ವಿಶೇಷವಾಗಿ ಧನಿಕ ಮಾನವಂತರೆನಿಸುವವರು ಲಲಿತೆಯೆಂದರೆ ಧಿಕ್ಕರಿಸಿ ದೂರೀಕರಿ ಸುತ್ತಿದ್ದರು. ಮನಬಂದಂತೆ ಬೈದು ಭಂಗಿಸುತ್ತಿದ್ದರು. ಲಲಿತೆಯು ಯಾರೇನುಮಾಡಿದರೂ ಒಂದು ಶಬ್ದ ಕೂಡಾ ಮಾತಾಡದೆ ಮೌನ ವಾಗಿರುತ್ತಿದ್ದಳು. ಹೃದಯ ರಹಿತ ಪುಂಡರು ಕೆಲವರು "ನೋಡಿ ಶಿವಾನಂದರ ಸೂಳೆ! ಈಗ ಬೀದಿ ಭಿಕಾರಿಣಿ" ಎಂದು ಕೈತೋರಿಸಿ ತಮಾಷೆ ಮಾಡುತ್ತಿದ್ದರು. ಲಲಿತೆಯು ಹೊರಬಿದ್ದ ಮೊದಲನೇ ದಿನದಲ್ಲಿ ಶಿವಪುರದ ಜನರಿಗೆಲ್ಲಾ ಲಲಿತೆಯನ್ನು ನೋಡುವುದೊಂದೇ ಕೆಲಸ. ಎಂತಹ ಕೆಲಸ ಬಿಟ್ಟಾದರೂ ಲಲಿತೆಯನ್ನೊಮ್ಮೆ ನೋಡ ಬೇಕೆಂಬ... ಬವರಿಲ್ಲ ಅವಳು ಎಲ್ಲಿಯಾದರೂ ಸ್ವಲ್ಪ ನಿಂತರೆ ಜನರು ಗುಂಪುಕೂಡು ತ್ತಿದ್ದರು. ನಡೆದು ಹೋಗುವಾಗ ಸ್ತ್ರೀಪುರುಷರು ಅಂಗಡಿ ಮನೆಗಳಿಂದ ಹೊರಗೋಡಿಬಂದು ನೋಡಿ ನಾನಾ ರೀತಿ ಮಾತಾಡಿಕೊಳ್ಳುತ್ತಿದ್ದರು. ಲಲಿತೆಯು ಕೆಲದಿನಗಳ ವರೆಗೆ ಶಿವಪುರದ ಅದೊಂದು ಚೋದ್ಯವಸ್ತು ವಾಗಿದ್ದಳು. ಅವಳನ್ನೆಲ್ಲಿಯಾದರೂ ಟಿಕೇಟಿಟ್ಟು ಪ್ರದರ್ಶನಕ್ಕಿಡು ತ್ತಿದ್ದರೆ ಸ್ವಲ್ಪ ದುಡ್ಡು ಮಾಡಬಹುದಿತ್ತು. ಅಷ್ಟೊಂದು ಉತ್ಸುಕತೆ ಯಿಂದ ಶಿವಪುರಸ್ಥರು ಲಲಿತೆಯನ್ನು ಹೋದಹೋದಲ್ಲೆಲ್ಲಾ ನೋಡ ಲಾತುರಪಡುತ್ತಿದ್ದರು.

ಹೀಗೆ ಕೆಲಸಮಯ ಹೋಯಿತು. ಲಲಿತೆಯು ಶಿವಪುರದ ರಸ್ತೆ ಬೀದಿಗಳ ಸಾಮಾನ್ಯ ವಿನೋದ ವಸ್ತುವಾದಳು. ಈಗ ಕೆಲಮಂದಿ ಪೋಕ ಹುಡುಗರು ಮಾತ್ರ ಅವಳ ಬೆನ್ನು ಹಿಡಿದು ಹೋಗಿ ಅವಳ ಮೇಲೆ ಕಲ್ಲು ಬಿಸಾಡಿಯೋ, ಅವಳ ಸೀರೆಯನ್ನೆಳೆದೋ ಪೀಡೆಕೊಡು ತ್ತಿದ್ದರು. ಹುಡುಗರು ಏನು ಮಾಡಿದರೂ ಲಲಿತೆಯು ಒಂದೇ ಒಂದು ಶಬ್ದವಾದರೂ ಎತ್ತುತ್ತಿದ್ದಿಲ್ಲ. ಆದುದರಿಂದ ಕಡೆಗೆ ಬೀದಿ ಪೋಕ ಹುಡುಗರ ಪೀಡೆಯೂ ನಿಂತು ಹೋಯಿತು. ಲಲಿ

ತೆಯು ಎಲ್ಲಿ ತಂಗುವಳು? ಎಲ್ಲಿ ಉಣ್ಣುವಳು? ಎಲ್ಲಿ ತಲೆಬಾಚಿ ಹೂ ಮುಡಿಯುವಳು? ಎಲ್ಲಿಂದ ಹೊಸ ಹೊಸ ಸೀರೆ ಪಡೆಯುವಳೆಂದು ಸರ್ವಸಾಮಾನ್ಯವಾಗಿ ಅವಳನ್ನು ರಸ್ತೆಗಳಲ್ಲಿ ಕಾಣುವವರಾರಿಗೂ ತಿಳಿಯದೆ ಅವರು ಚೋದ್ಯಪಡುತ್ತಿದ್ದರು. ಲಲಿತೆಯಾದರೋ ಒಮ್ಮೆ ತಲೆಯೆಲ್ಲಾ ಬಿಚ್ಚಿಹಾಕಿ ಹರಿದು ಕಂತೆಯಾಗಿ ಧೂಳು ತುಂಬಿದ ವಸ್ತ್ರವುಟ್ಟುಕೊಂಡು ತಿರುಗಾಡುವಳು. ಇನ್ನೊಮ್ಮೆ ಸರಿಯಾಗಿ ತಲೆ. ಬಾಚಿ, ಹೂಮುಡಿದು, ಒಳ್ಳೇ ವಸ್ತ್ರವುಟ್ಟು ಮೆರೆದಾಡುವಳು. ಆಗ ಹಲವರ ಕಣ್ಣು ಆ ಹುಚ್ಚಿಯ ಮೇಲೆ ಬಿದ್ದುದೂ ಉಂಟು. ಆದರೆ ಅವಳು ನಿಂತಲ್ಲಿ ನಿಲ್ಲಳು ಈಗ ಒಂದು ರಸ್ತೆಯಲ್ಲಿದ್ದರೆ ಇನ್ನೊಂದು ಕ್ಷಣ ಇನ್ನೊಂದು ಬೀದಿಯಲ್ಲಿರುವಳು. ಮತ್ತೊಂದು ಕ್ಷಣ ಮತ್ತೊಂದು ಗಲ್ಲಿಯಲ್ಲಿರುವಳು. ತುಟಿಯೆತ್ತಿ ಒಂದು ಶಬ್ದವನ್ನೂ ಯಾರೊಡನೆಯೂ ಆಡಲಾರಳು. ಅವಳು ಮಾಡುತ್ತಿದ್ದ ಒಂದೇ ಕೆಲಸವೆಂದರೆ ಮನೆಗಳ ಹೊರ ಜಗಲಿಗಳಲ್ಲಾಗಲಿ, ರಸ್ತೆ ಬದಿಯಲ್ಲಾಗಲಿ ಚಿಕ್ಕಮಕ್ಕಳನ್ನು ಕಂಡಕೂಡಲೆ ಒಮ್ಮೆಯೇ ಹಿಡಿದೆತ್ತಿ ಮುದ್ದಾಡುವುದು ಅವೆಷ್ಟು ಕೂಗಿದರೂ ಕೇಳದೆ ಮತ್ತೂಮತ್ತೂ ಮುದ್ದಾಡುವುದು. ಮಕ್ಕಳ ಹೆತ್ತವರೋ ರಕ್ಷಕರೋ ಓಡಿಬಂದು ಬೈದು ಭಂಗಿಸಿ ಹೊಡೆಯುವವರೆಗೂ ಬಿಡದೆ ಮುದ್ದಾಡುವದು. ಅವಳನ್ನು ನೋಡಿದೊಡನೆಯೇ ಚಿಕ್ಕಮಕ್ಕಳೆಲ್ಲಾ ಒಳಗೋಡುತ್ತಿದ್ದರು ತಾಯಂದಿರು, ಚಿಕ್ಕ ಕೂಸುಗಳೆಲ್ಲಿಯಾದರೂ ಜಗಲಿಯಲ್ಲಿದ್ದರೆ ಒಳಗೊಯ್ಯುತ್ತಿದ್ದರು. ತಾವು ಹಿಡಕೊಂಡಿದ್ದರೂ ಒಳಗೊಯ್ದು ಬಿಡುತ್ತಿದ್ದರು. ಯಾಕಂದರೆ ತಾಯಂದಿರಾಗಲಿ ಯಾರೇ ಆಗಲಿ ಹಸುಗೂಸುಗಳನ್ನು ಹಿಡಕೊಂಡಿದ್ದಂತೆಯೇ ಲಲಿತೆಯು ಒಂದೇ ಸವನೆ ಓಡಿಬಂದು ಮುದ್ದಾಡಿದುದುಂಟು. ಆದಕ್ಕಾಗಿ ಅನೇಕ ಸಲ ಮನೆಗಂಡಸರಿಂದ ಪೆಟ್ಟುತಿಂದಿದ್ದಳು ಹೀಗಾಗಿ ಲಲಿತೆಯು ಶಿವಪುರದ ಮಕ್ಕಳಿಗೆ 'ಗುಮ್ಮ'ವಾದಳು ಮಕ್ಕಳೇನಾದರೂ ಅತ್ತರೆ ಹೆತ್ತವರಾಗಲಿ, ಚಾಕರಿಯವರಾಗಲಿ "ಭಿಕಾರಿಣಿ ಬಂದಳು ಭಿಕಾರಿಣಿ"! ಇದೋ ಭಿಕಾರಿಣಿಗೆ ಕೊಡುತ್ತೇನೆ ನಿನ್ನನ್ನು ನೋಡು!" ಎಂದು ಬೆದರಿಸುತ್ತಿದ್ದರು. ಆಗ ಎಂತಹ ಅಳುವ ಮಕ್ಕಳಾದರೂ ಒಮ್ಮೆ ಸುಮ್ಮನಾಗುತ್ತಿದ್ದುವು.

—: ಸಂಪೂರ್ಣ :—

ಕಥೆ, ಕಾದಂಬರಿ, ನಾಟಕ, ಚಿತ್ರ, ಪ್ರಬಂಧಾದಿ
ನಾನಾ ಬಗೆಯ ಪುಸ್ತಕಗಳು.

ಕಿರಿಯರಪ್ರಪಂಚದ ಪ್ರಕಟಣೆಗಳು.

ಸ್ವತಂತ್ರ ಜೀವನೋಪಾಯ	0	3	0
ಸಂಶಯ ಪಿಶಾಚಿ	0	10	0
ನಾಡಕತೆಗಳು	0	4	0
ಕುಶಲವ	0	8	0
ಕಾವ್ಯಸಾಮ್ರಾಜ್ಯ	1	8	0
ಮಧುವನ	3	0	0
ಮುಂದಿನ ದೇವರು	0	4	0
ವ್ಯಭಿಚಾರಣಿ ಯಾರು	1	4	0
ಹೆಂಡ್ತಿ ಗಂಡನಾದರೆ	0	4	0
ಪುರುಷ ವಧು	0	4	0
ಸನ್ಯಾಸಿಯು ಸೋಗಿನಲ್ಲಿ	0	12	0
ನಂದಾದೀಪ	1	0	0
ದೇಶಭಕ್ತ	1	8	0
ಪ್ರೇಮವಿಜಯ	1	0	0
ರಂಗಭೂಮಿ	0	10	0
ಸೇವಾಪಥ	0	8	0
ನಾರೀ ಹೃದಯ	I	8	0
ಭಾರತೀಯ ಕಥೆಗಳು	1	12	0
ಪ್ರಕಾಶ	2	8	0
ಮೂರು ಪ್ರಹಸನಗಳು	1	0	0
ಅನ್ನದೇವರು ಮತ್ತಿತರ ಕತೆಗಳು	1	0	0
ಭಾರತದಲ್ಲಿ ಜಾತಿಭೇದ	1	0	0
ವಿಷ್ಣುವಿನ ದಶಾಪರಾಧಗಳು	0	12	0
ಆಕಾಶ ಗಂಗೆ	2	4	0
ಸ್ವಾತಂತ್ರ್ಯ ವೀರ ಸಾವರಕರರು	1	4	0
ಜೀವನ ಸಂಗ್ರಾಮ	1	8	0
ಕದಂಬ	1	4	0
ಕವಿತಾಕಾಮಿನಿ	2	0	0
ಸ್ವರಾಜ್ಯ ವಿಜಯ	0	8	0
ಸಪ್ತಸಾಗರ	0	12	0
ಜಮೀನ್ದಾರ	1	12	0

ಅಂತರಂಗದ ಪ್ರಕಟಣೆಗಳು:

ಬಿರುದಾವಳಿ	0	3	0
ಆ ಸುದ್ದಿ	0	4	0
ಹೈದರಾಬಾದ್ ವಿಜಯ	0	4	0
ಸೆರೆಯಾಳು	0	7	0
ಗಾದೆಯ ಗಾಂಧಿ	0	3	0
ಶಾಂತಿಯ ಮಡಲಿನಲ್ಲಿ	0	3	0
ಬಲಿಪೀಠದಲ್ಲಿ	0	5	0
ಅಗಲಿದ ಅಕ್ಕ ಸರೋಜಿನಿ	0	3	0
ನನ್ನ ಹೆಂಡತಿ	0	3	0
ಪುಣ್ಯಫಲ	0	4	0
ಸುಖದದಾರಿ	0	3	0
ಸುಕಾಂತ	0	3	0
ಪಂಚಮುಖಿ	0	5	0
ಜಾತೀಭೂತಕ್ಕೆ ಬಲಿ	0	3	0
ಜನಸೇವೆಯ ಸೋಗಿನಲ್ಲಿ	0	3	0
ನಾ ಕಂಡ ಅವಳು	0	3	0
ತ್ರಿವೇಣಿ	0	3	0
ನಿಲುವಂಗಿ	0	4	0
ಬಾಡಿಗೆಯ ಮನೆ	0	3	0
ವರ್ತಮಾನಕಾಲದ ನಾಲ್ವರು			
ಮಹಾನುಭಾವರು	0	4	0
ದೇವರ ನಾಮ ಮತ್ತು ಸಾಧನೆ	0	3	0
ಎರಡು ಕತೆಗಳು	0	4	0
ಸರಸ-ವಿಲಾಸ	0	3	0
ಹೃದಯೇಶ್ವರಿ	0	4	0
ವಿವಿಧ ವಿಷಯ ಕೋಶ ಭಾಗ ೧, ೨	0	6	0
ನುಡಿಮುತ್ತುಗಳು ೧, ೨, ೩	0	12	0
ಕುಲವಿಲ್ಲದ ಹೆಣ್ಣು	2	0	0
ತವರು ಮನೆಯಿಂದ	0	4	0
ಭಾಗ್ಯಲಕ್ಷ್ಮಿ	1	4	0
ಯುಗವಾಣಿ	0	8	0
ಸ್ತ್ರೀ ಹೃದಯ	0	4	0
ದ್ವೇಷ	0	3	0
ಎರಡು ಏಕಾಂಕ ನಾಟಕಗಳು	0	4	0
ಪ್ರಜಾಪ್ರಭುತ್ವವನ್ನು ಕುರಿತು	0	8	0

ಕಲಾವಿದನ ದಿನಚರಿ	0	3	0
ಆಧುನಿಕ ಭಾರತ	0	4	0
ಕಾಲವೇ ಬದಲಾಗಿದೆ	0	4	0
ಭಾರತದ ಸಾಹಿತ್ಯ ಕಲೆಗಳು	0	4	0
ಸ್ತ್ರೀಸ್ವಾತಂತ್ರ್ಯ ಬೇಕೆ?	0	4	0
ಹಂಬಲ	0	4	0
ಭಾರತಚಿತ್ರದ ಅಂಚೆಚೀಟಿಗಳು	0	3	0
ತ್ರಿಶೂಲ	0	5	0
ಪುಸ್ತಕಪುರಾಣ	0	4	0
ಹಳ್ಳಿಯಲ್ಲಿ ನಡೆದ ನಾಟಕ	0	3	0
ನೆರೆಯ ಗಾಂಧಾರ	0	3	0
ಮಾತಿನಯುಗದ ಮಹಾಪ್ರಭಾವ	0	3	0
ವಿಜ್ಞಾನದ ಬೆಳವಣಿಗೆ	0	4	0
ಡಾ। ಹರ್ಡೀಕರ್	0	5	0
ತೆಂಗಿನ ತವರು	0	6	0
ಪ್ರಾಯಶ್ಚಿತ್ತ	0	3	0
ಪ್ರಭಾ	0	3	0
ಶವಗಳ ಸಾಗಾಟ	0	12	0
ಸ್ವಪ್ನಲೋಕ	0	6	0
ಮನೆಹೊರಗಿನ ಮಹಾಜೀವಿಗಳು	0	5	0
ಘಂಟಮಾರಾ ೪ಭಾಗಗಳು	2	0	0
ಮಾರ್ಪಾಟ	0	5	0
ಭಾರತದ ರಾಷ್ಟ್ರಗೀತೆ	0	3	0
ನಮ್ಮ ಬಹು ದೊಡ್ಡ ಶತ್ರು	0	4	0
ಕೈಲಾಸ	0	3	0
ಚೌತಿ	0	4	0
ಕತ್ತು ಕೊಯ್ದವರಾರು?	0	6	0
ಸಮಾಜದ ಅಗ್ನಿಕುಂಡ	0	4	0
ಬೆಳ್ಳಿಹಬ್ಬ	0	4	0
ಉಷಾ	0	4	0
ವಿಧಿಲೀಲೆ	0	4	0
ಪರಮಾಣು ಪ್ರಪಂಚ	0	4	0
ನೀತಿ ವಿನೋದ ಕತೆಗಳು	0	12	0
ಸಾಹಸ ಭೀಮ ವಿಜಯ	0	8	0
ಭಾರತದ ಗುರುಕುಲ	0	6	0
ಲತ್ತಪಗಡೆ	0	6	0

ಸೇವಾಪಥ	0	8	0
ಭರತೇಶ ದಿಗ್ವಿಜಯ	0	8	0
ಮನೋಪದೇಶ	0	8	0
ಜೀವನ ಕಲೆ	0	10	0
ಪ್ರತಿಜ್ಞಾ ಪೂರ್ತಿ	0	12	0
ಮಿತ ಸಂತತಿ	0	6	0
ಗುಪ್ತರೋಗ ನಿವಾರಣೆ	0	8	0
ಸೌಂದರ್ಯ	0	5	0
ಸುಧಾ	0	8	0
ವಸಂತಕಾಲ	0	6	0
ನವೀನ ನಾಟಕಗಳು	0	7	0
ಪರ್ಲ್ ಎಸ್. ಬಕ್	0	7	0

ಇತರ ಪುಸ್ತಕಗಳು

ಮನೆಮದ್ದು	2	8	0
ನೆನಪಿಗಾಗಿ	2	0	0
ಗೀತೆಯ ಕೈಗನ್ನಡಿ	0	12	0
ಸುಲಭದಲ್ಲಿ ಇಂಗ್ಲಿಷ್	2	0	0
ಸರಸ್ವತಿ	0	12	0
ಪ್ರತೀಕಾರ	0	8	0
ಪ್ರೇಮ ಪ್ರವಾಹ	0	8	0
ಮುಂಗುಳು	0	5	6
ವತ್ಸಲಾ	0	8	0
ಶಂಬುಕ ವಧೆ	0	2	0
ವೈಯುಕ್ತಿಕ ಅರೋಗ್ಯ	0	2	0
ಶಂಬುಕವಧೆ	0	2	0
ಆದರ್ಶ ಅರೋಗ್ಯ ಖಾತೆ	0	2	0
ಚಿಗುರು	0	8	0
ಲೋಪಾಮುದ್ರೆ	0	8	0
ವ್ಯವಹಾರಜ್ಞಾನದರ್ಪಣ	1	8	0

ಕೆಟಲಾಗಿಗೆ ಬರೆಯಿರಿ

ನವಭಾರತ ಬುಕ್ ಡಿಪೊ, ಉಡುಪಿ.